
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

30 ಡಿಸೆಂಬರ್ 2015 ಪುಟ 20 ರೂ. 15/-

ಪ್ರಶಸ್ತಿ ವಾಪಸಾತಿ
ದುಡ್ಡು ಹಿಂದೆ ಕೊಟ್ಟಿದ್ದಕ್ಕೆ ರಸೀದಿ ಉಂಟಾ?



ಅಸಹಿಷ್ಣು ಬೆಂಕಿಗೆ ಮಸ್ತಾನಿ ಮದ್ದು


ರವಾಡ: ಛಬ್ಬಿ ವಿಕೆಟ್ ಉದುರಿದ್ದು ಯಾಕೆ?

ರಿಷತ್ ಚುನಾವಣೆ

ಮಂಡ್ಯ: ಗೌಡರ 'ಮಾಸ್ಟರ್ ಪ್ಲ್ಯಾನ್' ಡಿಕೆಶಿ 'ಗಪ್‌ಚುಪ್' ಗೇಮ್

ಡಗು: ಸುಜಾ ಕುಶಾಲಪ್ಪನಿಂದಾಗಿ ಬಿಜೆಪಿಗೆ ಮುಖಭಂಗ


ನಿಸರ್ಗವೂ ಶೋಷಿತರನ್ನೇ ಹೆಚ್ಚು ಗುರಿ ಮಾಡುತ್ತದೆಯೆ



2004ರಲ್ಲಿ ಸುನಾಮಿ ಅಪ್ಪಳಿಸಿದ ದಿನದಂದು ನಾವು ಶಿವಮೊಗ್ಗದಲ್ಲಿದ್ದೆವು. ಆ ದಿನ ಸಂಘಪರಿವಾರದ ಕೋಮುವಾದಿ ದತ್ತಜಯಂತಿಯ ಕಾರ್ಯಕ್ರಮಕ್ಕೆ ಪರ್ಯಾಯವಾಗಿ ಅಲ್ಲಿ ನಮ್ಮ ಕಾರ್ಯಕ್ರಮವಿತ್ತು. ಸಮಾವೇಶ ಮುಗಿಸಿ ಬೆಂಗಳೂರಿಗೆ ಬಂದು ಟಿವಿ ನೋಡಿದವರನ್ನು ಗಾಬರಿಗೊಳಿಸುವಂತೆ ಬೃಹತ್ ಅಲೆಗಳ ಚಿತ್ರ ಪರದೆಯ ಮೇಲೆ ಕಾಣುತ್ತಿತ್ತು. ನಂತರದ ದಿನಗಳಲ್ಲಿ ಪರಿಹಾರದ ಕೆಲಸಕ್ಕೆ ಕೈಜೋಡಿಸಲು ನಮ್ಮಿಂದಾದ್ದನ್ನು ಮಾಡುವ ಪ್ರಯತ್ನ ನಡೆಯಿತು. ನಮ್ಮೊಂದಿಗಿದ್ದ ಪೆಡೆಸ್ಟ್ರಿಯನ್ ಪಿಕ್ಚರ್ಸ್‌ನ ಸ್ನೇಹಿತರು ತಮಿಳುನಾಡಿಗೇ ಹೋದರು. ಅವರು ಮರಳಿ ಬಂದದ್ದು ಕೆಲವು ತಿಂಗಳ ನಂತರ. ಸುನಾಮಿಯು ಅವರನ್ನು ತಮಿಳುನಾಡಿಗೆ ಗಂಟು ಹಾಕಿತ್ತು, ಅವರು ಹೇಳಿದ ಕೆಲವು ಸಂಗತಿಗಳು ಕುತೂಹಲಕರವಾಗಿತ್ತು, ಆ ನಂತರ ಅದರ ಬಗ್ಗೆ ಸಾಕ್ಷ್ಯಚಿತ್ರವೂ ಬಂದಿತು.

ಅವರ ಪ್ರಕಾರ ಎರಡು ಸುನಾಮಿ ತಮಿಳುನಾಡನ್ನು ಅಪ್ಪಳಿಸಿತ್ತು. ಒಂದು, ನಿಸರ್ಗವು ತಂದ ಸುನಾಮಿ. ಎರಡನೆಯದ್ದು, ಪರಿಹಾರದ ಸುನಾಮಿ. ಪ್ರಪಂಚದ ಬೇರೆಬೇರೆ ಭಾಗಗಳಿಂದ ಪರಿಹಾರ ಸಾಮಗ್ರಿಗಳು ಹರಿದುಬಂದಿತು. ಅವೆಲ್ಲವೂ ಎಷ್ಟರಮಟ್ಟಿಗೆ ಬದುಕು ಕಟ್ಟಿಕೊಳ್ಳಲು ಸಹಾಯ ಮಾಡಿತೋ ಗೊತ್ತಿಲ್ಲ, ಆದರೆ, ಪರಿಹಾರವೂ ಭಾರೀ ಪ್ರಮಾಣದಲ್ಲಿ ಬಂದಿದ್ದಂತೂ ನಿಜ. ಇದರಲ್ಲಿ ಎದ್ದು ಕಾಣುವ ಒಂದು ಸಂಗತಿ ಇತ್ತು, ಅದೇನೆಂದರೆ, ಹೆಚ್ಚಿನ ಪರಿಹಾರವು ತಲುಪಿದ್ದು ಮೀನುಗಾರ ಸಮುದಾಯಕ್ಕೆ. ಹೆಚ್ಚು ತೊಂದರೆಗೊಳಗಾದವರೂ ಅವರೇ ಆಗಿದ್ದರು. ಅವರ ಬದುಕಿಗಾಧಾರವಾಗಿದ್ದ ದೋಣಿಗಳೂ ಸೇರಿದಂತೆ ಎಲ್ಲವೂ ಕೊಚ್ಚಿ ಹೋಗಿತ್ತು, ಪ್ರಾಣಹಾನಿಯೂ ಸಾಕಷ್ಟು ಆಗಿತ್ತು. ಆದರೆ, ಗಣನೀಯ ಸಂಖ್ಯೆಯಲ್ಲಿ ಬದುಕು ಕಳೆದುಕೊಂಡಿದ್ದ ದಲಿತ ಸಮುದಾಯವೂ ಅಲ್ಲೇ ಇತ್ತು. ಅವರು ಮೊದಲನೆಯ ಸುನಾಮಿಯಿಂದ ತೊಂದರೆ ಗೊಳಗಾಗಿದ್ದರು. ಎರಡನೆಯ ಸುನಾಮಿಯು ತಾಕಲಿಲ್ಲ.

ಸರ್ಕಾರೀ ದಾಖಲೆಗಳಲ್ಲೂ ಆಸ್ತಿಪಾಸ್ತಿ ಇದ್ದವರಿಗೆ ಹೆಚ್ಚಿನ ಪರಿಹಾರ, ಇಲ್ಲದಿದ್ದರೆ ನಾಮಕಾವಸ್ತೆ ಪರಿಹಾರ ಕೊಡುವುದು ನಡೆಯಿತು. ತಾವಿದ್ದ ಗುಡಿಸಲೂ ತಮ್ಮ ಹೆಸರಿನಲ್ಲಿ ಇರದಿದ್ದವರಿಗೆ? ಅಂಥವರಿಗೆ ಏನೂ ಇಲ್ಲ. ಇದರ ಜೊತೆಗೆ ಸಮಾಜದಲ್ಲೇ ಬೇರು ಬಿಟ್ಟಿರುವ ಜಾತಿ ತಾರತಮ್ಯದ ಕಾರಣದಿಂದ, ಪರಿಹಾರ ವಿತರಣೆಯಲ್ಲೂ ಅನ್ಯಾಯವಾಯಿತು. ತಂದೆ-ತಾಯಂದಿರನ್ನು ಕಳೆದುಕೊಂಡ ದಲಿತ ಹಾಗೂ ಆದಿವಾಸಿ ಮಕ್ಕಳೂ ಬೀದಿಗೆ ಬದ್ದಿದ್ದರು. ಅಂತಹ ಮಕ್ಕಳಿಗಾಗಿ ಸಾಕ್ಷ್ಯಚಿತ್ರ ನಿರ್ಮಾಣದಲ್ಲಿ ತೊಡಗಿಕೊಂಡಿದ್ದ ಗೆಳೆಯರೇ 'ವಾನವಿಲ್' (ಕಾಮನಬಿಲ್ಲು) ಎಂಬ ತಾಣವನ್ನೂ ಸ್ಥಾಪಿಸಿದರು. ಆ ಮಕ್ಕಳ ಬದುಕನ್ನು ಹಸನಾಗಿಸಲು ಶ್ರಮಿಸಿದರು.



ನಿಸರ್ಗವು ವಿನಾಶಕಾರಿಯಾಗಿ ನಿಂತಾಗ ಅದು ಭೇದವೆಣಿಸದೇ ಎಲ್ಲರನ್ನೂ ಸಮಾನವಾಗಿ ಆವರಿಸಿ ಕೊಲ್ಲುತ್ತದೆ ಎಂಬ ಮಾತಿದೆ, ಆದರೆ, ಅದು ಸಂಪೂರ್ಣ ವಾಸ್ತವವಲ್ಲ, ಏಕೆಂದರೆ, ನಗರಗಳಲ್ಲಿ ಪ್ರವಾಹದ ನೀರೂ ಹೆಚ್ಚು ನುಗ್ಗುವುದು ತಗ್ಗು ಪ್ರದೇಶಗಳಿಗೇನೇ ಮತ್ತು ಅಂಥಲ್ಲಿ ಹೆಚ್ಚಾಗಿ ವಾಸಿಸುವವರು ಬಡವರು. ನಂತರದಲ್ಲಿ ಸರ್ಕಾರದಿಂದ ನೀಡಲಾಗುವ ಪರಿಹಾರವನ್ನೂ ಪಡೆದು ಕೊಳ್ಳಲಾಗದೇ ಇರುವವರೂ ಬಡವರು.

ತಮಿಳುನಾಡಿನಲ್ಲಿ ಈಚೆಗೆ ಉಂಟಾದ ಜಲಪ್ರಳಯದ ಕುರಿತಾಗಿ ಬಂದಿರುವ ಕೆಲವು ವರದಿಗಳು ಸಹ ಇಂತಹುದೇ ಸಂಗತಿಗಳನ್ನು ಮುಂದಿಡುತ್ತವೆ. ನವೆಂಬರ್ 9ರಂದು ಕಡಲೂರು ಜಿಲ್ಲೆಯಲ್ಲಿ ಹಬ್ಬಿದ ಪ್ರವಾಹದಲ್ಲಿ ದಲಿತ ಸಮುದಾಯಗಳ ಮನೆಗಳು ಹೆಚ್ಚಾಗಿ ಕೊಚ್ಚಿಹೋಗಿವೆ. ಕೊಚ್ಚಿ ಹೋದ 1276 ಮನೆಗಳೂ ಬಡ ದಲಿತರವೇ ಆಗಿದ್ದು, ಅವರಿಗೆ ಪರಿಹಾರ ಸಿಕ್ಕಿಲ್ಲ, ಪುನರ್ವಸತಿ ಮತ್ತು ಪರಿಹಾರದಲ್ಲಿ ತಮಗೆ ಅನ್ಯಾಯವಾಗಿದೆ, ತಾರತಮ್ಯವೆಸಗ ಲಾಗಿದೆ ಎಂಬುದು ಕಡಲೂರು ಜಿಲ್ಲೆಯ ದಲಿತರಲ್ಲಿ ವ್ಯಾಪಕವಾಗಿರುವ ಅಭಿಪ್ರಾಯವಾಗಿದೆ ಎಂದು ಸಮೀಕ್ಷೆ ನಡೆಸಿದ ಸಂಸ್ಥೆಗಳು ಹೇಳಿವೆ. ಪರಿಹಾರ ಶಿಬಿರಗಳು ಪ್ರಬಲ ಜಾತಿಗಳೇ ಹೆಚ್ಚಾಗಿರುವ ಹಳ್ಳಿಗಳಲ್ಲಿ ಸ್ಥಾಪನೆಯಾದಾಗ, ಅವುಗಳಲ್ಲಿ ತಮಗೆ ಅವಕಾಶ ನೀಡುತ್ತಿಲ್ಲವೆಂದು ದಲಿತರು ಹೇಳಿದ್ದಾರೆ. ರಾಷ್ಟ್ರೀಯ ದಲಿತ ಕಾವಲು (National Dalit watch) ಎಂಬ ಸಂಸ್ಥೆಯು ಈ ಸಮೀಕ್ಷೆಯನ್ನು ನಡೆಸಿದೆ. ನೇಪಾಳದ ಭೂಕಂಪದ ಸಂದರ್ಭದಲ್ಲಿ ಇಂತಹದೊಂದು ಸಮೀಕ್ಷೆ ನಡೆಸಿದ್ದ ಐಡಿಎಸ್ಎನ್ ಎಂಬ ಸಂಸ್ಥೆಯೂ ಈ ರೀತಿಯ ಅಂಶಗಳನ್ನು ಹೊರಗೆಡಹಿತ್ತು.

ಕಡಲೂರು ಜಿಲ್ಲೆಯಲ್ಲಿ ದಲಿತ
ತೊಂದರೆಗೊಳಗಾಗಲು ಕಾರಣವೇನೆಂದರೆ
ನದಿಗೆ ಸಮೀಪದಲ್ಲಿ ವಾಸಿಸುತ್ತಿದ್ದರು
ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿ
ಮತ್ತು ಗರಿಗಳಿಂದ ಕಟ್ಟಿಕೊಂಡಿದ್ದ ಮನೆಗ
ಸಮಸ್ಯೆ ಅವರಿಗೆ ಹೆಚ್ಚಾಗಿಯೇ ಆಗಿದೆ
ತೀವ್ರವಾಗಿ ಕುಡಿಯುವ ನೀರು ಸಿಗುವು
ದಾಗಲೂ ಕೊಂಗರಾಯನಪಾಳ್ಯ ಎಂಬ ಗ್ರಾ
ಜಾತಿ ಜನರು ದಲಿತರು ಬಂದು ಶುದ್ಧ
ನೀರು ತೆಗೆದುಕೊಂಡು ಹೋಗದಂತೆ
ವರದಿಗಳಿವೆ. ಚೆನ್ನೈ ಸೇರಿದಂತೆ ಇನ
ಜಾತಿ-ಧರ್ಮಗಳ ಭೇದವಿಲ್ಲದೇ ಜನ
ನೆರವಾದರೆಂಬ ವರದಿಗಳೂ ಇವೆ. ಆದ
ಜಿಲ್ಲೆಯಲ್ಲಿ ಮಾತ್ರ ಪರಿಸ್ಥಿತಿ ಭಿನ್ನವಾಗಿತ್ತು, ಇ
ಜಿಲ್ಲೆಯಾಗಿದ್ದು, ಅಲ್ಲಿ ದಲಿತರೇ ಹೆಚ್ಚಾ
ಹಳ್ಳಿಗಳೂ ಈ ಹಿಂದೆಯೂ ಮೂಲಸೌ
ವಂಚಿತವಾಗಿತ್ತು, ವಡುಕಾತಿರುಮೇಡು,
ಕದುವೆಟ್ಟಿ, ವರಗುರುಪೇಟ್ಟೈ ಅಣ್ಣಾವಲ್ಲಿ ಎ
ಸಂಪೂರ್ಣ ನಾಶ ಸಂಭವಿಸಿದ್ದರೂ, ಅವ
ಬೇರೆ ಕಡೆಗೆ ಸಾಗಿಸಲಾಗಿರಲಿಲ್ಲ, ಏಕೆಂದರ
ಆ ಊರಿಗೆ ಸೂಕ್ತವಾದ ರಸ್ತೆಯಿರಲಿಲ್ಲ, ಈಗ
ತಂಡಗಳು ಅಲ್ಲಿಗೆ ಕೂಡಲೇ ಹೋಗಲಾಗಲಿ
ಕುಡಿಯುವ ನೀರಿಗಾಗಿ ಒದ್ದಾಡುತ್ತಿದ್ದ ಗ್ರಾ
ಪರಿಸ್ಥಿತಿ ಮತ್ತಷ್ಟು ಭೀಕರವಾಗಿತ್ತು.

ಜಿಲ್ಲಾಡಳಿತವು ನಂತರವೂ ಪರಿಹಾರ ಕಾ
ಕೈಗೊಂಡಿದ್ದದ್ದು ತನಗೆ ಸುಲಭವಾಗಿ
ಸಾಧ್ಯವಾಗುವ ಹಳ್ಳಿಗಳಲ್ಲಿ ಮಾತ್ರ. ಇವು
ಮೇಲ್ಜಾತಿ ಜನರೇ ಹೆಚ್ಚಿರುತ್ತಿದ್ದ ಹಳ
ಅಲಮೇಲು ಮಂಗಾಪುರ ಎಂಬ ಗ್ರಾಮದ
ಶಿಬಿರವನ್ನು ಈ ಸಂದರ್ಭದಲ್ಲಿ ಆಯೋಜಿಸ
ಸಮೀಪದಲ್ಲಿ ವಾಸಿಸುತ್ತಿದ್ದ ದಲಿತರು ಭಯದ
ಅಲ್ಲಿಗೆ ಹೋಗಲಿಲ್ಲ.

ನಿಸರ್ಗದ ವೈಪರೀತ್ಯಗಳಿಗೂ ಹೆಚ್ಚಾಗಿ
ವುದು, ಸುರಕ್ಷಿತವಾದ ತಾಣಗಳಲ್ಲಿ ವಾಸಿ
ಗಳನ್ನೇ ಶೋಷಿತರು ಹೆಚ್ಚಾಗಿ ಪಡೆದುಕೊ
ಎಂಬ ಕಾರಣಕ್ಕೆ ಆಗಿರುತ್ತದೆ.

ಡಬ್ಲ್ಯೂಟಿಓ, ಗ್ಯಾಟ್ಸ್ ಒಪ್ಪಂದಕ್ಕೆ ದೆಹಲಿಯಲ್ಲಿ ಭಾರೀ ಪ್ರತಿರೊ

ಭಾರತದ ಪಾಲಿಗೆ ಕರಾಳ ಅಧ್ಯಾಯವಾಗಿ ಬರುತ್ತಿರುವ ವಿಶ್ವ ವಾಣಿಜ್ಯ ಸಂಸ್ಥೆಯ ಗ್ಯಾಟ್ಸ್ ಒಪ್ಪಂದಕ್ಕೆ ಸಹಿ ಹಾಕದಂತೆ ಶಿಕ್ಷಣದ ಹಕ್ಕಿಗಾಗಿ ಅಖಿಲ ಭಾರತ ವೇದಿಕೆಯ ನೇತೃತ್ವದಲ್ಲಿ ದೆಹಲಿಯಲ್ಲಿ ಭಾರೀ ಪ್ರತಿರೋಧ ವ್ಯಕ್ತವಾಯಿತು.

ಭಾರತದ ಉನ್ನತ ಶಿಕ್ಷಣವನ್ನು ಹರಾಜು ಹಾಕುತ್ತಿರುವ ಕೇಂದ್ರ ಸರ್ಕಾರದ ಕ್ರಮವನ್ನು ವಿರೋಧಿಸಿ ಪ್ರತಿರೋಧ ಸಪ್ತಾಹ ಡಿಸೆಂಬರ್ 7 ರಿಂದ 14ರವರೆಗೆ ದೆಹಲಿಯ ಜಂತರ್‌ಮಂತರ್‌ನಲ್ಲಿ ನಿರಂತರವಾಗಿ 8 ದಿನಗಳ ಕಾಲ ಪರಿಣಾಮಕಾರಿಯಾಗಿ ನಡೆಯಿತು.

ಡಿಸೆಂಬರ್ 7 ರಂದು ಆರಂಭವಾದ ಪ್ರತಿರೋಧ ಸಪ್ತಾಹಕ್ಕೆ ಎಐಎಸ್ಎಫ್ ಮತ್ತು ಡಿಸೆಂಬರ್ 8ರಂದು ಎಐಎಸ್ಎ ವಿದ್ಯಾರ್ಥಿಗಳು ಬೆಂಬಲ ನೀಡಿ ಧರಣಿಯಲ್ಲಿ ಭಾಗವಹಿಸಿದ್ದರು. ಡಿಸೆಂಬರ್ 9 ರಂದು ಶಿಕ್ಷಣದ ಹಕ್ಕಿಗಾಗಿ ಅಖಿಲ ಭಾರತ ವೇದಿಕೆಯ ಸುಮಾರು 69 ಸದಸ್ಯ ಸಂಘಟನೆಗಳು ಭಾಗವಹಿಸಿ ದೊಡ್ಡ ಮಟ್ಟದಲ್ಲಿ ಪ್ರತಿರೋಧ ತೋರಿದವು. ಸಮಾನ ಶಿಕ್ಷಣಕ್ಕಾಗಿ ಜನಾಂದೋಲನ ಕರ್ನಾಟಕ, ಕರ್ನಾಟಕ ವಿದ್ಯಾರ್ಥಿ ಸಂಘಟನೆ, ವಿಜ್ಞಾನ ಕೇಂದ್ರ ತುಮಕೂರು, ಡಮರುಗ ಸಂಪನ್ಮೂಲ ಕೇಂದ್ರ ತುಮಕೂರು, ಡೆಮೊಕ್ರಟಿಕ್ ಟೀಚರ್ಸ್ ಫೆಡರೇಷನ್, ತೆಲಂಗಾಣ ವಿದ್ಯಾರ್ಥಿ ವೇದಿಕೆ, ಇನ್‌ಕ್ವಿಲಾಬ ಕೇಂದ್ರ-ಪಂಜಾಬ್, ಲೋಕಾಯತ್ ಪುಣೆ, ಸಮಾಜವಾದಿ ಜನಪರಿಷತ್, ಶಿಕ್ಷಣ ಉಳಿಸಿ ಸಮಿತಿ ತೆಲಂಗಾಣ, ತಮಿಳುನಾಡು ಪ್ಲಾಟ್‌ಫಾರಂ ಫಾರ್ ಕಾಮನ್ ಸ್ಕೂಲ್ ಸಿಸ್ಟಮ್, ಶಿಕ್ಷಾ ಅಧಿಕಾರ್ ಮಂಚ್- ಭೋಪಾಲ್, ಒಡಿಸ್ಸಾ, ಮಹಾರಾಷ್ಟ್ರ ಸೇರಿದಂತೆ ಹಲವು ಸಂಘಟನೆಗಳು ಭಾಗವಹಿಸಿ ಸಾವಿರಾರು ಜನ ಶಿಕ್ಷಣಪ್ರೇಮಿಗಳು ತಮ್ಮ ಪ್ರತಿಭಟನೆ ದಾಖಲಿಸಿದರು.



ನ್ಯಾಯಮೂರ್ತಿ ಪ್ರೊ.ರಾಜೇಂದ್ರ ಸಾಚಾರ್, ಡಾ.ಆನಂದ್ ತೇಲ್‌ತುಂಬ್ಡೆ ಪ್ರೊ. ಪ್ರಭಾತ್ ಪಟ್ನಾಯಕ್, ಪ್ರೊ. ಅನಿಲ್ ಸದ್ಗೋಪಾಲ್, ಪ್ರೊ. ಮಧು ಪ್ರಸಾದ್, ಪ್ರೊ.ಕೆ.ಎಂ ಶ್ರೀಮಲಿ ತರಹದ ಗಣ್ಯರು ಅಂದು ಹಾಜರಿದ್ದು ಹೋರಾಟದೊಂದಿಗೆ ದನಿಗೂಡಿಸಿದರು.

ಕರ್ನಾಟಕದಿಂದ 200 ಪ್ರತಿನಿಧಿಗಳು ಭಾಗವಹಿಸಿ ದೆಹಲಿಯ ಪಟೇಲ್ ವೃತ್ತದಿಂದ ಮೆರವಣಿಗೆ ಮೂಲಕ ಜಂತರ್‌ಮಂತರ್ ತಲುಪಿದರು. ಶಿಕ್ಷಣದ ವ್ಯಾಪಾರೀಕರಣ ಬೇಡವೇ ಬೇಡ, ಡಬ್ಲ್ಯೂಟಿಒ ಗ್ಯಾಟ್ಸ್ ಒಪ್ಪಂದವನ್ನು ವಿರೋಧಿಸೋಣ, ಸಮಾನ ಶಿಕ್ಷಣ ನೀತಿ ಜಾರಿಯಾಗಲಿ, ಸಮಾನ ಶಿಕ್ಷಣ ನಮ್ಮ ಹಕ್ಕು ಎಂಬಿತ್ಯಾದಿ ಘೋಷಣೆಗಳನ್ನು ಕೂಗುವ ಮೂಲಕ ಗಮನ ಸೆಳೆದರು.

ಕರ್ನಾಟಕವನ್ನು ಪ್ರತಿನಿಧಿಸಿ ಸಮಾನ ಶಿಕ್ಷಣಕ್ಕಾಗಿ ಜನಾಂದೋಲನದ ಸುರೇಶ್ ದೇವರಹೊಸಹಳ್ಳಿರವರು ಮಾತನಾಡಿದರು. ಸಮಾನ ಶಿಕ್ಷಣ ಪ್ರತಿಯೊಬ್ಬರ ಹಕ್ಕಾಗಿದ್ದು ಇದನ್ನು ವ್ಯಾಪಾರೀಕರಿಸುವುದು ಸಂವಿಧಾನ ವಿರೋಧಿ ಯಾದದ್ದು ಹಾಗಾಗಿ ಗ್ಯಾಟ್ಸ್ ಒಪ್ಪಂದ ರದ್ದಾಗಬೇಕೆಂದು ಆಗ್ರಹಿಸಿದರು. ಸರ್ಕಾರ ಸಾರ್ವಜನಿಕ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಿ ಸರ್ಕಾರಿ ಶಾಲಾ-ಕಾಲೇಜುಗಳನ್ನು ಉನ್ನತೀಕರಿಸಿಬೇಕೆಂದು ಒತ್ತಾಯಿಸಿದರು. ಸಮಾನ ಶಿಕ್ಷಣ ಜಾರಿಯಾಗುವವರೆಗೂ ಶಿಕ್ಷಣದ ಹಕ್ಕಿಗಾಗಿ ಅಖಿಲ ಭಾರತದ ವೇದಿಕೆಯ ಹೋರಾಟದೊಂದಿಗೆ ಹೆಜ್ಜೆ ಹಾಕುವುದಾಗಿ ಭರವಸೆ ನೀಡಿದರು.

ತುಮಕೂರು ವಿಜ್ಞಾನ ಕೇಂದ್ರದ ರಾ
ಮಾತನಾಡಿ, ವಿಶ್ವ ವಾಣಿಜ್ಯ ಸಂಸ್ಥೆ
ದರೋಡೆಯನ್ನು ವಿರೋಧಿಸಲು ಎಲ್ಲಾ
ಒಂದಾಗಬೇಕು, ನಾವು ಕರ್ನಾಟಕದ
ಚಳವಳಿಗಳ ಪ್ರತಿನಿಧಿಗಳಾಗಿದ್ದು ಸಮ
ಹೋರಾಟದಲ್ಲಿ ಸಂಪೂರ್ಣವಾಗಿ ತೊಡಗಿ
ಘೋಷಿಸಿದರು. ಶಿಕ್ಷಣದ ಹಕ್ಕಿಗಾಗಿ ಅ
ವೇದಿಕೆಯ ಸಹಭಾಗಿತ್ವದಲ್ಲಿ ನಾವು ಈಗಾ
ಹೋರಾಟ-ಕಾರ್ಯಕ್ರಮಗಳನ್ನು ಹ
ಶಿಕ್ಷಕರು-ವಿದ್ಯಾರ್ಥಿಗಳು-ಉಪನ್ಯಾಸಕ
ಪಡೆದುಕೊಳ್ಳಲು ಯಶಸ್ವಿಯಾಗಿದ್ದೇವೆ. ಈ
ದೊಡ್ಡ ರೀತಿಯಲ್ಲಿ ಮುಂದುವರೆಸುತ್ತೇವೆಂ
ಶಿಕ್ಷಣದ ವ್ಯಾಪಾರೀಕರಣ ನಿಲ್ಲಲಿ, ಗ್ಯಾಟ್ಸ್ ಒ
ಎಂಬ ಘೋಷಣೆಗಳನ್ನು ಕೂಗಿದರು.

ಡಿಸೆಂಬರ್ 10 ರಂದು ದೆಹಲಿಯ
ಪ್ರತಿಭಟನೆಯ ಜವಾಬ್ದಾರಿ ತೆಗೆದುಕೊಂ
ಸಹ ಕರ್ನಾಟದ ಸ.ಶಿ.ಜ ಮತ್ತು ಕವಿಸಂ
ಧರಣಿಯಲ್ಲಿ ಭಾಗವಹಿಸಿದ್ದರು. ಸಮಾ
ಜನಾಂದೋಲನದ ಪ್ರೊ. ಪಂಡಿತಾರಾಧ್ಯ ಅ
ಹಕ್ಕಿಗಾಗಿ ಅಖಿಲ ಭಾರತ ವೇದಿಕೆ ಪ್ರಕ
ವ್ಯಾಪಾರ ಸಂಘಟನ್ ಸಂಜೋತಾ ಯಾ
ಎಂಬ ಪುಸ್ತಕವನ್ನು ಬಿಡುಗಡೆ ಮಾಡಿ ವ

ಅಂದು "ಬಹುತ್ವ ಮತ್ತು ಸಾಮಾ
ವಿಷಯದ ಕುರಿತು ಇಡೀ ದಿನ ಚ
ಸಂವಾದಗಳು ನಡೆದವು. ಹಲವು ವಿದ
ಯುವಜನ ಸಂಘಟನೆಯ ಪ್ರತಿನಿಧಿಗಳು ವ
ಕರ್ನಾಟಕ ವಿದ್ಯಾರ್ಥಿ ಸಂಘಟನೆಯ
ಉತ್ಸಾಹದಿಂದ ಘೋಷಣೆಗಳನ್ನು ಕೂಗು
ಹೋರಾಟದ ಹಾಡುಗಳನ್ನು ಹಾಡುವ ಮೂ
ಪ್ರತಿರೋಧ ತೋರಿದರು.


■ ಮುತ್ತು

ಜಾಪ್ರಭುತ್ವಕ್ಕೆ ಮತ್ತು ದಮನಿತರಿಗೆ ಅನ್ಯಾಯ ಮಾಡುವ ತೀರ್ಪು

ಳೆದ ವಾರ ಸುಪ್ರೀಂಕೋರ್ಟ್ ಮುಖ್ಯವಾದ ಚ್ಚು ಮೂಡಿಸುವ ತೀರ್ಪೊಂದನ್ನು ನೀಡಿದೆ. ಣ ರಾಜ್ಯಕ್ಕೆ ಸಂಬಂಧಿಸಿದ ಆ ತೀರ್ಪಿನಲ್ಲಿ ೋರ್ಟ್‌ನ ಇಬ್ಬರು ನ್ಯಾಯಾಧೀಶರು ಗ್ರಾಮ ತಿ ಚುನಾವಣೆಯಲ್ಲಿ ಸ್ಪರ್ಧಿಸಲು ಕನಿಷ್ಠ ಐದನೆ ಗೂ ಓದಿರಬೇಕು, ಮನೆಯಲ್ಲಿ ಶೌಚಾಲಯ ಾಗಿ ಇರಬೇಕು, ಅಭ್ಯರ್ಥಿಯು ಯಾವುದೇ ಕೃಷಿ ಬಾಕಿ ಇಟ್ಟುಕೊಂಡಿರಬಾರದು ಎಂದೆಲ್ಲ ನ್ನು ಹಾಕಿದ್ದಾರೆ. "ವಿದ್ಯೆ ಮಾತ್ರ ಮನುಷ್ಯನಿಗೆ ದ್ದು ಯಾವುದು, ತಪ್ಪು ಯಾವುದು, ಒಳ್ಳೆಯದು , ಕೆಟ್ಟದ್ದು ಯಾವುದು ಎಂದು ಅರಿಯಲು ನೀಡುತ್ತದೆ" ಎಂದು ಅಭಿಪ್ರಾಯಪಟ್ಟಿರುವ ಧೀಶರು "ಜನರು ತಮ್ಮ ಮನೆಯಲ್ಲಿ ಯವನ್ನು ಕಟ್ಟಿಸದಿರುವುದಕ್ಕೆ ಕಾರಣ ಅವರ ್ಯ ಬದಲಾಗಿ ಇಚ್ಛಾಶಕ್ತಿ ಇಲ್ಲದಿರುವುದು" ಸ್ಪಷ್ಟಪಡಿಸಿದ್ದಾರೆ.

ನಿತ್ತೆಂದರೆ ಹಲವು ತಿಂಗಳುಗಳ ಹಿಂದೆ ಹರಿಯಾಣ ತನ್ನ ಪಂಚಾಯತಿ ಕಾಯ್ದೆಗೆ ತಿದ್ದುಪಡಿಗಳನ್ನು ಆ ತಿದ್ದುಪಡಿಗಳು ಜನವಿರೋಧಿಯಾಗಿವೆ ಎಂದು ಶ್ನಿಸಿ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಯಾಲಯ ಈಗ ಅವರ ಅರ್ಜಿಯನ್ನು ತಿರಸ್ಕರಿಸಿ ಗಳನ್ನು ಎತ್ತಿಹಿಡಿದಿದೆ. ಆ ತಿದ್ದುಪಡಿಗಳಲ್ಲಿ ದದ್ದು ವಿದ್ಯಾರ್ಹತೆಗೆ ಸಂಬಂಧಿಸಿದ್ದು. ಹೊಸ ಪ್ರಕಾರ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ದಲಿತ ಮಹಿಳೆ ಕನಿಷ್ಠ ಐದನೆ ತರಗತಿ, ರುಷ ಮತ್ತು ಸಾಮಾನ್ಯ ಕ್ಯಾಟಗರಿಗೆ ಸೇರಿದ ್ಸ್ಕೂಲ್‌ತನಕ ಮತ್ತು ಸಾಮಾನ್ಯ ಕ್ಯಾಟಗರಿಯ ಪಿಯುಸಿತನಕ ಓದಿರಬೇಕು. ಅದನ್ನು ುವ ಸುಪ್ರೀಂಕೋರ್ಟ್ ತನ್ನ ಈ ತೀರ್ಪಿನಿಂದಾಗಿ ಜಾತಿಗಳ ಶೇ. 68 ಮಹಿಳೆಯರನ್ನು, ಪರಿಶಿಷ್ಟ ಶೇ 41 ಪುರುಷರನ್ನು ಮತ್ತು ರಾಜ್ಯದ ಶೇ. ಹಿಳೆಯರನ್ನು ಗ್ರಾಮ ಪಂಚಾಯತಿ ಚುನಾವಣಾ ೀ ದೂರಮಾಡಲಾಗುತ್ತಿದೆ ಎಂಬ ಅರಿವು ಇಂತಹ ತೀರ್ಪನ್ನು ನೀಡಿದೆ.

ು ಪಂಚಾಯತಿಯ ಮೂಲ ಉದ್ದೇಶವೇ ದಮನಕ್ಕೆ ಗುರಿಯಾಗಿರುವ ಸಮುದಾಯಗಳಿಗೆ ಕೊಟ್ಟು ಅವರನ್ನು ಬಲಿಷ್ಠಗೊಳಿಸುವುದು.



ಅದಕ್ಕಾಗಿಯೇ ಅಧಿಕಾರವನ್ನು ವಿಕೇಂದ್ರೀಕರಿಸಿ ಹಳ್ಳಿಗಳ ಸಮಸ್ಯೆಗಳನ್ನು ದೂರದಲ್ಲಿರುವ ಸರ್ಕಾರ ಬಗೆಹರಿಸುವ ಬದಲು ಹಳ್ಳಿಗರೇ ಬಗೆಹರಿಸಲಿ ಎಂದು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಮೊದಲು ಕರ್ನಾಟಕದಲ್ಲಿ (ನಜೀರ್ ಸಾಬ್ ಅವರ ಕೊಡುಗೆ) ಜಾರಿಗೆ ತಂದದ್ದು ಮತ್ತು ಆನಂತರ ಅದನ್ನು ದೇಶದಾದ್ಯಂತ ರಾಜೀವ್ ಗಾಂಧಿ ಕಡ್ಡಾಯ ಮಾಡಿದ್ದು. ಇವತ್ತಿಗೂ ನಮ್ಮ ವಿಧಾನಸಭೆ ಮತ್ತು ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ. 33 ಪ್ರಾತಿನಿಧ್ಯ ಕೊಡುವ ಕುರಿತು ಒಣಚರ್ಚೆಗಳು ಮುಂದುವರೆಯುತ್ತಿದ್ದರೂ ಮೊದಲಿನಿಂದಲೇ ಪಂಚಾಯತಿಗಳಲ್ಲಿ ಮಹಿಳೆಯರಿಗೆ ಶೇ. 33 ಪ್ರಾತಿನಿಧ್ಯವನ್ನು ಕಲ್ಪಿಸಲಾಗಿತ್ತು. ಅದನ್ನು ಈ ಹಲವು ರಾಜ್ಯಗಳಲ್ಲಿ ಶೇ. 50ಕ್ಕೆ ಏರಿಸಲಾಗಿದೆ. ಜೊತೆಗೆ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೂ ಪಂಚಾಯತಿಗಳಲ್ಲಿ ಸೂಕ್ತ ಪ್ರಾತಿನಿಧ್ಯವನ್ನು ನೀಡಲಾಗಿದೆ. ಹೀಗಿರುವಾಗ ಸುಪ್ರೀಂ ಕೋರ್ಟ್ ಒಂದು ರಾಜ್ಯದ ಪರಿಶಿಷ್ಟ ವರ್ಗಗಳ ಶೇ 54ರಷ್ಟು ಜನ ಮತ್ತು ಇಡಿಯಾಗಿ ಶೇ. 50 ಮಹಿಳೆಯರು ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹರಲ್ಲ ಎಂದಿರುವುದು ಎಷ್ಟರಮಟ್ಟಿಗೆ ನ್ಯಾಯಯುತವಾದದ್ದು?

ನಮ್ಮ ದೇಶದಲ್ಲಿ ಮಾತ್ರವಲ್ಲ, ಜಗತ್ತಿನಾದ್ಯಂತ ಪ್ರಜಾಪ್ರಭುತ್ವ ದೇಶಗಳಲ್ಲಿ ಯಾವುದೇ ರಾಜಕೀಯ ಹುದ್ದೆಯನ್ನು ಅಲಂಕರಿಸಲು 'ಯಾವುದೇ ವಿದ್ಯಾರ್ಹತೆ'ಗಳನ್ನು ಕಡ್ಡಾಯಗೊಳಿಸಿಲ್ಲ. ನಮ್ಮ ದೇಶದಲ್ಲಿ ಇಪ್ಪತ್ತೈದು ವರ್ಷ ವಯಸ್ಸನ್ನು ದಾಟಿರುವವರಿಗೆ, ಯಾವುದೇ ಅಪರಾಧಕ್ಕೆ ಗುರುತರ ಶಿಕ್ಷೆಯನ್ನು ಎದುರಿಸದೇ ಇರುವವರಿಗೆ ಮತ್ತು ಆರ್ಥಿಕವಾಗಿ ಹಾಗೂ ಮಾನಸಿಕವಾಗಿ ದೃಢವಾಗಿರುವವರಿಗೆ ವಿಧಾನಸಭೆ ಮತ್ತು ಸಂಸತ್ತಿನ ಚುನಾವಣೆಗಳಲ್ಲಿ ಸ್ಪರ್ಧಿಸುವ ಹಕ್ಕು ಇದ್ದೇ ಇದೆ. ಇತ್ತೀಚೆಗೆ ಮಾಜಿ ಮುಖ್ಯಮಂತ್ರಿ ಲಾಲು ಪ್ರಸಾದ್ ಯಾದವ್ ಅವರ ಪುತ್ರ, ಒಂಭತ್ತನೆ ಕ್ಲಾಸ್ ತನಕ ಮಾತ್ರ ಓದಿರುವ ತೇಜ್ ಪ್ರತಾಪ್ ಯಾದವ್ ಎಂಬಾತ ಬಿಹಾರದಲ್ಲಿ ಆರೋಗ್ಯ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ. ಹಾಗಿರುವಾಗ ಒಂದು ಹಳ್ಳಿಯ ಸಮಸ್ಯೆಗಳನ್ನು ಬಗೆಹರಿಸಲು ಶಿಕ್ಷಣವನ್ನು ಕಡ್ಡಾಯವಾಗಿ ಪಡೆದಿರಬೇಕು ಎಂದು ನ್ಯಾಯಾಲಯ ಹೇಳಿರುವುದು ಎಷ್ಟು ಸರಿ?


ಒಂದು ಸಮಾಜದ ಉದ್ಧಾರಕ್ಕೆ ಶಿಕ್ಷಣ ಮುಖ್ಯ ಹೌದು. ಆದರೆ ಸಾಕ್ಷರತೆಗೂ ಜ್ಞಾನಕ್ಕೂ ಸಂಬಂಧ ಇದೆ ಎಂಬುದು ಶುದ್ಧ ಸುಳ್ಳು. ಸಾಕ್ಷರತೆ ಹೊಂದಿರುವ ಅದೆಷ್ಟೋ ಅಜ್ಞಾನಿಗಳು, ಅನಕ್ಷರಸ್ಥರಾದ ಅದೆಷ್ಟೋ ಜ್ಞಾನಿಗಳು ನಮ್ಮ ಸುತ್ತಲೂ ಇಲ್ಲವೇ?

ಮಿತ್ರ ಶ್ರೀನಿವಾಸ ಕಾರ್ಕಳ ಅವರು ಹೇಳುವಂತೆ "ಅಕ್ಷರಸ್ಥರೆಲ್ಲರೂ ವಿದ್ಯಾವಂತರೆನಿಸಿ ಕೊಳ್ಳಬೇಕೆಂದೇನೂ ಇಲ್ಲ, ಅನಕ್ಷರಸ್ಥರೆಂದಾಕ್ಷಣ ಅವರು ಅವಿದ್ಯಾವಂತರೆನಿಸಿಕೊಳ್ಳಬೇಕಾಗಿಯೂ ಇಲ್ಲ (ಲಿಟರೇಟ್ ಬೇರೆ ಎಜುಕೇಟೆಡ್ ಬೇರೆ, ನಮ್ಮಲ್ಲೀಗ ಇರುವ ಬಹುತೇಕರು ಕೇವಲ ಲಿಟರೇಟ್‌ಗಳು). ಪರಂಪರೆ ಮತ್ತು ಅನುಭವದ ಮೂಲಕ ನಮ್ಮ ಹಳ್ಳಿಗಾಡಿನ ಅನಕ್ಷರಸ್ಥರು ಪಡೆದುಕೊಂಡ ಜ್ಞಾನದ ಮುಂದೆ ತಥಾಕಥಿತ ಆಧುನಿಕ ವಿದ್ಯಾವಂತರ ಜ್ಞಾನ ಏನೇನೂ ಅಲ್ಲ. ಮಳೆ ಬೆಳೆಯ ಬಗ್ಗೆ ಹವಾಮಾನ ಪರಿಸ್ಥಿತಿಗಳ ಬಗ್ಗೆ ಗಮಾರರೆಂದು ಆಧುನಿಕರಿಂದ ಮೂದಲಿಕೆಗೆ ಒಳಗಾದ ನಮ್ಮ ಹಳ್ಳಿಗರು ಎಷ್ಟು ಕರಾರುವಾಕ್ಕು ಜ್ಞಾನವನ್ನು ಹೊಂದಿದ್ದಾರೆ ಎಂಬುದನ್ನು ಗಮನಿಸಿ. ಈ ಅರ್ಥದಲ್ಲಿ ಈ ಅನಕ್ಷರಸ್ಥರು ನಿಜವಾದ ಅರ್ಥದಲ್ಲಿ ವಿದ್ಯಾವಂತರು. ಶತಶತಮಾನದಿಂದ ಬೆನ್ನೆಲುಬಾಗಿ ನಿಂತು, ಪರಿಶ್ರಮದಿಂದ ದುಡಿದು ಈ ದೇಶವನ್ನು ಸಶಕ್ತವಾಗಿ ಕಟ್ಟಿ ನಿಲ್ಲಿಸಿದವರು, ಸೌಹಾರ್ದ ಸಂಸ್ಕೃತಿಯನ್ನು ಬೆಳೆಸಿ ಕಾಪಾಡಿಕೊಂಡು ಬಂದವರು ಇದೇ ಅನಕ್ಷರಸ್ಥರು. ಅಕ್ಷರಸ್ಥರಾಗಿರು ವುದಕ್ಕೂ ದಕ್ಷತೆ, ಪ್ರಾಮಾಣಿಕತೆ, ಮಾನವೀಯತೆಗಳಿಗೂ ಸಂಬಂಧವಿಲ್ಲ ಮತ್ತು ಈ ಆದರ್ಶ ಗುಣಗಳು ಬಹುತೇಕ ಇರುವುದು ಕೆಳಸಮುದಾಯಗಳಲ್ಲಿ."

ಹೋಗಲಿ, ಕೋಟ್ಯಂತರ ಜನರ ಜೀವನದ ಮೇಲೆ ಪ್ರಭಾವ ಬೀರುವ ಕಾನೂನು ಮತ್ತು ಕಾಯಿದೆಗಳನ್ನು ರೂಪಿಸುವ ಸಂಸತ್ತು, ವಿಧಾನಸಭೆ ಇತ್ಯಾದಿಗಳಿಗೆ ಅನಕ್ಷರಸ್ಥರು ಬೇಕಾದರೆ ಹೋಗಲಿ ಚರಂಡಿ, ರಸ್ತೆ, ಪಡಿತರ ಚೀಟಿ ತರಹದ ವಿಚಾರಗಳನ್ನು ನಿರ್ಧರಿಸುವ ಪಂಚಾಯತಿಗಳಲ್ಲಾದರೂ ಅಕ್ಷರಸ್ಥರು ಇರಲಿ ಎನ್ನುವುದಾದರೆ ಯಾಕೆ ಸಾಮಾನ್ಯ ವರ್ಗ ಮತ್ತು ಪರಿಶಿಷ್ಟ ವರ್ಗಗಳಿಗೆ ವಿದ್ಯಾರ್ಹತೆಯಲ್ಲಿ ಭೇದಭಾವ ಮಾಡಿದೆ ನ್ಯಾಯಾಲಯ?

2011ರ ಜನಗಣತಿ ಪ್ರಕಾರ ಹರಿಯಾಣದಲ್ಲಿ ಸಾಕ್ಷರತೆಯ ಪ್ರಮಾಣ 76.64. ಇದರಲ್ಲಿ ಹೆಚ್ಚಿನವರು ನಗರ ಪ್ರದೇಶಗಳಲ್ಲಿ ಇರುವವರು ಮತ್ತು ಮೇಲುಜಾತಿ ಮತ್ತು ಮೇಲುವರ್ಗಗಳಿಗೆ ಸೇರಿರುವವರು. ಹೊಸ ಕಾಯಿದೆಯಿಂದಾಗಿ ಅದೆಷ್ಟೋ ಹಳ್ಳಿಗಳಲ್ಲಿ ಈಗ ಐವತ್ತರ, ಅರವತ್ತರ ಪ್ರಾಯದಲ್ಲಿರುವ, 'ವಿದ್ಯಾರ್ಹತೆ'ಯನ್ನು ಪಡೆದಿರುವ ಅಭ್ಯರ್ಥಿಗಳೇ ಇಲ್ಲದಂತಾಗಿದೆ. ಇವರೆಲ್ಲ ಅನಕ್ಷರಸ್ಥರಾಗಿರುವುದು ಸ್ವಇಚ್ಛೆಯಿಂದೇನಲ್ಲ, ನಾಲ್ಕು ಮತ್ತು ಐದು ದಶಕಗಳ ಹಿಂದೆ ಅವರು ಮಕ್ಕಳಾಗಿದ್ದಾಗ ಅವರ ಹಳ್ಳಿಗಳಲ್ಲಿ ಶಾಲೆಗಳೇ ಇರಲಿಲ್ಲ, ಅಂದರೆ ಅವರಿಗೆ ಉಚಿತ ಶಾಲೆಯನ್ನು ತೆರೆದು ಅಕ್ಷರ ಜ್ಞಾನಿಗಳನ್ನಾಗಿ ಮಾಡುವಲ್ಲಿ ಪ್ರಭುತ್ವ ಸೋತಿದೆ ಎಂದೇ ಅರ್ಥ. ಆದರೀಗ ಅವರನ್ನೇ ಅನರ್ಹರು ಎನ್ನುವುದು ಅದೆಷ್ಟು ಸರಿ?

ಇನ್ನು ಶೌಚಾಲಯಗಳ ವಿಷಯಕ್ಕೆ ಬರೋಣ. ಹರಿಯಾಣ ಸರ್ಕಾರದ ವಿರುದ್ಧ ಸುಪ್ರೀಂಕೋರ್ಟಿನಲ್ಲಿ ವಾದ ಮಂಡಿಸಿದ ಹಿರಿಯ ವಕೀಲೆ ಇಂದಿರಾ ಜೈಸಿಂಗ್ ಅವರ ಪ್ರಕಾರ 2011ರ ಜನಗಣತಿಯೇ ಆ ರಾಜ್ಯದ ಬಡವರ ಸ್ಥಿತಿಗತಿಗಳನ್ನು ತೆರೆದಿಡುತ್ತದೆ. "ಜನಗಣತಿಯ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿರುವ ಶೇ. 29 ಕುಟುಂಬಗಳಿಗೆ ಶಾಶ್ವತವಾದ ಮನೆ ಎಂಬುದೇ ಇಲ್ಲ, ಅಂಥವರು ಎಲ್ಲಿ ಶೌಚಾಲಯವನ್ನು ಕಟ್ಟಿಸಬೇಕು? ಹಾಗೆಯೇ ಶೇ. 27 ಕುಟುಂಬಗಳು ಹುಲ್ಲು ಮತ್ತು ತಡಿಕೆಗಳಿಂದ ಮುಚ್ಚಿಗೆ ಹೊಂದಿರುವ ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ. ಶೇ. 38 ಕುಟುಂಬಗಳು ಮಣ್ಣಿನ ನೆಲಗಟ್ಟಿನ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಶೇ. 25 ಕುಟುಂಬಗಳು ಒಂದೇ ಕೊಠಡಿ ಇರುವ ಮನೆಗಳಲ್ಲಿದ್ದಾರೆ. ಅಂಥವರೆಲ್ಲ ಎಲ್ಲಿಂದ ಶೌಚಾಲಯಕ್ಕೆ ಹಣಕಾಸು ಹೊಂದಿಸಬೇಕು?" ಎಂದು ಇಂದಿರಾ ಜೈಸಿಂಗ್ ಪ್ರಶ್ನಿಸುತ್ತಾರೆ. ಅಷ್ಟೇ ಮುಖ್ಯವಾದ ಇನ್ನೊಂದು ಪ್ರಶ್ನೆಯನ್ನೂ ಅವರು ಕೇಳುತ್ತಾರೆ.



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

"ನಮ್ಮ ಬಹಳಷ್ಟು ಹಳ್ಳಿಗಳಲ್ಲಿ ಒಳಚರಂಡಿ ವ್ಯವಸ್ಥೆಯೇ ಇಲ್ಲ, ಹಾಗಿರುವಾಗ ಅದೆಷ್ಟೋ ಜನ ಈಗಲೂ ಹಳೆ ಕಾಲದ ಕಕ್ಕಸ್ಸು ಗುಂಡಿಗಳನ್ನು ಉಪಯೋಗಿಸುತ್ತಿದ್ದು ಅವುಗಳಲ್ಲಿನ ಮಲವನ್ನು ದಲಿತರು ಹೊರಬೇಕಾದ ಪರಿಸ್ಥಿತಿ ಇದೆ. ಇಂತಹ ಶೌಚಾಲಯವನ್ನು ಹೊಂದಿರುವವರು ಅರ್ಹರು ಎನ್ನುವುದಾದರೆ ಮಲ ಹೊರುವ ಪ್ರಕ್ರಿಯೆಯನ್ನು ಮತ್ತು ಜಾತಿ ಹೆಸರಲ್ಲಿ ಎಸಗುವ ಶೋಷಣೆಯನ್ನೂ ಸಮರ್ಥಿಸಿದಂತಲ್ಲವೇ?" ಎನ್ನುತ್ತಾರೆ.


ಕೃಷಿಸಾಲವನ್ನು ಬಾಕಿ ಇಟ್ಟುಕೊಂಡಿರುವವರೂ ಗ್ರಾಮ ಪಂಚಾಯತಿಗಳಲ್ಲಿ ಸ್ಪರ್ಧಿಸಲು ಅನರ್ಹರು ಎಂಬ ಸಂಗತಿ ಎಷ್ಟು ಅಮಾನುಷವಾಗಿದೆ ಎಂದು ನೋಡೋಣ. ಈಗ ದೇಶದ ಅದೆಷ್ಟೋ ರಾಜ್ಯಗಳಲ್ಲಿ ಎರಡನೆ ವರ್ಷವೂ ಬರ ಪರಿಸ್ಥಿತಿ ಇದ್ದು ರೈತರು ಕೃಷಿಸಾಲಗಳನ್ನು ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅದಕ್ಕೆ ಕಾರಣ ನಮ್ಮ ರಾಜ್ಯ ಮತ್ತು ರಾಷ್ಟ್ರದ ಆರ್ಥಿಕ ನೀತಿಯೇ ಹೊರತು ರೈತರು ಯಾವ ರೀತಿಯಿಂದಲೂ ಅಲ್ಲ. ಈ ಮಧ್ಯೆ ಸರ್ಕಾರಿ ಬ್ಯಾಂಕುಗಳಿಂದ ಕೋಟ್ಯಂತರ ರೂಪಾಯಿಗಳ ಸಾಲ ಪಡೆದು, ಆ ಬ್ಯಾಂಕುಗಳಿಗೆ ಪಂಗನಾಮ ತಿಕ್ಕಿ ಇದೇ ವಾರ ಗೋವಾದಲ್ಲಿ ತನ್ನ 60ನೇ ಹುಟ್ಟುಹಬ್ಬವನ್ನು ವಿಜಯ್ ಮಲ್ಯ ಎಂಬ ಹೆಂಡೋದ್ಯಮಿ ವಿಜೃಂಭಣೆಯಿಂದ ಆಚರಿಸಿಕೊಳ್ಳುತ್ತಿದ್ದಾನೆ. ತನಗೆ ಹ್ಯಾಪಿ ಬರ್ತ್‌ಡೇ ಹಾಡಲು ಅಮೆರಿಕದ ಖ್ಯಾತ ಹಾಡುಗಾರರನ್ನು ದುಡ್ಡು ಕೊಟ್ಟು ಕರೆಸಿಕೊಳ್ಳುತ್ತಿದ್ದಾನೆ. ಅಂದಹಾಗೆ ಈ ಕೋಟ್ಯಂತರ ಸಾಲಗಾರ ಮೊನ್ನೆ ಕೂಡ ಸ್ಟೈಲಾಗಿ ರಾಜ್ಯಸಭೆಯ ಅಧಿವೇಶನಕ್ಕೆ ಹಾಜರಾಗಿದ್ದ. ವಿಜಯ್ ಮಲ್ಯ ತರಹದವರು ಶಾಸಕರಿಗೆ ಹಣ ಕೊಟ್ಟು ರಾಜ್ಯಸಭೆಯ ಸದಸ್ಯತ್ವವನ್ನು ಖರೀದಿಸಬಹುದು, ಆದರೆ ಹಳ್ಳಿಯಲ್ಲಿದ್ದು ನಮಗೆ ದವಸ ಧಾನ್ಯ ಬೆಳೆಯುವ ರೈತ ಕೃಷಿಸಾಲವನ್ನು ಹೊಂದಿದ್ದರೆ ಆತ ಗ್ರಾಮವನ್ನು ಪ್ರತಿನಿಧಿಸುವಂತಿಲ್ಲ ಎಂಬುದು ಯಾವ ನ್ಯಾಯ?

ಈಗ ಹರಿಯಾಣದಲ್ಲಿ ಅಧಿಕಾರದಲ್ಲಿರುವುದು ಬಿಜೆಪಿ ಪಕ್ಷ. ತನ್ನ ಆರೆಸ್ಸೆಸ್ ಜಾಯಮಾನಕ್ಕೆ ತಕ್ಕಂತೆ ಬಿಜೆಪಿ ದಲಿತರು, ಮಹಿಳೆಯರು ಮತ್ತು ಬಡವರ ವಿರುದ್ಧ ಪಂಚಾಯತಿ ರಾಜ್ ಕಾಯಿದೆಯನ್ನು ತಿದ್ದುಪಡಿ ಮಾಡಿದೆ. ಆ ಮೂಲಕ ದಮನಿತ, ಶೋಷಿತ ಜನರನ್ನು ಅಧಿಕಾರದಿಂದ, ಸಮಾಜದ ಮುಖ್ಯವಾಹಿನಿಯಿಂದ ದೂರ ತಳ್ಳಿ ಮೇಲು ಜಾತಿ ಮೇಲುವರ್ಗಗಳ ಕೈಗಳಿಗೆ ಅಧಿಕಾರವನ್ನು ಕೊಡಲು ಸಜ್ಜಾಗಿದೆ. ಹರಿಯಾಣದ ಬಿಜೆಪಿ ಸರ್ಕಾರದ ಇಂತಹ ಪ್ರಜಾತಂತ್ರ ವಿರೋಧಿ, ದಲಿತ ವಿರೋಧಿ, ಮಹಿಳಾ ವಿರೋಧಿ ಹುನ್ನಾರವನ್ನು ಅರಿಯದೆ ಸುಪ್ರೀಂಕೋರ್ಟ್ ತಿದ್ದುಪಡಿಗಳನ್ನು ಸಮರ್ಥಿಸುವ ಮೂಲಕ ಅನ್ಯಾಯ ಎಸಗಿದೆ.

ಅಂದಹಾಗೆ ಇಂತಹದ್ದೇ ತಿದ್ದುಪಡಿಗಳನ್ನು ಇತ್ತೀಚೆಗೆ ರಾಜಸ್ತಾನದ ಪಂಚಾಯತಿ ರಾಜ್ ವ್ಯವಸ್ಥೆಯಲ್ಲೂ ತರಲಾಗಿದೆ. ಆ ರಾಜ್ಯದಲ್ಲೂ ಅಧಿಕಾರದಲ್ಲಿರುವುದು ಇದೇ ಬಿಜೆಪಿ. ಇದಕ್ಕೆ ಸಂಬಂಧಿಸಿದಂತೆ ತೀರ್ಪು ನೀಡುವ ಸಂದರ್ಭದಲ್ಲಿ ಸುಪ್ರೀಂಕೋರ್ಟ್ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಲು ಇಂತಹ ತಿದ್ದುಪಡಿಗಳು ಅಗತ್ಯ ಎಂದಿದೆಯಲ್ಲದೆ, ಇತರೆ ರಾಜ್ಯಗಳೂ ಇಂತಹ ತಿದ್ದುಪಡಿಗಳನ್ನು ತರಬೇಕೆಂದು ಸಲಹೆ ನೀಡಿದೆ.

ಅಯ್ಯೋ, ಪ್ರಜಾಪ್ರಭುತ್ವವೇ... ■

ಸ್ಮೃತಿ/ಅವಿರತ ಪುಸ್ತಕ/ ಬೆಂಗಳೂರು ಆರ್ಟ್ ಫೌಂಡೇಶನ್‌ರಿಂದ



ೂತ್ಸವ

2015,
1ಕ್ಕೆ: ಎಲ್ಲಿಂದಲೋ ಬಂದವರು
3ಕ್ಕೆ: ಅನುರೂಪ

2015, ಬೆಳಗ್ಗೆ 11ಕ್ಕೆ: ಪಲ್ಲವಿ
ಾದಾಮಿ ಹೌಸ್,
ಕೇಂದ್ರ ಕಚೇರಿ ಎದುರು

2015 ಬೆಳಗ್ಗೆ 11ಕ್ಕೆ
ಸಂಕಿರಣ

1
ಾಣೆಯರು ಕಂಡ ಲಂಕೇಶ್
ಡಾ|| ಶ್ರೀನಿವಾಸಗೌಡ
ರೇಖಾರಾಣಿ

2
ಲಂಕೇಶ್ ಪತ್ರಿಕೆ ಮತ್ತು
ಸಮೂಹ ಮಾಧ್ಯಮಗಳು
ಶೂದ್ರ ಶ್ರೀನಿವಾಸ
ಬಿ. ಚಂದ್ರೇಗೌಡ

ಸಮಾರೋಪ : 5-30ಕ್ಕೆ

ಲಂಕೇಶ್ ಅನುಭವ ಮಂಟಪ
ಎಂ.ಜಿ. ಸತ್ಯ

ಲಂಕೇಶ್ ವ್ಯಕ್ತಿತ್ವ
ಟಿ.ಎನ್. ಸೀತಾರಾಂ

ಸಾಹಿತಿಗಳ ಸಾಹಿತ್ಯ ಲಂಕೇಶ್
ಎಸ್. ಸಿದ್ದಲಿಂಗಯ್ಯ

ನಾ ಕಾಣದ ಲಂಕೇಶ್
ಕೆ.ಎ. ದಯಾನಂದ್

ಈಗ ಇರಬೇಕಿತ್ತು ಲಂಕೇಶ್
ಸಿ.ಎಸ್. ದ್ವಾರಕಾನಾಥ್


ಸಮನ್ವಯ
ಶ್ರೀನಿವಾಸ್ ಜಿ. ಕಪ್ಪಣ್ಣ


ಸಂಜೆ : 7.15 ರಿಂದ 10ರ ತನಕ
ಲಂಕೇಶ ಕವಿತೆಗಳ ರಂಗರೂಪಕ
ವಿಜಯನಗರ ಬಿಂಬ ಕಲಾವಿದರಿಂದ
ಸ್ಥಳ: ನಯನ ರಂಗಮಂದಿರ, ಕನ್ನಡ ಭವನ


ವಿಜಯಪುರ-ಬಾಗಲಕೋಟೆ

ಕಾಂಗ್ರೆಸ್ಸಿನ ಗೆಲುವಿನ ಆಟ; ಬಿಜೆಪಿಗೆ ಯತ್ನಾಳನ ಕಾಟ!

ಡಿಸೆಂಬರ್ 27 ರಂದು ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ ಸದಸ್ಯತ್ವಕ್ಕೆ ನಡೆಯಲಿರುವ ಚುನಾವಣೆ ಅವಿಭಜಿತ ವಿಜಯಪುರ ಕ್ಷೇತ್ರದಲ್ಲಿ ತೀವ್ರ ಕುತೂಹಲ ಮೂಡಿಸಿದೆ. ಇಲ್ಲಿಂದ ಇಬ್ಬರು ಎಂ.ಎಲ್.ಸಿಗಳು ಆಯ್ಕೆಯಾಗುವ ಅವಕಾಶವಿದ್ದು ಹಾಲಿ ಮಾಹಿತಿ ತಂತ್ರಜ್ಞಾನ ಸಚಿವ ಕಾಂಗ್ರೆಸ್‌ನ ಎಸ್.ಆರ್.ಪಾಟೀಲರ ಆಯ್ಕೆ ಬಹುತೇಕ ಖಚಿತವಾಗಿದೆ. ಮತ್ತೊಂದು ಸ್ಥಾನಕ್ಕೆ ನಡೆದಿರುವ ಕೇಸರಿ ಕುಮಾರರ ಜಟಾಪಟಿಯೇ ಕುತೂಹಲ ಮೂಡಿಸಿರೋದು.


ಎಸ್.ಆರ್.ಪಾಟೀಲ್


ಬಸನಗೌಡ ಪಾಟೀಲ್ ಯತ್ನಾಳ್


ಜಿ.ಎಸ್. ನ್ಯಾಮಗೌಡ

ಅವಿಭಜಿತ ವಿಜಯಪುರ ಕ್ಷೇತ್ರ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳನ್ನು ಹೊಂದಿದ್ದು ಒಟ್ಟು ಹದಿಮೂರು ತಾಲೂಕುಗಳಿವೆ. ಕಾಂಗ್ರೆಸ್‌ನಿಂದ ಈ ಹಿಂದೆ ಮೂರು ಬಾರಿ ವಿಧಾನ ಪರಿಷತ್‌ಗಾಗಿ ಸದಸ್ಯರಾಗಿ, ಈಗ ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಯೋಜನೆ ಸಚಿವರಾಗಿರುವ ಎಸ್.ಆರ್.ಪಾಟೀಲರು 4ನೇ ಗೆಲುವಿಗಾಗಿ ಕಣದಲ್ಲಿದ್ದಾರೆ. ಈಗಷ್ಟೇ ಆರು ವರ್ಷದ ಎಂಎಲ್ಸಿಗಿರಿ ಅನುಭವಿಸಿರುವ ಬಿಜೆಪಿಯ ಜಿ.ಎಸ್.ನ್ಯಾಮಗೌಡ ಎರಡನೇ ಪ್ರಯತ್ನದಲ್ಲಿದ್ದಾರೆ. ಬಿಜೆಪಿಯಿಂದ ಟಿಕೆಟ್ ಬಯಸಿದ್ದ ಮಾಜಿ ಕೇಂದ್ರ ಸಚಿವ ಬಸನಗೌಡ ಪಾಟೀಲ್ ಯತ್ನಾಳ್ ಬಂಡಾಯ ಅಭ್ಯರ್ಥಿಯಾಗಿದ್ದರೆ, ಜೆಡಿಎಸ್‌ನಿಂದ ಕಾಂತಪ್ಪ ಇಂಚಗೇರಿ 'ಹಾಗೆ ಸುಮ್ಮನೆ' ಸ್ಪರ್ಧಿಸಿದ್ದಾರೆ.

ಕಳೆದ ವಿಧಾನ ಪರಿಷತ್ ಚುನಾವಣೆಗಿಂತ ಈ ಸಲ ಇಲ್ಲಿ ಗಮ್ಮತ್ತು ಕಂಡು ಬಂದಿರುವುದು ಯತ್ನಾಳ್ ಸ್ಪರ್ಧೆಯಿಂದ. 'ಯಡಿಯೂರಪ್ಪ ಮತ್ತು ಲಿಂಗಾಯತ' ಎಂಬ ನಾಮಸ್ಮರಣೆ ಮಾಡುತ್ತ ದುಡ್ಡನ್ನು ಹರಿಸುತ್ತ ಅಡ್ಡಾಡುತ್ತಿರುವ ಯತ್ನಾಳ್ ಬಿಜೆಪಿಯವರ ನಿದ್ದೆಗೆಡಿಸಿರುವುದಂತೂ ಗ್ಯಾರಂಟಿ. ಪುಟ್ಟಾಪೂರಾ ಆರೆಸ್ಸೆಸ್ ಕೂಸಾಗಿರುವ ಯತ್ನಾಳ್‌ಗೆ ಒಳಗೊಳಗೇ ಆರೆಸ್ಸೆಸ್ ಬೆಂಬಲಿಸುತ್ತಿರುವ ಸುದ್ದಿಗಳೂ ಇವೆ. ಯತ್ನಾಳ್ ಅವರಿಂದ ಎಡವಟ್ಟಾಗಲಿದೆ ಎಂದು ಬೆದರಿರುವ ಇಲ್ಲಿನ ಬಿಜೆಪಿಗಳು ರಾಜ್ಯ ಬಿಜೆಪಿ ನಾಯಕರನ್ನೆಲ್ಲ ಇಲ್ಲಿಗೆ ಕರೆಸಿ ಮಾನ ಕಾಪಾಡಿಕೊಳ್ಳುವ ಉಮೇದಿನಲ್ಲಿದ್ದಾರೆ.


ಪಾಟೀಲ್ ಗೆಲುವಿಗೂ ಇದೆ ಕಾಟ


ಈ ಹಿಂದೆ ಮೂರು ಬಾರಿ ಗೆದ್ದಿರುವ ಎಸ್.ಆರ್. ಪಾಟೀಲ ನಾಲ್ಕನೇ ಬಾರಿಗೂ ವಿಜಯಪತಾಕೆ ಹಾರಿಸುವ ಸಾಧ್ಯತೆಗಳು ದಟ್ಟವಾಗಿ ಕಾಣಿಸುತ್ತಿವೆ. ಹಾಗೆ ನೋಡಿದರೆ, ಕಳೆದ ವಿಧಾನ ಪರಿಷತ್ ಚುನಾವಣೆ ಸಂದರ್ಭದಲ್ಲಿ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿತ್ತು; ಜಿಲ್ಲಾ ಪಂಚಾಯತ್, ತಾಲ್ಲೂಕ್ ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಲ್ಲಿ ಬಿಜೆಪಿ ಪ್ರಾಬಲ್ಯವಿತ್ತು, ಕ್ಷೇತ್ರದ ಬಹುಪಾಲು ನಗರಸಭೆ, ಪಟ್ಟಣ ಪಂಚಾಯತ್, ಪುರಸಭೆಗಳಲ್ಲಿ ಬಿಜೆಪಿ ಆಡಳಿತ ವಿತ್ತು, ಎರಡೂ ಜಿಲ್ಲೆಗಳ ಬಹುಪಾಲು ತಾಲ್ಲೂಕುಗಳಲ್ಲಿ ಬಿಜೆಪಿಯ ಶಾಸಕರೇ ಇದ್ದರು. ಆಗಲೂ ಎಸ್.ಆರ್. ಪಾಟೀಲ್ ಸುಲಭವಾಗಿ ಗೆದ್ದಿದ್ದರು. ಇದು ಅವರ ಜನಪ್ರಿಯತೆಗೆ ಸಾಕ್ಷಿ.


ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ವಿಧಾನ ಪರಿಷತ್ ಸದಸ್ಯರಿಗೆ ಸಚಿವಗಿರಿ ಬೇಡ ಎಂದು ನಿರ್ಧರಿಸಲಾಗಿತ್ತು. ಆದರೆ ಪಾಟೀಲರ ಸಾಧನೆ ಮತ್ತು ಪಕ್ಷಕ್ಕೆ ತೋರಿದ ನಿಷ್ಠೆಗಳನ್ನು ಪರಿಗಣಿಸಿ ಹೈಕಮಾಂಡ್ ಮತ್ತು ಸಿಎಂ ಸಿದ್ದರಾಮಯ್ಯ ಎಸ್.ಆರ್. ಪಾಟೀಲರಿಗೆ ಮಾಹಿತಿ ತಂತ್ರಜ್ಞಾನ, ಯೋಜನೆ, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ನೀಡಿ, ಕ್ಯಾಬಿನೆಟ್ ದರ್ಜೆ ನೀಡಿದರು.


ಆದಾಗ್ಯೂ ಎಸ್.ಆರ್.ಪಾಟೀಲ್ ಗೆಲುವಿಗೆ ಅವರ ತವರು ಜಿಲ್ಲೆ ಬಾಗಲಕೋಟೆಯಲ್ಲೇ ಕೆಲ ಸ್ವಪಕ್ಷೀಯರೇ ಅಡ್ಡಗಾಲು ಹಾಕಿ ಕೂತಿದ್ದಾರೆ. ಎಸ್.ಆರ್. ಪಾಟೀಲ್ ಸೋತರೆ ಬಾಗಲಕೋಟೆ ಜಿಲ್ಲೆ ಪ್ರತಿನಿಧಿಸಲು ಇನ್ನೊಬ್ಬರನ್ನು ಸಚಿವರನ್ನಾಗಿ ಮಾಡಬೇಕಾಗುತ್ತದೆ. ಹೀಗಾಗಿ ಸಚಿವಗಿರಿಗಾಗಿ ಹಂಬಲಿಸಿ ಕುಳಿತ ಬಾಗಲಕೋಟೆ ಜಿಲ್ಲೆಯ ಕಾಂಗ್ರೆಸ್ ಶಾಸಕರ ಪೈಕಿ ಮೂವರಂತೂ ಎಸ್.ಆರ್.ಪಾಟೀಲ್ ಸೋಲಲಿ ಎಂದೇ ಕಾಯುತ್ತಿದ್ದಾರೆ ಮತ್ತು ಅದು ಸಂಭವಿಸಲು ಮಾಡಬೇಕಾದ ಒಳತಂತ್ರ-ಕುತಂತ್ರಗಳನ್ನೆಲ್ಲ ಗುಪ್ತ ರೀತಿಯಲ್ಲಿ ಚಾಲನೆಗೆ ತಂದಿದ್ದಾರೆ.


ಬಾಗಲಕೋಟೆಯ ಕಾಂಗ್ರೆಸ್ ಶಾಸಕ ಹುಲ್ಲಪ್ಪ ಮೇಟಿ ಇದರಲ್ಲಿ ಪ್ರಮುಖ. ಎಸ್.ಆರ್. ಪಾಟೀಲರನ್ನು ಸೋಲಿಸಲು ತೆರೆಮರೆಯಲ್ಲಿ ಹಲವಾರು ಯತ್ನಗಳನ್ನು ನಡೆಸಿದ್ದಾರೆ. ಬಿಜೆಪಿಯ ಕಾರ್ಯಕರ್ತ ಹುಡೇದ್ ಎಂಬ ಸ್ವಜಾತಿ ಕುರುಬ ಬಾಂಧವನನ್ನು ಪಕ್ಷೇತರ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿರುವ ಹುಲ್ಲಪ್ಪ ಮೇಟಿ, ಕುರುಬರ ಮತಗಳನ್ನು ವಿಭಜಿಸಿ ಪಾಟೀಲರಿಗೆ ಆಘಾತ ನೀಡುವ ಆತುರದಲ್ಲಿದ್ದರು. ಆದರೆ ಬಂಡಾಯ ಬಿಜೆಪಿಯ ಹುಡೇದ್ ವರಿಷ್ಠರ ಮಾತಿಗೆ ಮಣಿದು ಹಿಂತೆಗೆದಿದ್ದರಿಂದ ಹುಲ್ಲಪ್ಪರ ಆಸೆ ಕೈಗೂಡಲಿಲ್ಲ... ಪಾಟೀಲ್ ಸೋತರೆ, ಬಾಗಲಕೋಟೆ ಜಿಲ್ಲೆಯಿಂದ ಸಚಿವಗಿರಿ ತಮಗೇ ಎಂಬ ಅಸಾಧ್ಯದ ಕನಸಲ್ಲಿ ಹುಲ್ಲಪ್ಪ ದಾರಿ ತಪ್ಪುತ್ತಿದ್ದಾರೆ.



ಸಿದ್ದು ನ್ಯಾಮಗೌಡ


ಯಶವಂತರೇ


ಮೇಟಿ


ಎಂ.ಬಿ. ಪಾಟೀಲ್


ಶಿವಾನಂದ ಪಾಟೀಲ್


ಚಿ

ಬಾದಾಮಿ ಶಾಸಕ ಚಿಮ್ಮನಕಟ್ಟಿಯವರನ್ನೂ ಸಚಿವಗಿರಿಯ ಸುಂದರ ಸ್ವಪ್ನಗಳು ಕಾಡುತ್ತಿದ್ದು, ಅವರೂ ಎಸ್.ಆರ್. ಪಾಟೀಲರ ಗೆಲುವಿಗೆ ಅಡ್ಡಗಾಲು ಹಾಕುತ್ತಿದ್ದಾರೆ. ಕುರುಬ ಅಂಧಾಭಿಮಾನಿಯಾಗಿರುವ ಚಿಮ್ಮನಕಟ್ಟಿಯವರಿಗೆ ಲಿಂಗಾಯತ, ರೆಡ್ಡಿಗಳೆಂದರೆ ಆಗಿ ಬರಲ್ಲ. ಎಸ್.ಆರ್. ಪಾಟೀಲರು ಕೂಡಾ ರೆಡ್ಡಿ ಆಗಿರುವುದು ಮತ್ತು ತನ್ನ ಸಚಿವಗಿರಿಗೆ ಅಡ್ಡಗಾಲಾಗಿರುವುದನ್ನು ಚಿಮ್ಮನಕಟ್ಟಿಯವರಿಗೆ ಸಹಿಸಿಕೊಳ್ಳಲಾಗುತ್ತಿಲ್ಲ. ಹೇಗಾದರೂ ಮಾಡಿ ಎಸ್.ಆರ್. ಪಾಟೀಲರನ್ನು ಸೋಲಿಸಿ, ಮಿನಿಸ್ಟರ್ ಆಗುವ ಕನಸಿನಲ್ಲಿ ಚಿಮ್ಮನಕಟ್ಟಿ ತೇಲುತ್ತಿದ್ದಾರೆ.

ಜಮಖಂಡಿಯ ಕಾಂಗ್ರೆಸ್ ಶಾಸಕ ಸಿದ್ದು ನ್ಯಾಮಗೌಡರಿಗೂ ಎಸ್.ಆರ್.ಪಾಟೀಲ್ ಸೋಲುವುದೇ ಬೇಕಾಗಿದೆ. ಲಿಂಗಾಯತ ಗಾಣಿಗ ಸಮುದಾಯದ ಸಿದ್ದು ನ್ಯಾಮಗೌಡರಿಗೆ ತನ್ನದೇ ತಾಲೂಕಿನ, ತನ್ನದೇ ಜಾತಿಯ ಬಿಜೆಪಿ ಕ್ಯಾಂಡಿಡೇಟ್ ಜಿ.ಎಸ್. ನ್ಯಾಮಗೌಡರಿಗೆ ಪರೋಕ್ಷವಾಗಿ ನೆರವು ನೀಡುವುದೇ ಸದ್ಯದ ಕಾಯಕವಾಗಿದೆ. ಇನ್ನೊಂದು ಕಡೆ ಅವರು ಯತ್ನಾಳಿಗೂ ಸದ್ಯದ ತಟ್ಟುವ ಕೆಲಸವನ್ನು ಗುಟ್ಟಾಗಿಯೇ ಮಾಡುತ್ತಿದ್ದಾರೆ. ಸಚಿವಗಿರಿಗಾಗಿ ಕಾಂಗ್ರೆಸ್‌ಗೇ ಡ್ಯಾಮೇಜ್ ಮಾಡಲು ಹೊರಟಿದ್ದಾರೆ.

ವಿಜಯಪುರ ಜಿಲ್ಲೆಯ ಕಾಂಗ್ರೆಸ್ ಶಾಸಕರ ಪೈಕಿ ಶಿವಾನಂದ ಪಾಟೀಲ ಮತ್ತು ಯಶವಂತರಾಯ ಗೌಡ ಪಾಟೀಲರು ಎಸ್.ಆರ್.ಪಾಟೀಲರನ್ನು ಸ... ಹವಣಿಸುತ್ತಿದ್ದಾರೆ. ಈ ಇಬ್ಬರು ಪಂಚಮಸಾಲಿ ... ಸ್ವಜಾತಿಯ ಬಸವಗೌಡ ಯತ್ನಾಳ್ ಗೆದ್ದರೆ ಖ... ಇದಕ್ಕಾಗಿ ಅವರು ಕೊಡುವ ಕಾರಣ "ಎಸ್.ಆರ್... ಮತ್ತು ಬಿಜೆಪಿಯ ಜಿ.ಎಸ್.ನ್ಯಾಮಗೌಡ ಇಬ್ಬರು... ಕೋಟೆ ಜಿಲ್ಲೆಯವರು. ಯತ್ನಾಳ್ ವಿಜಯಪುರ ... ಆಗಿರುವುದರಿಂದ ಅವರನ್ನು ಗೆಲ್ಲಿಸೋಣ." ಪಂ... ಕುಲಬಾಂಧವರಲ್ಲಿ ಈ ರೀತಿಯಾಗಿ ರಹಸ್ಯ... ಮಾಡಿದ್ದಾರಂತೆ ಈ ಶಾಸಕದ್ವಯರು.

ಕಾಂಗ್ರೆಸ್‌ನೊಳಗಿನ ಈ ಎಲ್ಲ ಒಳತಂತ್ರಗಳ... ಗೆಲ್ಲುವ ಛಾತಿ ಎಸ್.ಆರ್.ಪಾಟೀಲರಿಗಿದೆ. ... ತಮ್ಮ ಗೆಲುವಿನ ವಾಸನೆ ಕಂಡುಕೊಂಡಿರುವ ... ಪಾಟೀಲ್ "ಇದು ನನ್ನ ಕೊನೆ ಚುನಾವಣೆ... ಘೋಷಿಸುವ ಮೂಲಕ ಸ್ಥಳೀಯ ಸಂಸ್ಥೆಗಳ ಮ... ಇನ್ನಷ್ಟು ಗಟ್ಟಿಯಾಗಿ ತಬ್ಬಿಕೊಂಡಿದ್ದಾರೆ....

ಬಿಜೆಪಿಯ ನ್ಯಾಮಗೌಡ: ಕೆಲಸವೆಂದರೆ ಬಲು ಜಡ

ಈ ಕ್ಷೇತ್ರದಿಂದ ಇಬ್ಬರು ಎಂಎಲ್ಸಿಗ... ನಡೆಯಲಿದ್ದು, ಕಳೆದ ಸಲ ಎರಡನೇ ವಿಜ... ಬಿಜೆಪಿಯ ಜಿ.ಎಸ್.ನ್ಯಾಮಗೌಡ ಗೆದ್ದಿದ್ದರು. ... ಸಲ ಅವರಿಗೆ ಎಲ್ಲ ಪರಿಸ್ಥಿತಿಗಳೂ ಉಲ್ಟಾ ಹೊಡ... ಆರು ವರ್ಷ ಹಾಗೂಹೀಗೂ ಎಂಎಲ್ಸಿಗಿರಿ ಅನು... ನ್ಯಾಮಗೌಡರು ಇಲ್ಲಿನ ಸಮಸ್ಯೆಗಳ ಬಗ್ಗೆ ... ಪ್ರಸ್ತಾಪಿಸಿದ್ದೇ ಅಪರೂಪ. ಅಷ್ಟರಮಟ್ಟಿಗೆ ಅವ... ಬಂಗಾರ' ಎಂದು ನಂಬಿರುವ ಆಸಾಮಿ. ಜಮ... ಗಾಣಿಗ ಜಾತಿಯ ಜಿ.ಎಸ್.ನ್ಯಾಮಗೌಡರಿಗೆ ... ಸಂಸದ ಪಿ.ಸಿ.ಗದ್ದಿಗೌಡರೇ ಗಾಡ್‌ಫಾದರ್. ಅ... ಇವರಿಬ್ಬರೂ ಜಾತಿ ದುರಭಿಮಾನಿಗಳು.

ಕಳೆದ ಸಲ ವಿಜಯಪುರ ಮತ್ತು ಬಾಗಲ... ಎಲ್ಲ ತಾಲ್ಲೂಕುಗಳಲ್ಲಿ ಬಿಜೆಪಿಯ ಶಾಸಕರೇ... ನ್ಯಾಮಗೌಡರಿಗೆ ವರದಾನವಾಗಿತ್ತು. ಜಿಲ್ಲಾ ... ಮತ್ತು ತಾಲ್ಲೂಕು ಪಂಚಾಯತಿಗಳ ಬಲ... ಜೊತೆಗೆ ಗ್ರಾಮ ಪಂಚಾಯತಿ ಸದಸ್ಯರು ಆಳ... ಮುಖ ಮಾಡುವ ಪರಿಪಾಠವೂ ನ್ಯಾಮಗೌ... ಪಾಯಿಂಟ್ ಆಗಿತ್ತು. ನಗರಸಭೆ, ಪುರಸಭೆ... ಪಂಚಾಯತಿಗಳಲ್ಲಿ ಬಿಜೆಪಿಯ ಸದಸ್ಯರೇ ಅ... ಲಾಭವಾಗಿತ್ತು.

ಆದರೆ ಈ ಸಲ ಎಲ್ಲಾ ಉಲ್ಟಾಪ... ಪಂಚಾಯತಿ, ತಾಲ್ಲೂಕು ಪಂಚಾಯತಿಗಳ... ಉಳಿದೆಲ್ಲ ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ ಭಜ... ಹೊಂದಿದೆ. ವಿಜಯಪುರ ಜಿಲ್ಲೆಯ ಸಿಂದಗಿ ಶಾ... ಭೂಸನೂರು ಮತ್ತು ಬಾಗಲಕೋಟೆ ಜಿಲ್ಲೆಯ ... ಶಾಸಕ ಗೋವಿಂದ ಕಾರಜೋಳರನ್ನು ಬಿಟ್ಟರೆ... ಹನ್ನೊಂದು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರ... ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಕಾಂಗ್ರೆಸ್... ಅಭ್ಯರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಗೆಲುವು ದಾ... ಶೇ. 80ರಷ್ಟು ನಗರಸಭೆ, ಪುರಸಭೆ... ಪಂಚಾಯತಿಗಳಲ್ಲಿ ಕಾಂಗ್ರೆಸ್ ಬಹುಮತ ... ಇದೆಲ್ಲವೂ ಈ ಸಲ ಬಿಜೆಪಿಗೆ ನೆಗೆಟಿವ್ ... ಇದಕ್ಕೂ ದೊಡ್ಡ ತಲೆನೋವೆಂದರೆ, ಬಿಜೆಪಿಯ... ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮಾಜಿ ಕೇ... ಬಸವಗೌಡ ಪಾಟೀಲ್ ಯತ್ನಾಳ್!

ಪಂಚಮಸಾಲಿ ಗುರುವಿನ ಪಾದ ಎತ್ತ ಕಡೆ?

ಪಂಚಮಸಾಲಿ ಜಾತಿಯ ಬ್ರ್ಯಾಂಡ್ ಮೇಲೆ ರಾಜಕಾರಣ ಮಾಡುವ ಮಾಜಿ ಕೇಂದ್ರ ಸಚಿವ ಬಸವಗೌಡ ಪಾಟೀಲ್ ಯತ್ನಾಳ್‌ಗೆ ಕೂಡಲಸಂಗಮದ ಪಂಚಮಸಾಲಿ ಪೀಠದ ಜಯ ಮೃತ್ಯುಂಜಯ ಸ್ವಾಮೀಜಿ ಮೊದಲಿನಿಂದಲೂ ಆಶೀರ್ವಾದ ಮಾಡುತ್ತಲೇ ಬಂದಿದ್ದಾರೆ.

ಹಿಂದೆ ಯಡಿಯೂರಪ್ಪನಿಗೆ ಸಿ.ಎಂ. ಸ್ಥಾನ ತಪ್ಪಿದ್ದ ಸಂದರ್ಭದಲ್ಲಿ ಪಾಪ ಈ ಸ್ವಾಮೀಜಿಗೂ ಅಸಮಾಧಾನವಾಗಿತ್ತು. ಲಿಂಗಾಯತರ ಪ್ರಾಬಲ್ಯದಲ್ಲೇ ಎಲ್ಲವೂ ಇರಬೇಕು ಎಂಬ ಮಹದಾಸೆ ಸ್ವಾಮೀಜಿಗಿದೆ. ಅದರಲ್ಲೂ ಪಂಚಮಸಾಲಿಗಳ ಕೈಗಳಲ್ಲಿ ಪ್ರಬಲ ಸ್ಥಾನಗಳಿರಬೇಕೆಂಬ ಬಯಕೆಯೂ ಇದೆ. ಅಮಾಯಕ ಪಂಚಮಸಾಲಿ ಭಕ್ತರಿಗೆ, ಅಸಹಾಯಕ ಪಂಚಮಸಾಲಿ ಕೃಷಿಕರಿಗೆ ನೆರವಾಗಬೇಕಿದ್ದ ಸ್ವಾಮೀಜಿಗೆ ಜಾತಿ ರಾಜಕಾರಣದತ್ತಲೇ ಹೆಚ್ಚಿನ ಆಸಕ್ತಿ ಇರುವಂತಿದೆ. ಈಗ ಅವರು ಯಡಿಯೂರಪ್ಪರ ಶಿಷ್ಯ ಯತ್ನಾಳ್ ಎಂಎಲ್ಸಿಯಾಗಲಿ ಎಂದು ಬಯಸಿರಬಹುದು.

ಹಿಂದೆ ಯಡಿಯೂರಪ್ಪನ ಶಿಷ್ಯ ನರಗುಂದ ಶಾಸಕ ಸಿ.ಸಿ.ಪಾಟೀಲ್ ಸದನದಲ್ಲಿ 'ಭಕ್ತ ಪ್ರಹ್ಲಾದ' ವೀಕ್ಷಿಸಿ ಸಿಕ್ಕಾಗಲೂ ಜಯ ಮೃತ್ಯುಂಜಯ ಸ್ವಾಮೀಜಿ ಪತ್ರಿಕಾಗೋಷ್ಠಿ ನಡೆಸಿ ತಮ್ಮ ಕುಲಬಾಂಧವ ಸಿ.ಸಿ.ಪಾಟೀಲ ಪರ ಬ್ಯಾಟಿಂಗ್ ಮಾಡಿದ್ದರು!


ಕಳಸಾ-ಬಂಡೂರಿ ಯೋಜನೆ ಕುರಿತಂತೆ ಪ್ರಧಾನಿ ಬಳಿಗೆ ಹೋಗಿದ್ದ ರಾಜ್ಯ ನಿಯೋಗದಲ್ಲಿದ್ದ ಜಯ ಮೃತ್ಯುಂಜಯರಿಗೆ ಪ್ರಧಾನಿಯ ನಡವಳಿಕೆ ಸರಿ ಬರಲಿಲ್ಲ, ಅದನ್ನು ಸ್ವಾಮೀಜಿ ಬಹಿರಂಗವಾಗಿ ಹೇಳಿದರು. ಅದು ಸರಿಯಾಗಿಯೇ ಇತ್ತು, ಆದರೆ ಅವರು ನರಗುಂದಕ್ಕೆ ಹೋದಾಗ ಸಿ.ಸಿ.ಪಾಟೀಲರ ಬೆಂಬಲಿಗರೇ ಸ್ವಾಮೀಜಿಯ ಮೇಲೆ ದಾಂಧಲೆ ಮಾಡಲು ಹೋಗಿದ್ದರು!


ಆಗಲಾದರೂ ಸ್ವಾಮೀಜಿಗೆ ಅರಿವಾಗಬೇಕಿತ್ತು ಜಾತಿರಾಜಕಾರಣದ ಅಪಾಯ! ಈಗ ಈ ಸ್ವಾಮೀಜಿಯವರ ಪಾದಗಳ ಪ್ರಯಾಣ ಯಡಿಯೂರಪ್ಪನ ಕಡೆಗೆ ಸಾಗಿದಂತೆ ಕಾಣುತ್ತಿದೆ. ಇನ್ನೊಮ್ಮೆ ಲಿಂಗವಂತ ಯಡ್ಡಿಯ ರಾಜ್ಯಭಾರವನ್ನು ಅವರು ಅನುಭವಿಸಬೇಕಂತೆ!


...ಾರವಾಡ: ಛಬ್ಬಿ ವಿಕೆಟ್ ಉದುರಿದ್ದು ಯಾಕೆ?

...ವಿಭಜಿತ ಧಾರವಾಡ ಜಿಲ್ಲೆಯ ಎಂಎಲ್ಸಿ ಎಲೆಕ್ಷನ್ ...ಂದು ತಿರುವು ಪಡೆದುಕೊಳ್ಳುತ್ತಿದೆ. ಎಲ್ಲಾ ಕಡೆ ...ತೆ ಇಲ್ಲೂ ಬಂಡಾಯದ ಬಾವುಟ ಭರ್ಜರಿಯಾಗೇ ...ಸುತ್ತಿದೆ. ಜೆಡಿಎಸ್‌ನ ಹೊರಟ್ಟಿಯೊಂದಿಗೆ ...ಂಗನ ಮಾಡಿಕೊಂಡ ಶೆಟ್ಟರ್‌ಗೆ ಯಡ್ಡಿ ...ನಿಂದ ತಲೆನೋವು ಬಂದಿದ್ದರೆ, ಕಾಂಗ್ರೆಸ್‌ಗೆ ಕೊಟ್ಟ ...ನ್ನೇ ವಾಪಾಸ್ ಪಡೆದುಕೊಳ್ಳುವ ದುರ್ಗತಿ!

...ನಾವಣೆಯಲ್ಲಿ ಸ್ಪರ್ಧಿಸಲು ಬಿ ಫಾರಂ ನೀಡಿ ಅಧಿಕೃತ ... ಎಂದು ಘೋಷಿಸಿದ ನಂತರ ಕಣದಿಂದ ಅಧಿಕೃತ ...ಯನ್ನೇ ನಿವೃತ್ತಿಗೊಳಿಸಿದ ಇತಿಹಾಸ ಕಾಂಗ್ರೆಸ್ ... ಇಲ್ಲವೇ ಇಲ್ಲ. ಆದರೆ ಈ ಸಲ ಅಂತಹ ... ನಡೆದಿದೆ. ರೊಕ್ಕ ಸುರಿದು ಕಾಂಗ್ರೆ ಟಿಕೆಟು ...ಪಿದ್ದ ನಾಗರಾಜ್ ಛಬ್ಬಿಗೆ ಕಾಸೂ ಹೋಯ್ತು, ...ಯೂ ಹೋಯ್ತು ಅನ್ನೋ ಪರಿಸ್ಥಿತಿ. ಕಾಂಗ್ರೆಸ್‌ನ







...ಂಪ್ರದಾಯಿಕ ನಡೆಯ ಹಿಂದೆ ಮುಖ್ಯಮಂತ್ರಿ ...ಮಯ್ಯನ ದೂರಾಲೋಚನೆ ಮತ್ತು ಸೀಟು ...ಳ್ಳುವ ಪೊಲಿಟಿಕ್ಸ್ ಇದೆ ಎನ್ನುವ ಮಾತು ...ದ್ಯಂತ ಕೇಳಿಬರುತ್ತಿದೆ.

...ರವಾಡ-ಹಾವೇರಿ ಜಂಟಿ ಕ್ಷೇತ್ರದಿಂದ ಇಬ್ಬರು ...ಸಿಗಳು ಆಯ್ಕೆಯಾಗುವ ಅವಕಾಶವಿದೆ. ಹಾಗಾಗಿ ...ಬ್ಬರಿ 10 ಜನ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ...ಯ ಪಕ್ಷಗಳ ಅಧಿಕೃತ ಅಭ್ಯರ್ಥಿಗಳಲ್ಲದೆ ಬಂಡಾಯ ...ಗಳು, ಪಕ್ಷೇತರ ಅಭ್ಯರ್ಥಿಗಳೂ ಕಣದಲ್ಲಿದ್ದರೂ ...ು ನಾಮಪತ್ರ ವಾಪಾಸ್ ಪಡೆದಿಲ್ಲ ಎನ್ನುವುದು ... ಅಂತದ್ದರಲ್ಲಿ ಶತಮಾನದ ಪಾರ್ಟಿ ಕಾಂಗ್ರೆಸ್ ...ನ್ನ ಅಭ್ಯರ್ಥಿಯನ್ನು ನಿವೃತ್ತಿಗೊಳಿಸುತ್ತೆನ್ನುವುದೇ ...ಮಿಲಿಯನ್ ಡಾಲರ್ ಪ್ರಶ್ನೆಯಾಗಿ ಕಾಡುತ್ತಿದೆ.

...ಗ್ರೆ ಟಿಕೆಟಿಗಾಗಿ ಶ್ರೀನಿವಾಸ ಮಾನೆ ಹಾಗೂ ...ಃ ಛಬ್ಬಿ ನಡುವೆ ಪೈಪೋಟಿ ಇದ್ದದ್ದು, ಇನ್ನಿಲ್ಲದ ... ನಡೆಸಿ ಹೈಕಮಾಂಡ್‌ನಿಂದ ಇಬ್ಬರೂ ಓಕೆ ...ಂದದ್ದು, ನಾಮಪತ್ರ ಸಲ್ಲಿಸಿ ಚುನಾವಣಾ ಕಣಕ್ಕೆ ... ಎಲ್ಲವೂ ಈಗ ಇತಿಹಾಸ. ಯಾಕೆಂದರೆ ...ಜ್ ಛಬ್ಬಿಯ ವಿಕೆಟನ್ನು ಸ್ವತಃ ಕಾಂಗ್ರೆಸ್ಸೇ ...ಸಿಕೊಂಡಿದೆ.


...ಯ ನಾಯಕರ ಪ್ರತಿಷ್ಠೆಯ ಕಚ್ಚಾಟದ ಜೊತೆಗೆ ...ಮಂತ್ರಿ ಸಿದ್ದರಾಮಯ್ಯನವರ ದೂರದೃಷ್ಟಿಯೂ ಇದರ ...ಲಸ ಮಾಡಿದೆ ಎನ್ನಲಾಗುತ್ತಿದೆ. ಸಿದ್ದರಾಮಯ್ಯನ ...ದಿ ಉಳಿಯೋದು, ಬಿಡೋದು ಈ ಚುನಾವಣೆಯ ...ಶದ ಮೇಲೆ ಅವಲಂಬಿತವಾಗಿದೆ ಎಂಬ ...ಗಳು ಕೇಳಿಬರುತ್ತಿವೆ. ಮಲ್ಲಿಕಾರ್ಜುನ್ ...ನವರನ್ನು ಸಿಎಂ ಮಾಡಿ ದಲಿತ ಸಿಎಂ ಬೇಡಿಕೆಯನ್ನು ...ಲು ಕಾಂಗ್ರೆಸ್ ಹೈಕಮಾಂಡ್ ಒಲವು ಹೊಂದಿದೆ

ಎಂಬ ಅಂತೆಕಂತೆಗಳು ಹುಟ್ಟಿಕೊಳ್ಳುವುದಕ್ಕೂ ಇಂಥಾ ವಾತಾವರಣವೇ ಕಾರಣ. ಈ ಚುನಾವಣೆಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಹೆಚ್ಚು ಸ್ಥಾನಗಳನ್ನು ಗೆದ್ದುಕೊಂಡು ತನ್ನ ಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಳ್ಳುವುದು ಸಿದ್ದರಾಮಯ್ಯನ ಉದ್ದೇಶ. ಹಾಗಾಗಿಯೇ ಎಲ್ಲೆಲ್ಲಿ ಸೋಲಿನ ಸಾಧ್ಯತೆ ಇದೆಯೋ, ಅದರ ಪ್ರಮಾಣವನ್ನು ತಗ್ಗಿಸಿಕೊಳ್ಳುವ ಯೋಜನೆಯನ್ನು ರೂಪಿಸಿ ಜಾರಿಗೆ ತರಲಾಗುತ್ತಿದೆ. ನಾಗರಾಜ್ ಛಬ್ಬಿಯ ನಿವೃತ್ತಿ ಕೂಡಾ ಅಂತಹುದೇ ಯೋಜನೆಯ ಒಂದು ಭಾಗವಿದ್ದರೂ ಇರಬಹುದು.

ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್‌ಗೆ ಪ್ರಾಬಲ್ಯವಿದ್ದರೂ ಇಲ್ಲಿ ತಮ್ಮ ಅಭ್ಯರ್ಥಿ ಸೋಲಬಹುದೆನ್ನುವ ಅನುಮಾನ ಕಾಂಗ್ರೆಸ್ ನಾಯಕರನ್ನು ಕಾಡಲು ಮುಖ್ಯ ಕಾರಣವಾಗಿದ್ದೇ ಲೋಕಲ್ ನಾಯಕರ ಬಣ ರಾಜಕಾರಣ. ನಾಗರಾಜ್ ಛಬ್ಬಿ ದಿಲ್ಲಿ ಮಟ್ಟದಲ್ಲಿ ಬಿ ಫಾರಂ ಗಿಟ್ಟಿಸುವಲ್ಲಿ ಯಶಸ್ವಿಯಾಗಿದ್ದರೂ ಜಿಲ್ಲೆಯ ರಾಜಕಾರಣದಲ್ಲಿ ಆತನ ಬೆನ್ನಿಗೆ ನಿಂತದ್ದು ಜಿಲ್ಲಾ ಉಸ್ತುವಾರಿ ಸಚಿವ ವಿನಯ್ ಕುಲಕರ್ಣಿ ಮತ್ತು ಶಾಸಕ ಪ್ರಸಾದ್ ಅಬ್ಬಯ್ಯ ಮಾತ್ರ. ಇನ್ನುಳಿದಂತೆ ಗದಗ ಜಿಲ್ಲೆಯ ಪ್ರಭಾವಿ ರಾಜಕಾರಣಿ ಕಂ ಮಂತ್ರಿ ಹೆಚ್.ಕೆ. ಪಾಟೀಲ್, ಹಾವೇರಿ ಜಿಲ್ಲೆಯ ಮಂತ್ರಿ ಮನೋಹರ ತಹಸೀಲ್ದಾರ್, ಸಂಸದೀಯ ಕಾರ್ಯದರ್ಶಿ ಸಿ.ಎಸ್. ಶಿವಳ್ಳಿ, ಮಾಜಿ ಸಚಿವ ಸಂತೋಷ್ ಲಾಡ್ ಇವರೆಲ್ಲಾ ನಾಗರಾಜ್ ಛಬ್ಬಿಯ ಸ್ಪರ್ಧೆಯನ್ನು ಕಿಂಚಿತ್ತೂ ಇಷ್ಟಪಡಲಿಲ್ಲ. ನಾಗರಾಜ್ ಛಬ್ಬಿ ಸ್ಪರ್ಧಿಸಿ ಗೆದ್ದುಬಿಟ್ಟರೆ, ಈಗಷ್ಟೇ ರಾಜಕಾರಣದ ಬೆಳಕು ಕಂಡು ಮಂತ್ರಿಗಿರಿ ಸಿಗುತ್ತಿದ್ದಂತೆಯೇ ಹಿರಿಯ ರಾಜಕಾರಣಿಗಳಿಗೆ ಕ್ಯಾರೇ ಎನ್ನದೆ ವರ್ತಿಸುತ್ತಿರುವ ವಿನಯ್ ಕುಲಕರ್ಣಿ ಜಿಲ್ಲೆಯಲ್ಲಿ ಮತ್ತಷ್ಟು ಪ್ರಭಾವಿ ಆಗಿಬಿಡುತ್ತಾನೆ ಎನ್ನುವುದು ಇವರೆಲ್ಲರ ಅಳುಕು. ಹಾಗಾಗಿಯೇ ಅವರು 'ಆ್ಯಂಟಿ ಛಬ್ಬಿ' ಬ್ರಿಗೇಡ್ ಕಟ್ಟಿಕೊಂಡರು. ಹಾಗಂತ ಉಳಿದವರೇನೂ ಒಗ್ಗಟ್ಟಾಗಿಲ್ಲ; ಆದರೆ ಛಬ್ಬಿ ಸೋಲಿಸುವ ವಿಚಾರದಲ್ಲಿ ಒಮ್ಮತಕ್ಕೆ ಬಂದಿದ್ದರಷ್ಟೆ. ಇದರ ವಾಸನೆ ಸಿದ್ದು ಮೊದಲ್ಗೊಂಡು ಕಾಂಗ್ರೆಸ್ ನಾಯಕರು ಮೂಗಿಗೆ ಬಡಿಯಲು ದೀರ್ಘಕಾಲವೇನೂ ಬೇಕಾಗಲಿಲ್ಲ. ಅದರ ಎಫೆಕ್ಟು ಛಬ್ಬಿ ನಿವೃತ್ತಿ ಮೂಲಕ ಹೊರಬಿದ್ದಿದೆ.

ಛಬ್ಬಿ ನಿವೃತ್ತಿ ಪ್ರಕರಣ ಕೇವಲ ಕಾಂಗ್ರೆಸ್ ಬಂಡಾಯದ ಆಯಾಮವನ್ನಷ್ಟೇ ಹೊಂದಿಲ್ಲ, ಬಿಜೆಪಿ ಗೆಲುವಿನ ಮಗ್ಗುಲನ್ನೂ ಒಳಗೊಂಡಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ ಬೆಂಬಲಿತರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಆಯ್ಕೆಯಾಗುವ ಮೊದಲ ಅಭ್ಯರ್ಥಿ ಕಾಂಗ್ರೆಸ್ಸಿಗನಾಗಿರುವುದು ಡೌಟಿಲ್ಲ. ಆದರೆ ಎರಡನೇ ಸ್ಥಾನಕ್ಕೆ ಆಯ್ಕೆಯಾಗುವವರು ಯಾರು ಎಂಬ ಪ್ರಶ್ನೆ ಇಲ್ಲಿಯವರೆಗೂ ಇತ್ತು. ಯಾಕೆಂದರೆ ಜಗದೀಶ್ ಶೆಟ್ಟರ್‌ನ ತಮ್ಮ ಪ್ರದೀಪ್ ಶೆಟ್ಟರ್‌ಗೆ ಕಾಂಗ್ರೆಸ್‌ನ ಎರಡನೇ ಅಭ್ಯರ್ಥಿ ಸ್ಪರ್ಧೆ ಒಡ್ಡುವ ಎಲ್ಲಾ ಸಾಧ್ಯತೆಯೂ ಇತ್ತು. ಆದರೆ ಈಗ ಕಾಂಗ್ರೆಸ್‌ನ ಎರಡನೇ ಹುರಿಯಾಳು ನಿವೃತ್ತಿ ಹೊಂದಿರುವುದರಿಂದ ಪ್ರದೀಪ್ ಶೆಟ್ಟರ್‌ನ ಗೆಲುವು ಮತ್ತಷ್ಟು ಸಲೀಸಾದಂತಾಗಿದೆ! ಕಾಂಗ್ರೆಸ್ ನಡೆಯ ಬಗ್ಗೆ ಅನುಮಾನಗಳು ಹುಟ್ಟಿಕೊಂಡಿರುವುದೇ ಈ ಕಾರಣಕ್ಕೆ.

ಶೆಟ್ಟರ್ ತಮ್ಮನೇ ಗೆಲ್ಲಲಿ ಅಂತ ಸಿಎಂ ಸಿದ್ದರಾಮಯ್ಯ ನಿಗೂ ಅನ್ನಿಸಿತಾ? ಎಂಬ ಇನ್ನೊಂದು ಅನುಮಾನವೂ ಜನರನ್ನು ಕಾಡುತ್ತಿದೆ. ಇದಕ್ಕೆ ಕಾರಣ ಇಲ್ಲದಿಲ್ಲ. ಪ್ರದೀಪ್ ಶೆಟ್ಟರ್‌ನನ್ನು ಸೋಲಿಸಿ ಜಗದೀಶ್ ಶೆಟ್ಟರ್‌ನ ಪ್ರಾಬಲ್ಯ ಮುರಿಯಬೇಕೆಂದು ಬಿಜೆಪಿ ರಾಜ್ಯಾಧ್ಯಕ್ಷ ರೇಸಿನಲ್ಲಿರುವ ಯಡ್ಡಿ ಮಸಲತ್ತು ನಡೆಸಿರೋದು ರಹಸ್ಯವಾಗೇನೂ ಉಳಿದಿಲ್ಲ. ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ನಿಂತಿರುವ ಮಾಜಿ ಪಾಲಿಕೆ ಸದಸ್ಯೆ ರಾಜಶ್ರೀ ಜಡಿಗೆ ಯಡ್ಡಿ ಅಪರೋಕ್ಷ ಸಹಾಯಹಸ್ತ ಚಾಚಿದ್ದಾರೆ. ಸವಣೂರ ನಗರಸಭೆಯ ಅಧ್ಯಕ್ಷೆಯಾಗಿರುವ ನಿರ್ಮಲಾ ಅಕ್ಕಿ ಕೂಡಾ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. ಇದೂ ಸಹ ಶೆಟ್ಟರ್‌ಗೆ ನಿದ್ದೆಗೆಡಿಸುವಂತೆ ಮಾಡಿದೆ. ಪ್ರದೀಪ್ ಶೆಟ್ಟರ್ ಸೋತು, ಯಡ್ಡಿ ಬಲಾಢ್ಯಗೊಳ್ಳುವ ಈ ಅವಕಾಶವನ್ನು ತಪ್ಪಿಸಬೇಕೆಂದು ಸಿದ್ದು ಲೆಕ್ಕಾಚಾರ ಹಾಕಿದ್ದರೂ ಅಚ್ಚರಿಯಿಲ್ಲ.





ಕಾಂಗ್ರೆಸ್ ನಾಯಕರಿಗೆ ತಮ್ಮ ಎರಡನೇ ಅಭ್ಯರ್ಥಿ ಸೋಲುವ ಭೀತಿ ಕಾಣಿಸಿಕೊಂಡಿದ್ದಕ್ಕೆ ಮತ್ತೂ ಒಂದು ಕಾರಣವಿದೆ. ಸಿಎಂ ಸಿದ್ದರಾಮಯ್ಯರ 'ಅಹಿಂದ' ಪಾಲಿಸಿ ಮತ್ತು ಸ್ವತಃ ಸಿದ್ದು ಕುರುಬ ಸಮುದಾಯಕ್ಕೆ ಸೇರಿರುವುದರಿಂದ ಕುರುಬ ಮತಗಳು ಕಾಂಗ್ರೆಸ್‌ಗೆ ತಪ್ಪದೇ ಹಾಜರಿ ಹಾಕುತ್ತವೆ ಎಂದು ಲೆಕ್ಕಿಸಲಾಗಿತ್ತು. ಆದರೆ ಯಾವಾಗ ಹಸಿರು-ಸೇನೆ, ರೈತ ಸಂಘದ ಪಕ್ಷೇತರ ಅಭ್ಯರ್ಥಿಯಾಗಿ ಕುರುಬ ಜನಾಂಗದ ಸಿದ್ದು ತೇಜಿ ಕಣಕ್ಕಿಳಿದನೋ ಆಗ ಕಾಂಗ್ರೆಸ್‌ಗೆ ಕುರುಬ ಮತಗಳ ಭೀತಿ ಕಾಣಿಸಿಕೊಂಡಿದೆ.


ಅಲ್ಲದೇ ತೇಜಿ ಬೆಂಬಲಕ್ಕೆ ಎಡಪಕ್ಷಗಳು, ಸರ್ವೋದಯ ಪಕ್ಷದ ಪುಟ್ಟಣ್ಣಯ್ಯ ನಿಂತದ್ದು ಕಾಂಗ್ರೆಸ್‌ನ ಭೀತಿಯನ್ನು ಮತ್ತಷ್ಟು ಹೆಚ್ಚಿಸಿತ್ತು. ಇಲ್ಲದ ಉಸಾಬರಿ ಯಾಕೆ ಎಂಬ ಅಂತಿಮ ತೀರ್ಮಾನಕ್ಕೆ ಬಂದ ನಾಯಕರು ಛಬ್ಬಿಯನ್ನು ಹರಕೆ ಕುರಿಯನ್ನಾಗಿಸಿದ್ದಾರೆ.


ನಾಗರಾಜ್ ಛಬ್ಬಿಯ ಹೈಡ್ರಾಮಾವನ್ನು ಲೋಕಲ್ ಪೊಲಿಟಿಕ್ಸ್‌ಗೆ ಅನ್ವಯಿಸಿ ಹೇಳುವುದಾದರೆ ಇದು ಜಿಲ್ಲಾ ಉಸ್ತುವಾರಿ ಸಚಿವ ವಿನಯ ಕುಲಕರ್ಣಿಗೆ ಭಾರಿ ಹಿನ್ನಡೆಯೇ ಸರಿ. ರಾಜಕೀಯ ಚದುರಂಗದಾಟದಲ್ಲಿ ಇನ್ನೂ ಪಳಗಬೇಕಾಗಿರುವ ವಿನಯ ಕುಲಕರ್ಣಿ ಹಿರಿಯ ತಲೆಗಳನ್ನು ಮೂಲೆಗುಂಪು ಮಾಡಿ ನಾಗರಾಜ ಛಬ್ಬಿಯ ಬೆನ್ನಿಗೆ ನಿಲ್ಲುವ ಆತುರ ತೋರಿದ್ದಕ್ಕೆ ಬೆಲೆ ತೆರಬೇಕಾಗಿ ಬಂದಿದೆ. ಅಂದಹಾಗೆ ಶೆಟ್ಟರ್-ಹೊರಟ್ಟಿ ದೋಸ್ತಿಯ ಫಲವಾಗಿ ಜೆಡಿಎಸ್‌ನಿಂದ ನಾಮಕಾವಸ್ಥೆಯೆಂಬಂತೆ ಕಣಕ್ಕಿಳಿದಿದ್ದ ಜೆಡಿಎಸ್ ಅಭ್ಯರ್ಥಿ ವಾಗೀಶ್ ಪ್ರಸಾದ್ ಚುನಾವಣಾ ಅಖಾಡದಿಂದಲೇ ನಾಪತ್ತೆಯಾಗಿರೋದು ಜನರ ನಡುವೆ ನಗೆಪಾಟಲಿಗೆ ಈಡಾಗಿದೆ.

– ಹುಬ್ಬಳಿಯಾಂವ









...ಜೆಪಿಗೆ ಯತ್ನಾಳನೇ ಎಡವಟ್ಟು!

...ಲತಃ ಚೆಡ್ಡಿಯಾಗಿರುವ ಯತ್ನಾಳ್ ಅವಿಭಜಿತ ...ಪುರ ಜಿಲ್ಲೆಯಲ್ಲಿ ಕೋಮುಗಲಭೆಗಳ ಬೆಂಕಿಯಲ್ಲೇ ...ವನ್ನು ಅರಳಿಸುತ್ತ ಬಂದ ರಾಜಕಾರಣಿ. ಈತ ...ಯಿ ಸರ್ಕಾರದಲ್ಲಿ ಸಚಿವರಾಗಿ ಕಿಸಿದದ್ದು ಶೂನ್ಯ. ...ಸಾಲಿ ಕಾರ್ಡ್ ಬಳಸಿಯೇ ರಾಜಕಾರಣ ಮಾಡುತ್ತ ...ವ ಯತ್ನಾಳ್ ಹಲವಾರು ಶಿಕ್ಷಣ ಸಂಸ್ಥೆ ಸ್ಥಾಪಿಸಿ ...ಮಾಡಿಕೊಳ್ಳುತ್ತಿರುವ ಶೂರ. ರಾಜಕಾರಣದಿಂದಲೇ ...ಬ್ಯುಸಿನೆಸ್ ಮಾಡಿಕೊಂಡಿರುವ ಚೆಡ್ಡಿ ಯತ್ನಾಳ್, ...ನೋದ ಕಳೆದ ಸಲ ಶಾಸಕನಾಗಲು ಯತ್ನಿಸಿ ...ಸಿದ್ದ ಮಹಾವೀರ.

ಸಂಸತ್ ಚುನಾವಣೆಯಲ್ಲಿ 'ಮೋದಿ ಅಲೆ' ಎದ್ದಿತೆಂದು ಮತ್ತೆ ಬಿಜೆಪಿಗೆ ಹಾರಿ ಬಂದು ಅವಕಾಶಗಳಿಗಾಗಿ ಕಾದು ಕುಳಿತಿದ್ದ ಯತ್ನಾಳ, ಮೋದಿ ಗೆಲುವಿನ ವಿಜಯೋತ್ಸವದ ನೆಪದಲ್ಲಿ ವಿಜಯಪುರದಲ್ಲಿ ಬೀದಿ ರಂಪಾಟ ನಡೆಸಿ, ಕೋಮುದ್ವೇಷ ಹರಡಿಸಲು ಯತ್ನಿಸಿ ಕೇಸು ಜಡಿಸಿಕೊಂಡಿದ್ದ. ಅನಂತಕುಮಾರ್, ಪ್ರಹ್ಲಾದ್ ಜೋಶಿಗಳ ವಿರೋಧದಿಂದಾಗಿ ಬಿಜೆಪಿಯಲ್ಲಿ ಮೂಲೆಗುಂಪಾಗಿದ್ದ ಯತ್ನಾಳ್ ಯಡಿಯೂರಪ್ಪನ ಜಪ ಆರಂಭಿಸಿದ. ಅದೇ ಧಾವಂತದಲ್ಲಿ ಯಡಿಯೂರಪ್ಪನ ಮೂಲಕ ಎಂಎಲ್ಸಿ ಟಿಕೆಟ್‌ಗೆ ಯತ್ನಿಸಿದ. ಈಗಾಗಲೇ ಜಿ.ಎಸ್.ನ್ಯಾಮಗೌಡ ಎಂಎಲ್ಸಿ ಆಗಿರುವುದರಿಂದ ಅವರಿಗೆ ಟಿಕೆಟ್ ಕೊಡಲೇಬೇಕು ಎಂದು ಬಿಜೆಪಿ ಹೇಳಿದಕೂಡಲೇ ಯತ್ನಾಳ್ ಬಂಡಾಯವೆದ್ದು ಕಣಕ್ಕಿಳಿದಿದ್ದಾನೆ.

"ಯಡಿಯೂರಪ್ಪರನ್ನು ರಾಜ್ಯ ಬಿಜೆಪಿ ಅಧ್ಯಕ್ಷರನ್ನಾಗಿ ಮಾಡಿ ಎಂದು ಒತ್ತಾಯಿಸಿದ್ದರಿಂದ ಬಿಜೆಪಿ ನನಗೆ ಟಿಕೆಟ್ ನೀಡಿಲ್ಲ, ಇದು ಅನ್ಯಾಯ" ಎಂದೆಲ್ಲ ಮತ ಕೇಳುತ್ತಿರುವ ಯತ್ನಾಳರಿಂದ ಕಾಂಗ್ರೆಸ್‌ಗೇನೂ ತೊಂದರೆ ಇಲ್ಲ, ಆದರೆ ಬಿಜೆಪಿಗೆ ಮಾತ್ರ ಕೊಂಚ ಹೆದರಿಕೆಯಾದಂತಿದೆ. ಪಂಚಮಸಾಲಿ ಕಾರ್ಡ್ ಮತ್ತು ರೊಕ್ಕದ ತಾಕತ್ತು ಎರಡೂ ಕೆಲಸ ಮಾಡಿದರೆ ಯತ್ನಾಳ್ ಬಿಜೆಪಿಗೆ ಎಡವಟ್ಟು ಮಾಡಲಿದ್ದಾರೆ. ಈ ಕೊರಗಿನಲ್ಲೇ ಬಿಜೆಪಿ ಇದ್ದಬದ್ದ ಶಕ್ತಿ ಬಳಸಿ ತನ್ನ ಸೀಟನ್ನು ಉಳಿಸಿಕೊಳ್ಳಲು ಹರಸಾಹಸ ಮಾಡುತ್ತಿದೆ.


ಇಲ್ಲಿ ಜೆಡಿಎಸ್ ಆಟಕ್ಕೂ ಇಲ್ಲ, ಲೆಕ್ಕಕ್ಕೂ ಇಲ್ಲ. ಇದು ಜೆಡಿಎಸ್ ವರಿಷ್ಠರಿಗೆ ಗೊತ್ತಿದ್ದೂ ಅವರು ಕಾಂತಪ್ಪ ಇಂಚಗೇರಿ ಎಂಬಾತನನ್ನು ಕಣಕ್ಕಿಳಿಸಿ, ಕುರುಬರ ಓಟು ಕಸಿಯುತ್ತೇವೆ ಎಂದು ಹಾಸ್ಯಾಸ್ಪದವಾಗಿ ಮಾತನಾಡುತ್ತಿದ್ದಾರೆ. ಪಾಪ ಅಭ್ಯರ್ಥಿ ಇಂಚಗೇರಿಗೆ ಎರಡಂಕಿಯ ಓಟೂ ಬೀಳುವ ಸಾಧ್ಯತೆ ಇಲ್ಲ. ಒಟ್ಟಿನಲ್ಲಿ ಕಾಂಗ್ರೆಸ್‌ನ ಎಸ್.ಆರ್.ಪಾಟೀಲರ ಗೆಲುವು 4ನೇ ಸಲ ಖಚಿತವಾಗಿದೆ. ಇನ್ನೊಂದು ಸ್ಥಾನಕ್ಕಾಗಿ ಬಿಜೆಪಿಯ ನ್ಯಾಮಗೌಡ ಮತ್ತು ಬಂಡಾಯಗಾರ ಯತ್ನಾಳ್ ನಡುವೆ ಕುಸ್ತಿ ನಡೆದಿದೆ. ಈ ಕುಸ್ತಿಯಲ್ಲಿ ಲಿಂಗಾಯತರ ಒಳಪಂಗಡದ ರಾಜಕಾರಣ, ಗ್ರಾಮ ಪಂಚಾಯತಿ ಸದಸ್ಯರ ನಿಲುವುಗಳು ನಿರ್ಣಾಯಕವಾಗಲಿವೆ...


■ ಮೇಘರಾಜ್


ಕೊಡಗು: ಸುಜಾ ಕುಶಾಲಪ್ಪನಿಂದಾಗಿ ಬಿಜೆಪಿಗೆ ಮುಖಭಂ

ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ನಡೆಯುತ್ತಿರುವ ಚುನಾವಣೆ ಕೊಡಗು ಜಿಲ್ಲೆಯಲ್ಲಿ ವಿಚಿತ್ರ ತಿರುವುಗಳನ್ನು ಪಡೆದು ಈಗ ಅಂತಿಮ ಘಟ್ಟಕ್ಕೆ ತಲುಪಿದೆ. ಪ್ರಮುಖ ಮೂರು ರಾಜಕೀಯ ಪಕ್ಷಗಳಲ್ಲಿ ಕೊನೆಗಳಿಗೆಯಲ್ಲಿ ಅಭ್ಯರ್ಥಿಗಳು ಬದಲಾಗಿ ಚುನಾವಣೆಯ ಚಿತ್ರಣವನ್ನೇ ಬದಲು ಮಾಡಿದೆ. ಇಬ್ಬರು ಸ್ವತಂತ್ರ ಅಭ್ಯರ್ಥಿಗಳು ಕೂಡ ಕಣದಲ್ಲಿ ಉಳಿದುಕೊಂಡಿದ್ದಾರೆ. ಆದರೆ ಅವರಿಬ್ಬರ ಸ್ಪರ್ಧೆ ಯಾವುದೇ ಮಹತ್ವವನ್ನು ಉಳಿಸಿಕೊಂಡಿಲ್ಲ. ಚುನಾವಣೆ ಮೇಲ್ನೋಟಕ್ಕೆ ತ್ರಿಕೋನ ಸ್ಪರ್ಧೆ ಎಂದು ಕಾಣಿಸಿಕೊಂಡರೂ ವಾಸ್ತವದಲ್ಲಿ ಬಿಜೆಪಿ ಮತ್ತು ಕಾಂಗ್ರೆಸಿನ ನಡುವೆ ನಡೆಯುವ ಚುನಾವಣೆ ಇದು ಎನ್ನುವುದರಲ್ಲಿ ಸಂಶಯವಿಲ್ಲ.

ಅತ್ಯಂತ ಕಡಿಮೆ ಮತದಾರರು ಇರುವ ಕ್ಷೇತ್ರ ಕೊಡಗು ಜಿಲ್ಲೆ. ಕೇವಲ 1,400ರಷ್ಟು ಮತದಾರರು ಈ ಕ್ಷೇತ್ರದಲ್ಲಿ ಇದ್ದಾರೆ. ಲೆಕ್ಕಾಚಾರದ ಪ್ರಕಾರ ಕಾಂಗ್ರೆಸಿಗಿಂತಲೂ ಬಿಜೆಪಿಗೆ ಸಣ್ಣ ಪ್ರಮಾಣದ ಹೆಚ್ಚಿನ ಮತ ಇದೆ. ಈ ಎರಡೂ ಪಕ್ಷಕ್ಕೂ ಶೇ. 50ರಷ್ಟು ಮತ ಇಲ್ಲ, ಹಾಗಾಗಿ ಬೇರೆ ಮತಗಳನ್ನು ಈ ಪಕ್ಷಗಳು ಅವಲಂಬಿಸಬೇಕಾದ ಅನಿವಾರ್ಯತೆ ಇದೆ. ಜೆಡಿಎಸ್ ಪಕ್ಷಕ್ಕೆ ಗೆಲ್ಲಬಲ್ಲ ಮತ ಇಲ್ಲದಿದ್ದರೂ ಒಂದಷ್ಟು ಮತಗಳು ಇರುವುದು ಮತ್ತು ಅದರ ಅಭ್ಯರ್ಥಿ ಸ್ಥಳೀಯರೇ ಆಗಿದ್ದು ಮತ ಪಡೆಯಬಲ್ಲರೆ ಮತ್ತು ಬೇರೆ ಪಕ್ಷಗಳ ಮತವನ್ನು ಸೆಳೆಯಬಲ್ಲರೇ ಎಂಬುದರ ಮೇಲೆ ಫಲಿತಾಂಶವು ಅಡಗಿದೆ.


ಸಂಕೇತ್ ಪೂವಯ್ಯ


ಸುನೀಲ್


ಚಂದ್ರಮೌಳಿ

ಚುನಾವಣೆ ಘೋಷಣೆಯಾಗುತ್ತಿದ್ದಂತೆ ಬಿಜೆಪಿ ತನ್ನ ಅಭ್ಯರ್ಥಿಯನ್ನು ಘೋಷಿಸಿತ್ತು. ಹಾಗೆ ನೋಡಿದರೆ ಮೂರು ತಿಂಗಳ ಹಿಂದೆಯೇ ಬಿಜೆಪಿ ಪಕ್ಷವು ತನ್ನ ಅಭ್ಯರ್ಥಿ ಮಂಡೇಪಂಡ ಸುಜಾ ಕುಶಾಲಪ್ಪ ಎಂದು ಘೋಷಣೆಯನ್ನು ಮಾಡಿತ್ತು. ಪಕ್ಷದ ಒಳಗೆ ಒಂದು ವರ್ಗ ಇವರನ್ನು ವಿರೋಧಿಸಿದ್ದರೂ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ಬಹಳ ಬಿರುಸನ್ನು ಪ್ರದರ್ಶಿಸಿ, ಕೊಡಗಿನಾದ್ಯಂತ ಸುಜಾ ಕುಶಾಲಪ್ಪ ಚರ್ಚೆಯ ವಿಚಾರವಾಗಿ ಹೊರಹೊಮ್ಮಿ, ತನ್ನ ಪರ ಅಲ್ಲದಿದ್ದರೂ ಒಂದು ರೀತಿಯ ಹವಾ ಸೃಷ್ಟಿಸುವಲ್ಲಿ ಸಫಲರಾಗಿದ್ದರು.

ಕಾಂಗ್ರೆಸ್ ಪಕ್ಷದಲ್ಲಿ ಎಂದಿನಂತೆ ಅಭ್ಯರ್ಥಿ ಯಾರು ಎಂಬುದೇ ಕೊನೆಯಗಳಿಗೆಯವರೆಗೆ ಪ್ರಕಟವಾಗಿರಲಿಲ್ಲ. ವಿಧಾನ ಪರಿಷತ್ತಿನ ಮಾಜಿ ಸದಸ್ಯ ಅರುಣ್ ಮಾಚಯ್ಯ ಅವರನ್ನು ಅನಧಿಕೃತ ಅಭ್ಯರ್ಥಿ ಎಂದು ಘೋಷಿಸಿ, ಅವರಿಗೆ ಪ್ರಚಾರದಲ್ಲಿ ತೊಡಗಿಸಿಕೊಳ್ಳಲು ವರಿಷ್ಠರು ಹೇಳಿದ್ದ ಕಾರಣ ಅವರು ಪ್ರಚಾರದಲ್ಲಿ ತೊಡಗಿಕೊಂಡಿದ್ದರು. ಆದರೆ ಟಿಪ್ಪು ಜನ್ಮ ದಿನಾಚರಣೆಯ ಸಂಬಂಧ ನಡೆದಂತಹ ಘಟನೆ ಮತ್ತು ಈ ಘಟನೆಯ ಹಿನ್ನೆಲೆಯಲ್ಲಿ ರಚನೆಗೊಂಡ ಜಾತ್ಯತೀತ ಶಕ್ತಿಗಳ ಸಮಾನ ಮನಸ್ಕರ ಒಕ್ಕೂಟ ಹಾಗೂ ಈ ಒಕ್ಕೂಟದ ಗೌರವಾಧ್ಯಕ್ಷ ಎ.ಕೆ.ಸುಬ್ಬಯ್ಯರವರು, ಟಿಪ್ಪು ಜನ್ಮ ದಿನಾಚರಣೆಗೆ ಬೆಂಬಲ ನೀಡದ ವ್ಯಕ್ತಿಗಳಿಗೆ ಕಾಂಗ್ರೆಸ್ ಪಕ್ಷ ಟಿಕೆಟು ನೀಡಿದರೆ, ಒಕ್ಕೂಟದಿಂದ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲಾಗುವುದು ಎಂದು ಮಾಡಿದ ಘೋಷಣೆ ಕಾಂಗ್ರೆಸ್ ಪಕ್ಷಕ್ಕೆ ತನ್ನ ಅಭ್ಯರ್ಥಿಯನ್ನು ಬದಲಾಯಿಸಬೇಕಾದಂತಹ ಅನಿವಾರ್ಯತೆ ತಂದಿತು. ಹಾಗಾಗಿ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಶಿಫಾರಸ್ಸು ಆಗದಿದ್ದರೂ ಚುನಾವಣಾ ರೇಸ್‌ನಲ್ಲಿ ಇದ್ದ ಚಂದ್ರಮೌಳಿ ಅವರಿಗೆ ಕಾಂಗ್ರೆಸ್ ಮಣೆ ಹಾಕಿತು.


ಜಾತ್ಯತೀತ ಜನತಾದಳದ ಪರಿಸ್ಥಿತಿ ಭಿನ್ನವಾಗಿಯೇನೂ ಇರಲಿಲ್ಲ. ದಳದ ನಾಯಕ ಕುಮಾರಸ್ವಾಮಿ ಕೊಡಗು ಜಿಲ್ಲೆಗೆ ಆಗಮಿಸಿ ಒಂದು ದಿನ ವಾಸ್ತವ್ಯ ಹೂಡಿ, ಮೊದಲು ಅಭ್ಯರ್ಥಿ ಎಂದು ಘೋಷಿಸಿದ್ದ ಅಭ್ಯರ್ಥಿಯನ್ನು ಬದಲಿಸಿ, ಉದ್ಯಮಿ ನರೇಶ್ ಎಂಬವರ ಹೆಸರನ್ನು ಪ್ರಕಟಿಸಿದ್ದರು. ಕೊನೆಗಳಿಗೆಯಲ್ಲಿ ಆ ಹೆಸರನ್ನೂ ಬದಲಿಸಿ ಸ್ಥಳೀಯರಾದ ಸಂಕೇತ್ ಪೂವಯ್ಯ ಎಂಬವರನ್ನು ಅಭ್ಯರ್ಥಿ ಎಂದು ಘೋಷಿಸಿದರು. ಇದರ ಜೊತೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಎಸ್.ಪಿ. ಮಹದೇವಪ್ಪ ಮತ್ತು ಶ್ರೀಮತಿ ನಾಗವೇಣಿ ಎಂಬವರು ನಾಮಪತ್ರವನ್ನು ಸಲ್ಲಿಸಿದ್ದರು.

ಕೊನೆ ಗಳಿಗೆಯ ಬದಲಾವಣೆ

ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ಸುಜಾ ಕುಶಾಲಪ್ಪನವರಿಗೆ ಕ್ರಿಮಿನಲ್ ಮೊಕದ್ದಮೆಯೊಂದರಲ್ಲಿ ಎರಡು ವರ್ಷಗಳ ಸಜೆಯಾಗಿದೆ. ಇತ್ತೀಚೆಗಷ್ಟೇ ಈ ತೀರ್ಪು ಹೊರಬಿದ್ದಿದ್ದು, ಇದರ ವಿರುದ್ಧ ಅವರು ಮೇಲ್ಮನವಿಯನ್ನು ಸಲ್ಲಿಸಿದ್ದಾರೆ. ಇದು 'ವಿಜಯವಾಣಿ' ಪತ್ರಿಕೆಯ ವರದಿಗಾರ ರಮೇಶ್ ಕುಟ್ಟಪ್ಪ ಎಂಬವರಿಗೆ ಬೆದರಿಕೆ ಹಾಕಿದ ಪ್ರಕರಣ. ಇತರೆ ಪ್ರಕರಣಗಳಲ್ಲಿ ಸುಜಾ ಕುಶಾಲಪ್ಪ ತಪ್ಪಿಸಿಕೊಂಡಿದ್ದರೂ ಮಹತ್ವ ಇಲ್ಲದ ಈ ಪ್ರಕರಣದಲ್ಲಿ ಅವರಿಗೆ ಶಿಕ್ಷೆಯಾಗಿತ್ತು. ಇದು ಪ್ರಕೃತಿಯ ಆಟವೆನ್ನಬಹುದು. ಈ ಬಗ್ಗೆ ಸ್ವತಃ ವಕೀಲರಾದ ಚಂದ್ರಮೌಳಿಯವರು ದಾಖಲಾತಿಗಳನ್ನು ಸಂಗ್ರಹಿಸಿದ ಕೂಡಲೇ ಎಚ್ಚೆತ್ತ ಬಿಜೆಪಿ ಪಕ್ಷ ಸುಜಾ ಕುಶಾಲಪ್ಪನವರ ಸಹೋದರ ಸುನಿಲ್ ಸುಬ್ರಹ್ಮಣಿಯ ವರಿಂದಲೂ ನಾಮಪತ್ರವನ್ನು ಸಲ್ಲಿಕೆ ಮಾಡಿಸಿತು. ಬಿಜೆಪಿಯ ಮತ್ತೊಬ್ಬ ಮುಖಂಡ ಎಸ್.ಜಿ.ಮೇದಪ್ಪ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರವನ್ನು ಸಲ್ಲಿಸಿದ್ದರು. ಸುನಿಲ್ ಸುಬ್ರಹ್ಮಣಿ ಬಿಜೆಪಿ ಪಕ್ಷದ ಡಮ್ಮಿ ಅಭ್ಯರ್ಥಿ ಎಂದು ನಾಮಪತ್ರವನ್ನು ಸಲ್ಲಿಸಲಾಗಿತ್ತು. ಎಸ್.ಜಿ. ಮೇದಪ್ಪ ಟಿಕೆಟ್ ಆಕಾಂಕ್ಷಿಯಾಗಿದ್ದರೂ ಅವರಿಗೆ ಟಿಕೆಟು ನೀಡಿರಲಿಲ್ಲ. ಸುಜಾ ಕುಶಾಲಪ್ಪನವರ ನಾಮಪತ್ರ ಒಂದು ವೇಳೆ ತಿರಸ್ಕೃತಗೊಂಡರೆ ತನ್ನನ್ನೇ ಅಧಿಕೃತ ಅಭ್ಯರ್ಥಿ ಎಂದು ಘೋಷಿಸಬೇಕೆಂದು ಎಸ್.ಜಿ. ಮೇದಪ್ಪ ಕೇಳಿಕೊಂಡಿದ್ದರು. ಅವರ ಬೇಡಿಕೆಯಲ್ಲಿ ನ್ಯಾಯವೂ ಇತ್ತು. ಈ ಹಿಂದೆ ಅರುಣ್ ಮಾಚಯ್ಯ ತನ್ನ ಸ್ಥಾನಕ್ಕೆ ರಾಜಿನಾಮೆ ನೀಡಿದ್ದ ಸಂದರ್ಭದಲ್ಲಿ ನಡೆದಂತಹ ಉಪ ಚುನಾವಣೆಯಲ್ಲಿ ಎಸ್.ಜಿ. ಮೇದಪ್ಪ ಆಯ್ಕೆಯಾಗಿ, ಒಂದು ವರ್ಷಗಳ ಕಾಲ ವಿಧಾನ ಪರಿಷತ್ ಸದಸ್ಯರಾಗಿದ್ದರು. ಹಾಗಾಗಿ ಪೂರ್ಣ ಪ್ರಮಾಣದಲ್ಲಿ ತನಗೆ ಕಾರ್ಯ ನಿರ್ವಹಿಸಲು ಸಾಧ್ಯವಾಗಿಲ್ಲ; ಒಂದು ಅವಧಿಗೆ ತನಗೆ ಅವಕಾಶ ನೀಡಿ ಎಂದು ಎಸ್.ಜಿ. ಮೇದಪ್ಪ ಬಿಜೆಪಿಯ ಮುಖಂಡರಲ್ಲಿ ಅಂಗಲಾಚಿದ್ದರು.

ತಿರಸ್ಕೃತಗೊಂಡ ಸುಜಾ ಕುಶಾಲಪ್ಪನ ನಾಮಪತ್ರ

ಬಿಜೆಪಿಯ ಅಧಿಕೃತ ಅಭ್ಯರ್ಥಿ ಸುಜಾ ಕುಶಾಲಪ್ಪನವರ ನಾಮಪತ್ರಕ್ಕೆ ಚಂದ್ರಮೌಳಿಯವರು ಆಕ್ಷೇಪವನ್ನು ವ್ಯಕ್ತಪಡಿಸಿದರು. ಎರಡು ವರ್ಷ ಸಜೆಯಾಗಿದ್ದು, ಶಿಕ್ಷೆ ಜಾರಿಗೊಳಿಸಲು ತಡೆಯಾಜ್ಞೆಯನ್ನು ಪಡೆಯಲಾಗಿದೆ. ಆದರೆ ಶಿಕ್ಷೆಗೆ ತಡೆ ತಂದಿಲ್ಲ, ಹಾಗಾಗಿ ಅದು ಊರ್ಜಿತದಲ್ಲಿ ಇರುವುದರಿಂದ ಎರಡು ವರ್ಷಕ್ಕೂ ಮೇಲ್ಪಟ್ಟು


ಸುಜಾ ಕುಶಾಲಪ್ಪ

ಯಾರಾದರೂ ಶಿಕ್ಷೆಗೆ ಒಳಗಾದರೆ ಅಂತಹವರಿಗೆ ಚುನಾವಣೆ ಯಲ್ಲಿ ಸ್ಪರ್ಧಿಸಲು ಅವಕಾಶ ಇರುವುದಿಲ್ಲ ಎಂಬ ನಿಯಮದ ಅಡಿಯಲ್ಲಿ ನಾಮಪತ್ರವನ್ನು ತಿರಸ್ಕರಿಸಬೇಕೆಂದು ಚಂದ್ರಮೌಳಿ ಯವರು ವಾದಿಸಿದ್ದರು. ಅವರ ಈ ವಾದವನ್ನು ಪುರಸ್ಕರಿಸಿದ ಚುನಾವಣಾಧಿಕಾರಿ ಸುಜಾ ಕುಶಾಲಪ್ಪನವರ ನಾಮಪತ್ರವನ್ನು ತಿರಸ್ಕೃತಗೊಳಿಸಿ ಆದೇಶವನ್ನು ಹೊರಡಿಸಿದರು.

ಬಿಜೆಪಿ ಪಕ್ಷಕ್ಕೆ ಇದು ದೊಡ್ಡ ಆಘಾತವನ್ನು ಉಂಟುಮಾಡಿತು. ಸುಜಾ ಕುಶಾಲಪ್ಪನವರ ಮೇಲೆ ಹಲವು ಆರೋಪಗಳು ಇದ್ದರೂ ಅವೆಲ್ಲವನ್ನು ಧಿಕ್ಕರಿಸಿ, ಬಿಜೆಪಿ ಅವರಿಗೆ ಟಿಕೆಟನ್ನು ನೀಡಿತ್ತು. ಚುನಾವಣೆಯು ಹಣ ಬಲದ ಮೇಲೆ ನಡೆಯುವ ಕಾರಣ, ಹಣ ಬಲ ಹಾಗೂ ತೋಳ್ಬಲ ಎರಡರಲ್ಲೂ ಶಕ್ತರಾಗಿರುವ ಸುಜಾ ಕುಶಾಲಪ್ಪನವರಿಗೆ ಟಿಕೆಟು ನೀಡಿದ್ದರೂ ನಾಮಪತ್ರ ತಿರಸ್ಕೃತಗೊಂಡಿದ್ದು ಬಿಜೆಪಿಗೆ ಮುಖಭಂಗವಾಗಿತ್ತು. ಮೊದಲ ಸುತ್ತಿನ ಸೋಲು ಇದಾಗಿತ್ತು. ನಾಮಪತ್ರ ತಿರಸ್ಕೃತಗೊಂಡ ಕೂಡಲೇ ಸುನಿಲ್ ಸುಬ್ರಹ್ಮಣಿಯವರನ್ನು ಬಿಜೆಪಿಯ ಅಧಿಕೃತ ಅಭ್ಯರ್ಥಿ ಎಂದು ಘೋಷಿಸಲಾಯಿತು. ಇದಕ್ಕೆ ಬಿಜೆಪಿ ಆಂತರಿಕ ವಲಯದಲ್ಲಿ ಸಾಕಷ್ಟು ಆಕ್ಷೇಪಗಳು ಕೇಳಿಬಂತು. "ಹಿರಿಯ ಸಹೋದರ ಅಪ್ಪಚ್ಚು ರಂಜನ್ ಶಾಸಕರಾಗಿದ್ದಾರೆ. ಅವರ ಸಹೋದರ ಸುಜಾ ಕುಶಾಲಪ್ಪನವರಿಗೆ ಸ್ಪರ್ಧಿಸಲು ಅವಕಾಶವನ್ನೂ ನೀಡಿ, ಅವರ ನಾಮಪತ್ರ ತಿರಸ್ಕೃತಗೊಂಡ ಕೂಡಲೇ, ಮತ್ತೊಬ್ಬ ಸಹೋದರ ಸುನಿಲ್ ಸುಬಹ್ಮಣಿಯವರನ್ನು ಅಧಿಕೃತ ಅಭ್ಯರ್ಥಿ ಎಂದು ಘೋಷಿಸಿದ್ದು ಕೊಡಗು ಜಿಲ್ಲೆಯಲ್ಲಿ ಬಿಜೆಪಿ ಪಕ್ಷ ಕುಟುಂಬ ರಾಜಕಾರಣವನ್ನು ಮಾಡುತ್ತಿದೆ. ಬೇರೆಯವರಿಗೆ ಪಕ್ಷದಲ್ಲಿ ಸ್ಥಾನವೇ ಇಲ್ಲ" ಎಂಬ ಮಾತು ಕೇಳಿಬಂತು. ಹಾಗಾಗಿ ನಾಮಪತ್ರ ಸಲ್ಲಿಸಿದ್ದ ಎಸ್.ಜಿ.ಮೇದಪ್ಪ ನಾಮಪತ್ರವನ್ನು ಹಿಂತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು. ಕೊನೆಯಲ್ಲಿ ಚೌಕಾಸಿಗಳು ನಡೆದು, ವ್ಯವಹಾರಗಳು ಕುದುರಿದ ನಂತರ ಎಸ್.ಜಿ.ಮೇದಪ್ಪ ತಮ್ಮ ನಾಮಪತ್ರವನ್ನು ಹಿಂದಕ್ಕೆ ಪಡೆದುಕೊಂಡರು.

ಚುನಾವಣಾ ಅಧಿಕಾರಿಗಳ ಮೇಲೆ ಆರೋಪ

ಕೊಡಗು ಜಿಲ್ಲೆಯಲ್ಲಿ ಚುನಾವಣಾ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವವರು ಜಿಲ್ಲಾಧಿಕಾರಿಗಳಾದ ಮೀರ್ ಅನೀಸ್ ಅಹ್ಮದ್‌ರವರು. ಕೆಲವೇ ದಿನಗಳ ಕಾಲ ನಿವೃತ್ತಿಗೆ ಇರುವುದರಿಂದ ಅನವಶ್ಯಕವಾದ ಯಾವುದೇ ಗೊಂದಲಕ್ಕೆ ಅವಕಾಶ ನೀಡದೆ ಅವರು ಚುನಾವಣಾ ಪ್ರಕ್ರಿಯೆಯಲ್ಲಿ ಮಾತ್ರವಲ್ಲ, ಜಿಲ್ಲೆಯ ಎಲ್ಲಾ ಕೆಲಸ ಕಾರ್ಯಗಳಲ್ಲೂ ತೊಡಗಿಕೊಂಡಿ[...] ಕಾನೂನಿನ ರೀತಿಯಲ್ಲಿ ನಾಮ ಪತ್ರವನ್ನು ತಿರಸ್ಕೃತಗೊಳಿಸಿದರೂ ಕೂಡ, ಬಿಜೆಪಿ ಪಕ್ಷವೇ ಚುನಾವಣಾಧಿಕಾರಿಯ ವಿರುದ್ಧ ಮುಗಿಬಿದ್ದಿದೆ. ರಾಜ್ಯ ಸರಕಾರದ ಆಣತಿಯಂತೆ ಕಾರ್ಯ ನಿರ್ವಹಿಸಿದ್ದಾರೆ ಎಂದು ಶಾಸಕರಾದ ಕೆ.ಜಿ.ಬೋ[...] ಹಾಗೂ ಅಪ್ಪಚ್ಚು ರಂಜನ್ ಆರೋಪಿಸಿದ್ದು "ಇ[...] ರಾಜ್ಯ ಸರಕಾರದ ಷಡ್ಯಂತ್ರ ಎಂದು ಹೇಳಿದ್ದಾರೆ. ಚುನಾವಣೆ ಸಮರ್ಪಕವಾಗಿ ನಡೆಯುವುದಿಲ್ಲ. ಚುನಾವಣಾಧಿಕಾರಿಗಳು ಜಿಲ್ಲಾಧಿಕಾರಿಗಳ ನೆಲೆಯ[...] ಕಾರ್ಯ ನಿರ್ವಹಿಸಿದ್ದಾರೆ" ಎಂಬ ಆರೋಪವ[...] ಮಾಡಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಎ.ಕೆ.ಸು[...] "ನ್ಯಾಯಾಲಯ ಸುಜಾ ಕುಶಾಲಪ್ಪನವರ ವಿರುದ[...] ನೀಡಿದ ತೀರ್ಪು ಕೂಡ ಷಡ್ಯಂತ್ರವೇ?" ಎಂದ[...] ಪ್ರಶ್ನಿಸಿದ್ದಾರೆ. ಸುನಿಲ್ ಸುಬ್ರಹ್ಮಣಿಯವರಂತೂ ಚುನಾವಣೆ ಕಾಂಗ್ರೆಸ್ ಮತ್ತು ಬಿಜೆಪಿಯ ವಿರು[...] ಅಲ್ಲ, ಇದು ಕೇವಲ ಸುನಿಲ್ ಸುಬ್ರಹ್ಮಣಿ ಮ[...] ಸಿದ್ದರಾಮಯ್ಯನವರ ನಡುವೆ ನಡೆಯುತ್ತಿರುವ ಚುನಾವಣೆ ಎಂದು ಹೇಳಿದ್ದಾರೆ. ತಾವು ಡಮ್ಮಿ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದ್ದೇ ತಮ್ಮ ಪಕ್ಷದ ಅಧಿಕೃತ ಅಭ್ಯರ್ಥಿಯ ನಾಮಪತ್ರ ತಿರಸ್ಕೃತಗೊ[...] ಎಂಬ ಕಾರಣಕ್ಕಾಗಿ ಎಂದು ತಿಳಿದಿದ್ದರೂ ಕೂ[...] ತಮಗೆ ಆದ ಆಘಾತದಿಂದ ತಪ್ಪಿಸಿಕೊಳ್ಳಲು ಈ[...] ಆರೋಪವನ್ನು ಮಾಡಿದ್ದಾರೆ.

ಈಗ ಚುನಾವಣೆ ಆರಂಭದಲ್ಲಿ ಇದ್ದಂತಹ [...] ಬದಲಾಗಿ ಹೊಸದಾಗಿ ರೂಪುಗೊಳ್ಳುತ್ತಿದೆ. ಯ[...] ಭರಾಟೆ ಯಲ್ಲಿ ಬಿಜೆಪಿ ಪಕ್ಷವು ಚುನಾವಣೆಯ[...] ತೊಡಗಿಕೊಂಡಿತ್ತೋ ಆ ಭರಾಟೆ ಈಗ ಕಂಡುಬರುತ್ತಿಲ್ಲ. ನಾಮಪತ್ರ ತಿರಸ್ಕೃತಗೊಂಡಿದ್ದು[...] ಎಂದು ಪ್ರಶ್ನಿಸಿದರೆ ಉತ್ತರಿಸುವ ಸ್ಥಿತಿಯಲ್ಲಿ ಬಿ[...] ಪಕ್ಷ ಇಲ್ಲ. ಹಾಗಾಗಿ ಅಬ್ಬರ ಕಡಿಮೆಯಾಗಿದೆ. ಮತ್ತೊಂದು ಕಡೆ ವಕೀಲರಾಗಿ, ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಉತ್ತಮ ಹೆಸರನ್ನು ಪಡೆದಿ[...] ಚಂದ್ರಮೌಳಿ ಕಾಂಗ್ರೆಸಿಗರಲ್ಲಿ ವಿಶ್ವಾಸವನ್ನು ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಿಜೆಪಿ ಪ[...] ಏನೇ ಮಾಡಿದರೂ ಅದನ್ನು ಕಾಂಗ್ರೆಸಿಗರು ಪ್ರಶ್ನಿಸುತ್ತಿರಲಿಲ್ಲ. ಕಮಲ ಕಾಂಗ್ರೆಸಿಗರು ಕಾಂಗ್ರೆ[...] ಹೆಚ್ಚು ಇರುವ ಕಾರಣ ಮತ್ತು ಅವರ ತೋಳ್ಬ[...] ಸೇರಿದಂತೆ ಎಲ್ಲಾ ರೀತಿಯ ಬಲಪ್ರದರ್ಶನಕ್ಕೆ [...] ತಟ್ಟಿ ನಿಲ್ಲುವ ಶಕ್ತಿ ಕಾಂಗ್ರೆಸ್ ಪಕ್ಷದಲ್ಲಿ ಇಲ್ಲ. ಚಂದ್ರಮೌಳಿ ಮೊದಲ ಬಾರಿಗೆ ಕೊಡಗು ಜಿ[...] ಅತ್ಯಂತ ಪ್ರಬಲ ಎನಿಸಿಕೊಂಡ ಸುಜಾ ಕುಶಾಲ[...] ನಾಮಪತ್ರ ತಿರಸ್ಕೃತಗೊಳ್ಳಲು ಕಾರಣಕರ್ತರಾಗಿ[...] ಕಾಂಗ್ರೆಸ್ ಪಕ್ಷಕ್ಕೂ ಪ್ರತಿ ಸಮರ ಮಾಡಲು ಬ[...] ಎಂಬ ವಿಶ್ವಾಸವನ್ನು ಚಂದ್ರಮೌಳಿ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಮೂಡಿಸಿದ್ದಾರೆ. ಹಾಗಾಗಿ ಕಾಂಗ್ರೆಸಿಗರು ಈಗ ತಮ್ಮಲ್ಲಿದ್ದಂತಹ ಗುಂಪುಗಾರಿಕೆಯನ್ನು ಬದಿಗಿಟ್ಟು ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಈಗ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾಗಿ ನೇಮಕಗೊಂಡಿರುವ ದಿನೇಶ್ ಗುಂಡೂರಾವ್ [...] ಗುಂಪುಗಳನ್ನು ಒಟ್ಟಾಗಿ ಕರೆದುಕೊಂಡು ಹೋಗುತ್ತಿದ್ದಾರೆ ಮತ್ತು ಕೆಲವೊಂದು ಸಂದರ್ಭ[...] ಖಡಕ್ ಆಗಿ ಮಾತನಾಡುತ್ತಿದ್ದಾರೆ. ಇಷ್ಟರಮಟ[...] ಕಾಂಗ್ರೆಸ್ ಪಕ್ಷಕ್ಕೆ ಒಂದು ರೀತಿಯ ವಿಶ್ವಾಸವೂ[...] ಸಮಯದ ನಂತರ ಬಂದಿದೆ. ಆದರೂ ಕಾಂಗ್[...] ನಾಯಕತ್ವ ಈಗಲೂ ಚಲಾವಣೆಯನ್ನು ಕಳೆದು[...] ಹಳೆಯ ನಾಣ್ಯಗಳ ಕೈಯಲ್ಲಿಯೇ ಇರುವುದು ದುರಂತ. ಚುನಾವಣೆಯವರೆಗೂ ಎಲ್ಲಿಯೂ ಕಾಣಿಸಿಕೊಳ್ಳದ ವ್ಯಕ್ತಿಗಳು ಹಣದ ಥೈಲಿಯ [...] ಬಂದಾಗ ಮುಂಚೂಣಿಗೆ ಬರುತ್ತಾರೆ.

ಹಾಗಾಗಿ ಬಿಜೆಪಿಯ ಅಬ್ಬರ ಇಳಿಯುತ್ತಿ[...] ಸದ್ದಿಲ್ಲದೆ ಕಾಂಗ್ರೆಸಿನ ಚಂದ್ರಮೌಳಿ ತನ್ನ ಅವಕ[...] ಬಲಪಡಿಸಿ ಕೊಳ್ಳುತ್ತಿದ್ದಾರೆ. ಜಾತ್ಯತೀತ ಜನತಾ[...] ಅಭ್ಯರ್ಥಿ ಯಾಗಿರುವ ಸಂಕೇತ್ ಪೂವಯ್ಯ ಸಮರ್ಥರಾಗಿದ್ದರೂ ಅವರಿಗೆ ಸೀಮಿತವಾದ [...] ಇರುವುದರಿಂದ ಅವರು ಸಾಕಷ್ಟು ಸರ್ಕಸ್ ಮಾಡುತ್ತಿದ್ದಾರೆ. ಆದರೆ ಅವರು ಬಿಜೆಪಿಯ [...] ಕಾಂಗ್ರೆಸಿನ ಮತಗಳನ್ನು ಸೆಳೆಯಲು ಶಕ್ತರೇ [...] ಕಾದುನೋಡಬೇಕಾದ ವಿಚಾರವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸಿನ ನಡು[...] ಸಮಬಲದ ಹೋರಾಟ ಕಂಡುಬಂದಿದ್ದು, ಕೊನೆಗಳಿಗೆಯಲ್ಲಿ ಅಭ್ಯರ್ಥಿಗಳಿಂದ ನಡೆಯಬ[...] ಗಿಮಿಕ್‌ಗಳೇ ಚುನಾವಣೆಯ ಫಲಿತಾಂಶವನ್ನು ನಿರ್ಧರಿಸಲಿದೆ.

■ ಬಿ.ಎನ್.ಮನು


ಶಾಹುಲ್‌ನನ್ನು ಕೊಂದದ್ದು ಹಿಂದೂ ಕಿಡಿಗೇಡಿಗಳು

ಶಾಹುಲ್ ಹಮೀದ್ ಎಂಬ ಅಮಾಯಕ ಯುವಕನನ್ನು ಟಿಪ್ಪು ಜನ್ಮ ದಿನಾಚರಣೆಯ ವೇಳೆಯಲ್ಲಿ ಗುಂಡಿಕ್ಕಿ ಕೊಲ್ಲಲಾಗಿತ್ತು. ಇದರ ಆರೋಪಿಗಳು ಯಾರು ಎಂಬುದು ತಿಳಿದೇ ಇರಲಿಲ್ಲ. "ಲಾರಿಯಲ್ಲಿ ಕೋವಿ ಇಟ್ಟುಕೊಂಡು ಮುಸ್ಲಿಮರು ಬಂದಿದ್ದರು. ಅವರೇ ಗುಂಡು ಹೊಡೆದಿದ್ದಾರೆ. ಅವರ ಕೋವಿಯಿಂದ ಸಿಡಿದ ಗುಂಡಿನಿಂದಲೇ ಶಾಹುಲ್ ಹಮೀದ್ ಸತ್ತಿದ್ದಾನೆ" ಎಂದು ಹಿಂದೂಪರ ಸಂಘಟನೆಯವರು ವಾಟ್ಸಪ್‌ನಲ್ಲಿ ಸಂದೇಶಗಳನ್ನು ರವಾನೆ ಮಾಡಿ "ಮುಸ್ಲಿಮರೊಂದಿಗೆ ವ್ಯವಹರಿಸಬೇಡಿ" ಎಂದು ಸಂದೇಶದಲ್ಲಿ ಕೋರಿಕೊಂಡಿದ್ದರು. ಎಲ್ಲಾ ತಪ್ಪುಗಳನ್ನು ಮುಸ್ಲಿಮರೇ ಮಾಡಿದ್ದಾರೆ ಎಂದು ಅಪಪ್ರಚಾರ ಮಾಡಿದ್ದರು. ಟಿಪ್ಪು ಜನ್ಮ ದಿನಾಚರಣೆ ಚುನಾವಣೆಯ ಮೇಲೆ ಪರಿಣಾಮ ಬೀರುತ್ತದೆ ಮತ್ತು ಬಿಜೆಪಿಗೆ ಅನುಕೂಲವಾಗುತ್ತದೆ ಎಂದು ಬಿಜೆಪಿ ಅಂದಾಜಿಸಿತ್ತು.

ಆದರೆ ಕೊನೆಗಳಿಗೆಯಲ್ಲಿ ಶಾಹುಲ್ ಹಮೀದ್ ಕೊಲೆ ಪ್ರಕರಣದ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ವಿಶೇಷವೆಂದರೆ ಅವರೆಲ್ಲರೂ ಹಿಂದೂಪರ ಸಂಘಟನೆಗಳ ಜೊತೆ ಗುರುತಿಸಿಕೊಂಡವರು. ಇದು ಚುನಾವಣೆಯಲ್ಲಿ ಬಿಜೆಪಿಗೆ ಹೊಡೆತ ಕೊಡುವುದರಲ್ಲಿ ಸಂಶಯವಿಲ್ಲ. ಈ ಪ್ರಕರಣದ ಮೊದಲ ಆರೋಪಿಯಾಗಿರುವ ಕವನ್ ಎಂಬಾತ ಮಡಿಕೇರಿಯಲ್ಲಿ ಕಲ್ಲೆಸೆತ ನಡೆದಾಗ ಓಡಿಹೋಗುವಾಗ ಕಾಲು ಜಾರಿ ಬಿದ್ದು ಸತ್ತ ಕುಟ್ಟಪ್ಪನವರ ಸಂಬಂಧಿಯಾಗಿದ್ದಾನೆ. ಮತ್ತು ಕುಟ್ಟಪ್ಪನವರ ಸಾವಿಗೆ ಪ್ರತೀಕಾರ ಎಂದು ಆತ ಹೇಳಿದ್ದಾನೆ.

ಈ ಘಟನೆ ನಡೆಯುತ್ತಿದ್ದಂತೆ ಎ.ಕೆ.ಸುಬ್ಬಯ್ಯನವರು ಎಲ್ಲದಕ್ಕೂ ಕಾರಣ ಜಿಲ್ಲೆಯ ಹೊಣೆಗೇಡಿ ಶಾಸಕರು ಮತ್ತು ಸಂಸದರು ಎಂದು ಹೇಳಿದ್ದರು. ಕುಟ್ಟಪ್ಪ ಸತ್ತ ಕೂಡಲೇ ಶಾಸಕ ಕೆ.ಜಿ.ಬೋಪಯ್ಯ "ತಕ್ಕ ಉತ್ತರವನ್ನು ನೀಡುತ್ತೇವೆ" ಎಂದು ಹೇಳಿದ್ದರು. ಸುಬ್ಬಯ್ಯನವರು "ಶಾಹುಲ್ ಹಮೀದ್ ಕೊಲೆ ತಕ್ಕ ಉತ್ತರವೇ?" ಎಂದು ಪ್ರಶ್ನಿಸಿದ್ದರು. ಈಗ ಅದೇ ತಕ್ಕ ಉತ್ತರ ಎಂಬುದು ಸಾಬೀತಾಗಿದ್ದು, ಇದು ಚುನಾವಣೆಯ ಮೇಲೂ ಪ್ರಭಾರ ಬೀರುವ ಸಾಧ್ಯತೆಗಳು ಇದೆ.

ಚೆಡ್ಡಿ 'ಸಾಯ್ತಿ' ನಾಡಿಗ್‌ಗೆ ನಾಡಗೀತೆ ಬಗ್ಗೇಕೆ ನಂಜು?!



ಸಹಿಷ್ಣುತೆಯ ದುರ್ಬರ ದಿನಗಳಿವು. ಈ ...ದಲ್ಲಿ ವಿಶ್ವಮಾನವ ಸಂದೇಶ ಸಾರಿದ ಕವಿ ಕುವೆಂಪು ...ತೆ ಸುದ್ದಿಯಾಗಿದ್ದಾರೆ. ಕುವೆಂಪುರನ್ನು ಮೆಚ್ಚುವ ... ಹೊಟ್ಟೆಕಿಚ್ಚು ಪಡುವ ಮಂದಿಗೆಲ್ಲ ಏಕಕಾಲದಲ್ಲಿ ...ಮಾಡಿಕೊಟ್ಟಾತ ಒಬ್ಬ ಹೊಟ್ಟೆಪಾಡಿನ ಕಳ್ಳನೆಂಬುದು ...! ಕುಪ್ಪಳಿಯ ಕವಿ ಮನೆಗೆ ಕನ್ನ ಹಾಕಿದ ಕಳ್ಳ ...ಪ್ರಶಸ್ತಿ-ಪದಕವನ್ನೆಲ್ಲ ದೋಚಿದ್ದಾನೆ. ಅಸಹಿಷ್ಣುತೆಯಿಂದ ...ವಾಗಿ ಕುವೆಂಪುವೂ ಪ್ರಶಸ್ತಿ ಕಳ್ಳನ ಮುಖಾಂತರ ...ದರಾ ಎಂಬಂತಿದೆ ಈ ಘಟನೆ!!

...ನಿಗೇನು ಗೊತ್ತು ಕುವೆಂಪುರ-ಪ್ರಶಸ್ತಿ-ವಿಚಾರಧಾರೆಯ ...ಮೌಲ್ಯ? ಲಾಗಾಯ್ತಿನಿಂದಲೂ ಕುವೆಂಪುರ ...ತಾವಾದಿ ತುಡಿತ-ಮಿಡಿತ ಕಂಡು ಧುಮುಗುಡುತ್ತಲೇ ...ವ ಮೇಲ್ವರ್ಣೀಯ ಜನಿವಾರಿ ಗ್ಯಾಂಗಿಗೆ ತಮ್ಮ ...ರೋಧಿ ಬಲಪಂಥೀಯ ಲಹರಿ ಹರಿಬಿಡಲು ...ಕ್ಕತ್ತ ನೆಪವಾಗಿದೆ. ಚೆಡ್ಡಿ ಚಿಂತನ ಚಿಲುವೆಯ ...ಲ್ಡ್ ಸಾಹಿತಿ ಸುಮತೀಂದ್ರ ನಾಡಿಗ್ ಕುವೆಂಪು ...ತ್ತ ಹಳೆಯ ನಂಜನ್ನು ಮತ್ತೆ ಕಾರಿಕೊಂಡಿದ್ದಾರೆ. ...ವಾರ ಉತ್ತರ ಕನ್ನಡದ ಹಲವೆಡೆಯ ರೋಟರಿ ಕ್ಲಬ್, ಕಾಲೇಜು, ಪುರೋಹಿತಶಾಹಿ ಗುಂಪಿನ ಫಂಕ್ಷನ್‌ಗಳಲ್ಲಿ ಮಿಂಚಿದ್ದ ನಾಡಿಗ್ ಕುವೆಂಪು ವಿರಚಿತ ನಾಡಗೀತೆಯನ್ನು ಮೂದಲಿಸುವ ತೆವಲು ತೋರಿಸಿಕೊಂಡಿದ್ದರು. ನಾಡಗೀತೆ ಟೀಕಿಸಿ ಮನವಾದಿ ಈಗೋ ತೀರಿಸಿಕೊಳ್ಳುವ ಭರದಲ್ಲಿ ಆತ ನಾಡಗೀತೆ ಕಳಪೆ ಹಾಡೆಂದು ಮತ್ತೆ-ಮತ್ತೆ ಬೊಬ್ಬೆ ಹೊಡೆದು ತಿಪ್ಪರಲಾಗ ಹಾಕಿದ್ದು ಮೋಜಾಗಿತ್ತು.

ತನ್ಮೂಲಕ ನಾಡಿಗ್ ಮಹಾನುಭಾವರು ಕುವೆಂಪುರ 'ಭಾರತ ಜನನಿಯ ತನುಜಾತೆ' ಹಾಡಿನಲ್ಲಿನ ನಾಡ ಹಿರಿಮೆ, ಮನುಷ್ಯತ್ವದ ಚಿಂತೆಗಳನ್ನೆಲ್ಲ ಅವಮಾನಿಸುವ ಅಧಿಕ ಪ್ರಸಂಗ ಮೆರೆದಿದ್ದಾರೆ. ಗಡಿಗೆ ಒಳಗಿನ ಅಕ್ಕಿ ಅನ್ನವಾಗಿದೆಯಾ ಎಂದು ನೋಡಲು ಒಂದು ಅಗಳು ಪರೀಕ್ಷಿಸಿದರೆ ಸಾಕಲ್ಲವಾ? ನಾಡಿಗರ 'ದಂಡ'ಯಾತ್ರೆಯುದ್ದಕ್ಕೂ ಆತನ ಜತೆಗೆ ಠಳಾಯಿಸಿದಾತ ಮಹಾಬಲಮೂರ್ತಿ ಕೊಡ್ಲಕೆರೆ ಎಂಬ ಕುಂಡಲಿ ತಜ್ಞ 'ಸಾಯ್ತಿ'! ಬಲಪಂಥೀಯ ಚಿಂತನೆ-ಚಟುವಟಿಕೆಯಲ್ಲಿ ಅರ್ಪಣಾಭಾವದಿಂದ ತೊಡಗಿಸಿಕೊಂಡಿರುವ ಕೊಡ್ಲಕೆರೆಗೆ ಸಹಜವಾಗೇ ನಾಡಿಗ್ ಗುರು ಸಮಾನರು.


ಕುವೆಂಪು ತಮ್ಮ ಜೀವಿತದುದ್ದಕ್ಕೂ ಎಂದೂ ಇಂಥ ಪುರೋಹಿತಶಾಹಿಗಳಿಗೆ ಸೊಪ್ಪು ಹಾಕಿದವರಲ್ಲ. ಅವರೇನಾದರೂ ಈಗ ಬದುಕಿದ್ದರೆ ಪದಕ ಕದ್ದ ಕಳ್ಳನ ಕ್ಷಮಿಸುತ್ತಿದ್ದರು. ಹಾಗಂತ ತನ್ನ ವಿಚಾರ ತಿರುಚುವ, ಪುರೋಹಿತಶಾಹಿ ಸಿದ್ಧಾಂತ ಸಮರ್ಥಿಸುವ ಸೋಗಲಾಡಿ ಸಾಹಿತಿಗಳ ಹೆಡೆಮುರಿ ಕಟ್ಟದೇ ಬಿಡುತ್ತಿರಲಿಲ್ಲ! ಇವತ್ತು ದೇಶದಲ್ಲಿ ಜೋರಾಗಿರುವ ವಿಭಜಕ ರಾಜಕೀಯದ ವಿಕೃತಿಯ ಹರಿಕಾರ ಈ ನಾಡಿಗ್ ಎಂಬುದಕ್ಕೆ ಸಂಶಯವೇ ಇಲ್ಲ. ಹೀಗಾಗಿಯೇ ಆತನ ಬಾಯಲ್ಲಿ ಕುವೆಂಪು ಮತ್ತು ನಾಡಗೀತೆ ಬಗ್ಗೆ ಬೇಡದ ಕೀಳು ಮಾತುಗಳೆಲ್ಲ ಬಂದಿವೆ. ಕುವೆಂಪುರನ್ನು ಅರಗಿಸಿಕೊಳ್ಳಲಾಗದ ಮೇಲ್ವರ್ಗದ ಮಹಾನುಭಾವರು ಹುಚ್ಚುಚ್ಚಾಗಿ ಅರಚುತ್ತಲೇ ಇದ್ದಾರೆ.

ಪುರೋಹಿತಶಾಹಿಗಳ ಜಾತಿಯತೆಯ ಬರ್ಬರತೆ ಕಟುವಾಗಿ ಟೀಕಿಸುತ್ತಿದ್ದ ಕುವೆಂಪುಗೆ ಆಧ್ಯಾತ್ಮದ ಬಗ್ಗೆ ಬಲವಾದ ನಂಬಿಕೆಯಿತ್ತು. ರಾಮನ ಬಗ್ಗೆ ಅಗಾಧ ಪ್ರೀತಿಯಿಟ್ಟು ರಾಮಾಯಣ ದರ್ಶನಂ ಬರೆದಿದ್ದ ಕುವೆಂಪು ರಾಮನ ಮೂಲಕ ಜಾತಿಯತೆ ಬೆಳೆಸುವ ಶಕ್ತಿಗಳಿಗೆ ಸಿಂಹಸ್ವಪ್ನವಾಗಿದ್ದರು. ಶೂದ್ರ ತಪಸ್ವಿ ನಾಟಕವೇ ಇದಕ್ಕೆ ಜೀವಂತ ನಿದರ್ಶನ! ಶೂದ್ರನೊಬ್ಬ ರಾಮನಿಗೆ ಪಾಠವಾಗುವ ದೃಶ್ಯ ಈ ನಾಟಕದಲ್ಲಿದೆ. ಇಂತಿಪ್ಪ ನಾಟಕವನ್ನು ಬಹಳ ಹಿಂದೆಯೇ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರಂಥ ದೊಡ್ಡವರೇ ಟೀಕಿಸಿದ್ದರು. ಆದರೂ ಕುವೆಂಪು ಎದೆಗುಂದದೇ ತಾನು ನಂಬಿದ ತತ್ವ-ಸಿದ್ಧಾಂತ ಧೈರ್ಯವಾಗಿ ಮಂಡಿಸುತ್ತಲೇ ಇದ್ದರು.

ಮಾಸ್ತಿ 'ಪೀಳಿಗೆ'ಯ ನಾಡಿಗ್‌ಗೆ ಕುವೆಂಪುರ ನಾಡಗೀತೆ ಕಳಪೆಯಾಗಿ ಕಂಡಿರುವುದು ಅವರ ಚೆಡ್ಡಿ ಚತುರತೆಗೆ ತಕ್ಕಂತೆಯೇ ಇದೆ. ಪುರೋಹಿತಶಾಹಿಗಳಿಗೆ ಪ್ರಿಯನಾದ ಮಧ್ವರನ್ನು ಕುವೆಂಪು ತಮ್ಮ ಹಾಡಲ್ಲಿ ಅಪ್ಪಿತಪ್ಪಿಯೂ ಪ್ರಸ್ತಾಪಿಸಿಲ್ಲ. ಶೂದ್ರರು ನಿತ್ಯ ನರಕಕ್ಕೆ ಅರ್ಹರೆಂದು ಮಧ್ವ ಹೇಳಿದ್ದು ಕುವೆಂಪು ಸಿಟ್ಟು ಮೂಡಿಸಿರುವುದರಲ್ಲಿ ಅಚ್ಚರಿಯೇನೂ ಇಲ್ಲ. ಇದನ್ನು ತಮ್ಮ ಹಲವು ಭಾಷಣ-ಬರಹಗಳಲ್ಲಿ ಕುವೆಂಪು ನಿರ್ಭಿಡೆಯಿಂದ ಹೇಳಿದ್ದರು! ಆದರೆ ಮಧ್ವರನ್ನು ಈ ಹಾಡಲ್ಲಿ ತುರುಕುವ ಕಿತಾಪತಿ ಇವತ್ತಿಗೂ ನಡೆಯುತ್ತಿದೆ. ಹಲವು ಪದ್ಯಗಳಲ್ಲಿ ಕುವೆಂಪು ಕಡೆಗಣಿಸಿದ್ದ ಮಧ್ವರನ್ನು ತುರುಕಲಾಗಿದೆ. ಇದು ಕುವೆಂಪುರ ವಿಚಾರಧಾರೆಗೆ ಮಾಡುವ ಅಪಚಾರವೇ ಸರಿ.

ಶಿರಸಿಯಲ್ಲಿ ಅಸಹಿಷ್ಣುತೆಯ ಭಯಂಕರ ಭಾಷಣ ಬಿಗಿದಿರುವ ನಾಡಿಗ್‌ಗೆ ಕಲಸುಮೇಲೋಗರದಂತೆ ಕಂಡಿದೆ! ಕಿವಿಗೆ ಹಿತವಾಗುವ ಅರ್ಥವಿಲ್ಲದ ಶಬ್ದಗಳನ್ನು ಭ್ರಮೆಯಲ್ಲಿ ಪೋಣಿಸಿದ್ದು ನಾಡಗೀತೆಯಾಗಿದೆ ಎಂದು ಹೊಟ್ಟೆಕಿಚ್ಚಲ್ಲಿ ಹಲುಬಿರುವ ನಾಡಿಗ್ ಸಂಗೀತಕ್ಕೆ ಅಳವಡಿಸಿದಾಗ ಕಿವಿಗೆ ಹಿತವಾಗುವ ಶಬ್ದಗಳನ್ನು ಕುವೆಂಪು ನಾಡಗೀತೆಯಲ್ಲಿ ಜೋಡಿಸಿದ್ದರೆಂದಿದ್ದಾರೆ. ಇಷ್ಟಕ್ಕೆ ಮನುವಾದಿ ತಹತಹಿತ ತಣ್ಣಗಾಗಿಲ್ಲ. ರವೀಂದ್ರನಾಥ ಠಾಗೋರರು ರಾಷ್ಟ್ರಗೀತೆ ಬರೆದಂತೆ ತಾನೂ ಬರೆದು ಫೇಮಸ್ ಆಗುವ ಒಂದೇ ಗುರಿಯಿಂದ ಕುವೆಂಪು ಕಳಪೆ ನಾಡಗೀತೆ ಬರೆದಿದ್ದಾರಂತೆ!

ನಾಡಗೀತೆಯಲ್ಲಿ ಬರುವ ಹಲವು ಹೆಸರುಗಳು ಬರೀ ಬೋಗಸ್ ಕಲ್ಪನೆಯಂತೆ. ಕಪಿಲ, ಗೌತಮರ ಬಗ್ಗೆ ಸ್ಪಷ್ಟತೆಯಿಲ್ಲವಂತೆ. ಕಪಿಲ-ಗೌತಮರು ಹಲವರಿದ್ದಾರಂತೆ.




ಏನಿದರ ಅರ್ಥ? ಪುರೋಹಿತಶಾಹಿಗಳ ಕುಲತಿಲಕರಾದ ಮಧ್ವರ ಹೆಸರು ನಾಡಗೀತೆಯಲ್ಲಿ ಪ್ರಸ್ತಾಪಿಸಲಿಲ್ಲ ಎಂಬ ನಂಜು ಇದು ತಾನೆ? ಒಟ್ಟಿನಲ್ಲಿ ನಾಡಿಗ್‌ರ ಮಾತಿನ ತಾತ್ಪರ್ಯ ಇಷ್ಟೇ. ಮೇಲ್ವರ್ಣೀಯರಿಗೆ ಅಸಹನೀಯವಾದ 'ಭಾರತ ಜನನಿಯ ತನುಜಾತೆ' ಹಾಡನ್ನು ತಕ್ಷಣ ನಾಡಗೀತೆಯ ಸ್ಥಾನದಿಂದ ಬದಲಿಸಬೇಕಂತೆ. ನಾಡಿಗರೂ 'ನಾಡಗೀತೆ' ಬರೆಯಲು ಪ್ರಯತ್ನಿಸಿ ಎಡವಿದ್ದಾರಂತೆ. ಎಂಥ ವಿಕಲ ವ್ಯಂಗ್ಯ ಅಲ್ಲವಾ?!

ಕುವೆಂಪುರ ಈ ಹಾಡು ನಾಡಗೀತೆ ಆಗಿರುವಷ್ಟು ದಿನ ಮಧ್ವರ ಶೂದ್ರ ವಿರೋಧಿ- ಜೀವವಿರೋಧಿ ನೀತಿ-ನಿಲುವು ನಾಡಿಗೆ ಗೊತ್ತಾಗುತ್ತದೆಂಬ ಭೀತಿ ನಾಡಿಗ್‌ರಂಥ ಚೆಡ್ಡಿ ಸಾಹಿತಿಗಳಿಗೆ ಕಾಡುತ್ತಿದೆ. ಹೇಗಾದರೂ ಮಾಡಿ ನಾಡಗೀತೆ ಬದಲಿಸುವ ಹುನ್ನಾರ ವ್ಯವಸ್ಥಿತವಾಗಿ ನಡೆಯುತ್ತಿದೆ. ನಾಡಿಗ್‌ರಂಥ ನಾಲಾಯಕ್ ಚಿಂತಕರಿಗೆ ಅಂಕುಶ ಇಡುವ ಯೋಚನೆ ಮನುಷ್ಯತ್ವವಾದಿಗಳು ಮಾಡುವ ಸಂದರ್ಭ ಬಂದಿದೆ! ಹುಚ್ಚ ವೆಂಕಟ್ ಲೆವೆಲ್‌ನಲ್ಲಿ ಮಾತಾಡುತ್ತಿರುವ ನಾಡಿಗ್‌ಗೆ ಬುದ್ಧಿ ಕಲಿಸೋರು ಯಾರು?

■ ಶುದ್ದೋಧನ

ನಿಂತೇಹೋದ ಶಾಸಕರ ದಿನಾಚರಣೆ



...ೀವರಾಜ ಅರಸು ಶತಮಾನೋತ್ಸವದ ಈ ...ಮಯದಲ್ಲಿ ಅವರು ಜಾರಿಗೆ ತಂದ ಹಲವು ...ಕ್ರಮಗಳನ್ನು ನೆನಪಿಸಿಕೊಳ್ಳಬೇಕು. ಅವುಗಳಲ್ಲಿ ... ದಿನಾಚರಣೆಯೂ ಒಂದು. ಅರಸು ಆಡಳಿತದ ...ರ ಸಮರ್ಥ ವಿರೋಧ ಪಕ್ಷವಿತ್ತು, ದೇವೇಗೌಡರು, ...ಡು ತಿಮ್ಮಪ್ಪ, ಕೋಣಂದೂರು ಲಿಂಗಪ್ಪ, ಎ.ಕೆ. ...ಮ್ಮಿ ಮತ್ತು ಕಮ್ಯುನಿಸ್ಟ್ ಲೀಡರ್‌ಗಳೆಲ್ಲಾ ಇದ್ದರು. ...ಲ್ಲಿ ಇವರುಗಳ ಹೋರಾಟ ಮತ್ತವರು ಬಳಸುತ್ತಿದ್ದ ...ದ ಭಾಷೆ ಎಲ್ಲವೂ ಅರ್ಥಪೂರ್ಣ ಸಮರ ...ದಂತಾಗುತ್ತಿತ್ತು.

...ಗಿನ ವಾಗ್ವಾದ ನೋಡಿದರೆ ಈ ಪರಮ ವೈರಿಗಳು ... ತಮ್ಮ ಜೀವಿತಾವಧಿಯಲ್ಲಿ ಮುಖಕ್ಕೆ ಮುಖ [illegible]

ಕಲೆಗೆ ಮಾತ್ರ ಇಂತಹ ವೈರುಧ್ಯಗಳನ್ನ ಒಗ್ಗೂಡಿಸುವ ಶಕ್ತಿಯಿದೆ ಎಂದು ನನಗೆ ನಮ್ಮೂರ ಕಲಾವಿದರನ್ನ ನೋಡಿ ಅರಿವಿಗೆ ಬಂದಿತ್ತು. ನಮ್ಮ ಹಳ್ಳಿಗಳಲ್ಲಿ ದಾಯಾದಿ ಕಲಹವೇ ಜಾಸ್ತಿ. ಅವುಗಳು ಅತ್ಯಂತ ಕ್ಷುಲ್ಲಕ ಕಾರಣಕ್ಕೆ ಸಂಭವಿಸುತ್ತಿದ್ದವು. ಬದು ಮೇಸಿಕೊಂಡಿದ್ದಾನೆ, ಹೊಲವನ್ನೇ ಮೇಸಿದ್ದಾನೆ, ನಮ್ಮ ಬದುವಿನಲ್ಲಿ ಹುಲ್ಲು ಕಿತ್ತಿದ್ದಾನೆ, ನಮ್ಮ ಮರದಲ್ಲಿ ಸೊಪ್ಪು ಕಡಿದಿದ್ದಾನೆ, ಒಂದು ಮೊಳ ನಮ್ಮ ಕಡೆಗೆ ಉತ್ತುಬಿಟ್ಟದ್ದಾನೆ... ಇಂತ ಜಗಳದಿಂದ ಮಾತನಾಡದಂತಾಗುತ್ತಿದ್ದರು. ಎಲ್ಲಕ್ಕಿಂತ ಹೆಚ್ಚಿನ ಜಗಳ ಹೆಂಗಸರ ಚಾಡಿಮಾತಿನಿಂದ ಜರುಗುತ್ತಿದ್ದವು.


ಇಡೀ ಜೀವಮಾನ ಒಂದೇ ಹಟ್ಟಿಯಲ್ಲಿದ್ದರೂ ಮಾತನಾಡದೇ ಸತ್ತ ದಾಯಾದಿಗಳನ್ನು ನೋಡಿದ್ದೇನೆ. ಆದರೆ ಇವರುಗಳು ಅನಿವಾರ್ಯವಾಗಿ ಮಾತನಾಡಿದ್ದು ನಮ್ಮೂರಲ್ಲಿ ಆಡಿದ ನಾಟಕಗಳ ಮುಖಾಂತರ. ಆಗ ನಾನು ನೋಡಿದ ರಾಮಾಯಣದಲ್ಲಿ ರಾವಣ ಮತ್ತು ಆಂಜನೇಯ ಪಾತ್ರಧಾರಿಗಳು ಮಾತನಾಡುತ್ತಿರಲಿಲ್ಲ. ರಾವಣನ ಪಾತ್ರಧಾರಿ ಚಿಕ್ಕಪ್ಪನಾದರೆ ಆಂಜನೇಯ ಅಣ್ಣನ ಮಗ. ಇವರ ದ್ವೇಷಕ್ಕೆ ಪಾತ್ರಗಳು ಎಂತಹ ಆಯಾಮವೊದಗಿಸಿದ್ದವೆಂದರೆ ರಾವಣನ ಆಸ್ಥಾನದಲ್ಲಿ ಅದ್ಭುತವಾಗಿ ಅಭಿನಯಿಸಿದ್ದರು.

ಇನ್ನ ರಾಮ ಮತ್ತು ವಾಲಿ ಬಹಳ ವರ್ಷ ಮಾತನಾಡಿರಲಿಲ್ಲ. ಆದರೆ ಎದುರಾಬದುರ ನಿಂತು ಯುದ್ಧ ಮಾಡುವುದರ ಬದಲು ರಾಮ ಮರೆಯಲ್ಲಿ ನಿಂತು ಬಾಣ ಬಿಟ್ಟಿದ್ದರಿಂದ, ಬಾಣ ವಾಲಿಯ ಹಲ್ಲಿಗೇ ತಗುಲಿ ರಕ್ತ ಒಸರಿತ್ತು. ಆದರೂ ವಾಲಿ ತಡೆದುಕೊಂಡು ಬೆಳಗ್ಗೆ ಮೇಷ್ಟರಿಗೆ ದೂರು ಕೊಟ್ಟ. ಗುರಿ ಕಲಿಯದ ಅಡ್ನಾಡಿ ರಾಮನ ಅಪರಾಧವನ್ನು ಕ್ಷಮಿಸು, ನಿಜಕ್ಕೂ ವಾಲಿ ಪಾತ್ರ ಅದ್ಭುತವಾಗಿತ್ತೆಂದು ಹೊಗಳಿ ಜಗಳ ಶಮನಗೊಳಿಸಿದರು. ಇಲ್ಲವಾದರೆ ನಾಟಕದ ಮರುದಿನ ದೊಡ್ಡ ಜಗಳವಿತ್ತು. ಸಹಜವಾಗಿ ಆ ಜಗಳಕ್ಕೆ ರಾಮನ ಸೈನ್ಯ ಮತ್ತು ವಾಲಿಯ ಸೈನ್ಯವೂ ರೆಡಿಯಿತ್ತು.

ನಾಟಕದ ಮರುದಿನ ಬಹಳ ಚೆನ್ನಾಗಿರುತ್ತಿತ್ತು. ನಿದ್ರೆ ಗೆಟ್ಟಿದ್ದರೂ ಪಾತ್ರಧಾರಿಗಳು ಜನರ ಬಾಯಿಂದ ತಮ್ಮ ಪಾತ್ರ ಹೇಗೆ ಬಂತು ಎಂದು ಕೇಳುತ್ತಿದ್ದದ್ದು, ಹೆಣ್ಣು ಪಾತ್ರಗಳಿಗೆ ಕಾಯಿ ಕಸಿಕೊಟ್ಟು ಬಸ್ಸಿಗತ್ತಿಸುವುದು, ಬಾಡು ತಂದು ಮೇಷ್ಟರನ್ನು ಊಟಕ್ಕೆ ಕರೆಯುವುದು ಇತ್ಯಾದಿ ಸಂಭ್ರಮ ಹೇಳತೀರದು. ಒಮ್ಮೆ ಕುರುಕ್ಷೇತ್ರ ನಾಟಕ ಅದ್ಭುತವಾಗಿ ಮೂಡಿಬಂದ ಕಾರಣಕ್ಕೆ ಯಾರೂ ನಿದ್ರೆ ಮಾಡದೆ ಮರುದಿನ ಇಡೀ ಊರೇ ಮಲಗಿದ್ದರಿಂದ ಬೀದಿ ಬಿಕೋ ಎನ್ನುತ್ತ ಕುರುಕ್ಷೇತ್ರ ಯುದ್ಧದ ನಂತರ ಉಳಿದಿರುವವರೆ ನಾವು ಎಂಬ ಭೀಕರ ಸ್ಥಿತಿಯನ್ನು ಮನವರಿಕೆ ಮಾಡಿತ್ತು.

ಆಗ ನಮ್ಮ ವಿಧಾನಸೌಧದಲ್ಲೂ ನಡೆಯುತ್ತಿದ್ದ ಶಾಸಕರ ದಿನಾಚರಣೆ ಸುದ್ದಿಗಳೂ ನಾಡಿನಲ್ಲಿ ಚರ್ಚೆಯಾಗಿ ಮನರಂಜನೆಯೊದಗಿಸುತ್ತಿದ್ದವು. ಶಾಸಕನಾದವನು ನಿಜಕ್ಕೂ ಕಲಾವಿದನೇ ಆಗಿರುತ್ತಾನೆ. ಒಂದು ಕ್ಷೇತ್ರದ ಸಕಲಿಷ್ಟು ಗುಣಗಳುಳ್ಳ ಜನಗಳನ್ನ ನಿಭಾಯಿಸುವುದು ಸಾಮಾನ್ಯ ಸಂಗತಿಯಲ್ಲ. ಇಂತಹ ಶಾಸಕರು ದಿನಾಚರಣೆ ದಿವಸ ಆಟ, ನಾಟಕ-ಸಂಗೀತ ಮತ್ತು ಹಾಸ್ಯ ಪಾತ್ರಗಳನ್ನು ಪ್ರದರ್ಶಿಸುತ್ತಿದ್ದರು. ಪೌರಾಣಿಕ ಪ್ರಸಂಗವನ್ನ ಎತ್ತಿಕೊಂಡು ಶಂಕರೇಗೌಡರು ಮತ್ತು ಹೆಚ್.ಟಿ. ಕೃಷ್ಣಪ್ಪನವರು ಶ್ರೀರಾಮ ಪಾದುಕ ಅಥವಾ ಆಂಜನೇಯನ ಪ್ರಸಂಗ ಅಭಿನಯಿಸಿದರೆ ಬಂಗಾರಪ್ಪ ಹಿಂದೂಸ್ತಾನಿ ಹಾಡುತ್ತಿದ್ದರು. ಮೊಯ್ಲಿ ಮತ್ತು ಜೀವರಾಜ್ ಆಳ್ವಾ ದಕ್ಷಿಣ ಕನ್ನಡದ ಭೂತದ ಕುಣಿತ ಮಾಡುತ್ತಿದ್ದರು. ಇನ್ನ ಯಾವ ವೇಷ ಕಟ್ಟಲೂ ಬಾರದ ದೇವೇಗೌಡರು ಕ್ರಿಕೆಟ್ ಕಲಿಯಾಗಿ ಬೌಲರ್‌ಗಳನ್ನು ಬಲಿ ತೆಗೆದುಕೊಳ್ಳುತ್ತಿದ್ದರು. ಎಂ.ಪಿ. ಪ್ರಕಾಶ್ ಜೋಕುಮಾರಸ್ವಾಮಿ ಪ್ರಸಂಗ ಅಭಿನಯಿಸುತ್ತಿದ್ದರು. ಹೊರಟ್ಟಿ, ಸಿದ್ದು ಕುಸ್ತಿ ಮತ್ತು ತರೀಕೆರೆ ನೀಲಕಂಠಪ್ಪನ ಕುಸ್ತಿ ನೋಡುವುದೇ ಚಂದ. ಪಟೇಲರು, ಹೆಗಡೆ, ಲೀಲಾದೇವಿ ಪ್ರಸಾದ್ ಇವರೆಲ್ಲಾ ತಮ್ಮಲ್ಲಿದ್ದ ಕಲೆ ಮೆರೆಯುತ್ತಿದ್ದರು. ಹೆಗಡೆಯವರಂತೂ ಅರಬ್ ದೇಶದ ದೊರೆಯಂತೆ ಕಾಣಿಸಿಕೊಂಡದ್ದನ್ನು ಮರೆಯುವಂತಿಲ್ಲ. ಇನ್ನ ಸುಭದ್ರ ಪರಿಣಯ ನಾಟಕವನ್ನಂತೂ ಅದ್ಭುತವಾಗಿ ಅಭಿನಯಿಸುತ್ತಿದ್ದರು.

ಹೀಗೆ ಸದನದೊಳಗಿನ ವೀರಾವೇಶ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಲೆಯಾಗಿ ಹೊಮ್ಮುತ್ತಿತ್ತು. ಆದರೆ ಸದನದಲ್ಲಿ ಬಿಜೆಪಿಗಳು ಜಾಸ್ತಿಯಾದಂತೆ ಶಾಸಕರ ದಿನಾಚರಣೆ ಕಣ್ಮರೆಯಾಗಿ ಹೋಯಿತು. ಸದನದಲ್ಲಿ ಹಾಸ್ಯವೇ ಇಲ್ಲದಂತಾಯಿತು. ಸಾಮಾನ್ಯವಾಗಿ ಮತೀಯವಾದ ತಲೆ ತುಂಬಿದಾಗ ಕಲೆ ಜಾಗ ಖಾಲಿ ಮಾಡುತ್ತದೆ. ಆ ಜಾಗದಲ್ಲಿ ದ್ವೇಷ, ಅಸಹಿಷ್ಣುತೆ ಆವರಿಸುತ್ತದೆ. ಒಬ್ಬ ಮುಸ್ಲಿಂ ಗೆಳೆಯ




ಹೇಳಿದಂತೆ ಈ ಅಸಹಿಷ್ಣುತೆ ಎಂಬ ಪದ ಭಾರತದ ಸಂಸ್ಕೃತಿಯಲ್ಲಿ ಪದಕೋಶದಲ್ಲಷ್ಟೇ ಇದ್ದ ಪದ. ಅವನ್ನ ಚಾಲ್ತಿಗೆ ತಂದವರು ಈ ಬಿಜೆಪಿಗಳು.

ಮತೀಯವಾದಿಗಳು ಹೆಚ್ಚಾದಲ್ಲಿ ಕಲೆ ಸೊರಗುತ್ತದೆ. ಆ ಜಾಗಕ್ಕೆ ಮತೀಯವಾದಿಗಳ ವಿಕೃತ ಕಲೆಗಳು ಅಡಿಯಿಡುತ್ತವೆ. ಈಗ ವಿಧಾನಸೌಧವೂ ಕಲೆ ಮತ್ತು ಸಂಸ್ಕೃತಿಯಿಂದ ದೂರ ಸರಿಯಲು ಇದೇ ಕಾರಣವಿರಬಹುದು. ಕಳೆದೊಂದು ದಶಕದ ರಾಜಕಾರಣ ನೋಡಿದರೆ ಶಾಸಕರು ತಮ್ಮೆಲ್ಲಾ ಹೋರಾಟದ ಜೊತೆಗೆ ಶಾಸಕರ ದಿನಾಚರಣೆಯನ್ನು ಆಚರಿಸಬೇಕಿತ್ತು. ಆದರೆ ಅಂತಹ ವಾತಾವರಣ ಮರುಸೃಷ್ಟಿಯಾಗಬೇಕಾದರೆ ಮತೀಯವಾದಿಗಳ ಭಾಷೆ ಮತ್ತು ಮನಸ್ಸು ಬದಲಾಗಬೇಕಾಗುತ್ತದೆ.


ಈಗ ನಿಂತುಹೋಗಿರುವ ಶಾಸಕರ ದಿನಾಚರಣೆಯನ್ನು ಅದನ್ನು ಆರಂಭಿಸಿದವರ ನೆನಪಿಗಾದರೂ ಮಾಡಬೇಕಾಗಿದೆ. ಇದು ಅರಸುಗೆ ಸಲ್ಲಿಸುವ ನಿಜವಾದ ಗೌರವ. ಬರಡಾಗುತ್ತಿರುವ ಶಾಸಕರುಗಳ ಮನಸ್ಸು ಮತ್ತೆ ಸಾಂಸ್ಕೃತಿಕವಾಗಿ ಚಿಗುರೊಡೆಯಲು ಕೈಗೊಳ್ಳುವಂತಹ ಮಹತ್ವದ ಕಾರ್ಯ.

■ ಬಿ. ಚಂದ್ರೇಗೌಡ




ಮಂಡ್ಯ ಎಂಎಲ್ಸಿ ಎಲೆಕ್ಷನ್

ಗೌಡರ 'ಮಾಸ್ಟರ್‌ಪ್ಲ್ಯಾನ್' ಡಿಕೆಶಿ 'ಗಪ್‌ಚುಪ್' ಗೇಮ್!



ಡಿ.ಕೆ. ಶಿವಕುಮಾರ್ ಸಾರಥ್ಯದಲ್ಲಿ ಒಗ್ಗೂಡಿರುವ ಕಾಂಗ್ರೆಸ್ ಮುಖಂಡರು



ಎಂಎಲ್ಸಿ ಚುನಾವಣೆ ಸನಿಹವಾಗುತ್ತಿದ್ದಂತೆಯೇ ಮಂಡ್ಯ ರಾಜಕಾರಣ ರಂಗೇರಲು ಶುರುವಾಗಿದೆ. ಮೂವರು ಪಕ್ಷೇತರರೂ ಸೇರಿದಂತೆ ಒಟ್ಟು ಆರು ಜನ ಅಭ್ಯರ್ಥಿಗಳು ಕಣದಲ್ಲಿದ್ದರೂ ನೇರ ಹಣಾಹಣಿ ಇರೋದು ಕಾಂಗ್ರೆಸ್ ಮತ್ತು ಜೆಡಿಎಸ್ ಪಾರ್ಟಿಗಳ ನಡುವೆಯೇ. ಜೆಡಿಎಸ್‌ನ ಭದ್ರಕೋಟೆಯಾದ ಮಂಡ್ಯದಲ್ಲಿ ಬಂಡಾಯವೇ ದೊಡ್ಡಗೌಡರ ಮಂಡೆ ಬಿಸಿ ಮಾಡಿದೆ. ಮೇಲ್ನೋಟಕ್ಕೆ ದಳಪತಿಗಳ ನಡುವೆ ಸಣ್ಣ ಬಿರುಕು ಇರುವಂತೆ ಕಾಣಿಸಿದರೂ ಆಳದಲ್ಲಿ ದೊಡ್ಡ ಕಂದಕವೇ ಬಾಯ್ತೆರೆದು ಕುಳಿತಿರುವುದರಿಂದ ಗೌಡರ ಪಾರ್ಟಿ ತಡಬಡಿಸುವಂತಾಗಿದೆ. ಇದರ ಲಾಭ ಪಡೆದು ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಬೇಕೆಂಬುದು ಮುಖ್ಯಮಂತ್ರಿ ಸಿದ್ದರಾಮಯ್ಯನ ಹೆಬ್ಬಯಕೆ. ಹಾಗಾಗಿಯೇ ಮಂಡ್ಯ ವಿಧಾನಪರಿಷತ್ ಚುನಾವಣಾ ಸಾರಥ್ಯವನ್ನು ಪವರ್ ಮಿನಿಸ್ಟರ್ ಡಿ.ಕೆ.ಶಿ.ಗೆ ವಹಿಸಿದ್ದಾರೆ.

ಜೆಡಿಎಸ್ ಭಿನ್ನಮತವನ್ನು ಡಿ.ಕೆ.ಶಿ ಸಮರ್ಥವಾಗಿ ಬಳಸಿಕೊಳ್ಳುತ್ತಾರೆಂಬ ವಿಶ್ವಾಸದಿಂದ ಕಾಂಗ್ರೆಸ್ ಅಭ್ಯರ್ಥಿ ಎಲ್.ಆರ್.ಶಿವರಾಮೇಗೌಡ ಜೋಷ್‌ನಿಂದ ಕ್ಷೇತ್ರವನ್ನು ಗರಗರ ಸುತ್ತುತ್ತಿದ್ದಾರೆ. ಈಗಾಗಲೇ ಜಿಲ್ಲೆಯ ಬಹುತೇಕ ಹೋಬಳಿ, ತಾಲ್ಲೂಕಿನಲ್ಲಿ ಶಿವರಾಮೇಗೌಡರ ಪ್ರಚಾರದ ಅಬ್ಬರ ಜೋರಾಗಿದೆ. ಇನ್ನು ಇಲ್ಲಿ ಬಿಜೆಪಿ ಆಟಕ್ಕುಂಟು ಲೆಕ್ಕಕ್ಕಿಲ್ಲ. ಎನ್‌ಜಿಓ ಅಡ್ಡೆ ತೆರೆದು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನವನ್ನು ಗೆಬರಿ ಸಾಕಷ್ಟು ಕಮಾಯಿ ಕಂಡಿರುವ ನಹಳ್ಳಿ ನಾಗಣ್ಣಗೌಡ ಬಿಜೆಪಿಯ ಕ್ಯಾಂಡಿಡೇಟು. ಗೆಲ್ಲುವ ಸೂಚನೆಗಳಿರಲಿ, ಶಕುನಗಳೇ ಇಲ್ಲ! ಪಕ್ಷೇತರರು ಪರಿಸ್ಥಿತಿ ಇದಕ್ಕಿಂತ ಭಿನ್ನವಾಗೇನೂ ಇಲ್ಲ.

ದೊಡ್ಡಗೌಡರ ಕುತಂತ್ರಕ್ಕೆ ರಾಮಕೃಷ್ಣ ಬಲಿ!

ಒಟ್ಟಾರೆಯಾಗಿ ಸಾರಾಂಶಿಸುವುದಾದರೆ ದೊಡ್ಡಗೌಡರ ಕುತಂತ್ರ ರಾಜಕಾರಣಕ್ಕೆ ಹಾಲಿ ಎಂಎಲ್ಸಿ ಬಿ.ರಾಮಕೃಷ್ಣ ಬಲಿಯಾಗಿದ್ದಾರೆ. ದೇವೇಗೌಡರ ಕುಟುಂಬ ರಾಜಕಾರಣ ಈ ಬಾರಿ ಶಾಸಕ ಚಲುವರಾಯಸ್ವಾಮಿಯನ್ನು ಹಣಿಯಲು ಮುಂದಾಗಿದೆ. ಕಾರಣವನ್ನು ವಿವರಿಸುವ ಅಗತ್ಯವೇ ಇಲ್ಲ. ಇತ್ತೀಚಿನ ದಿನಗಳಲ್ಲಿ ಜಮೀರ್ ಅಹಮದ್, ಅಖಂಡ ಶ್ರೀನಿವಾಸಮೂರ್ತಿ, ಗೋಪಾಲಯ್ಯ, ಎಚ್.ಸಿ.ಬಾಲಕೃಷ್ಣ ಪುಟ್ಟಣ್ಣ ಮೊದಲಾದವರ ಬಂಡಾಯ ಪಡೆಯನ್ನು ಚಲುವರಾಯಸ್ವಾಮಿ ಕಟ್ಟಿಕೊಂಡು ಕುಮಾರಸ್ವಾಮಿಯ ವಿರುದ್ಧ ತಿರುಗಿಬಿದ್ದಿರೋದು ರಹಸ್ಯವಾಗೇನೂ ಉಳಿದಿಲ್ಲ. ಚಲುವರಾಯಸ್ವಾಮಿಯನ್ನು ಮಟ್ಟಹಾಕಿದರೆ ಉಳಿದವರು ತೆಪ್ಪಗಾಗುತ್ತಾರೆಂಬುದು ಗೌಡರ ಚಾಣಾಕ್ಷ ನಿರ್ಧಾರ. ಹಾಗಾಗಿಯೇ ಅಪ್ಪ-ಮಗನ ಜೋಡಿ ಭರ್ಜರಿ ಖೆಡ್ಡಾವನ್ನು ತೋಡಿದ್ದಾರೆ. ಅದೇ ಕಾರಣಕ್ಕೆ ಹಾಲಿ ಎಂಎಲ್ಸಿ ಬಿ.ರಾಮಕೃಷ್ಣಗೆ ವಿನಾಕಾರಣ ಟಿಕೆಟು ಕೈತಪ್ಪಿಹೋಗಿದ್ದು. ರಾಮಕೃಷ್ಣ ಅವರು ಚಲುವರಾಯಸ್ವಾಮಿ ಬಣದವರಾಗಿ ರೋದರಿಂದ ಟಿಕೆಟನ್ನು ನಾಗಮಂಗಲದ ಅಪ್ಪಾಜಿ ಗೌಡನಿಗೆ ದಕ್ಕುವಂತೆ ಗೌಡರು ನೋಡಿಕೊಂಡಿದ್ದಾರೆ. ಆ ಮೂಲಕ ಚಲುವರಾಯಸ್ವಾಮಿಗೆ ಸಣ್ಣ ಸಂದೇಶವನ್ನೂ ರವಾನಿಸಿದ್ದಾರೆ.

ಜೆಡಿಎಸ್ ಟಿಕೆಟ್ ಖರೀದಿಸಿರುವ ಬೆಂಗಳೂರು ವಿವಿಯ ಸೆನೆಟ್ ಸದಸ್ಯ ಅಪ್ಪಾಜಿಗೌಡ ರಿಯಲ್ ಎಸ್ಟೇಟ್ ಮತ್ತು ಬಡ್ಡಿ ವ್ಯಾಪಾರಿ. ಕಳೆದ ಲೋಕಸಭಾ ಚುನಾವಣೆಯಲ್ಲಿ ಸಂಸದ ಪುಟ್ಟರಾಜುಗೆ ಕೋಟಿಗಟ್ಟಲೆ ಹಣವನ್ನು ಶೇ.5ರ ಬಡ್ಡಿಗೆ ನೀಡಿದ್ದ ಆಸಾಮಿ. ನಾಮಪತ್ರ ಸಲ್ಲಿಸುವ ಕೊನೆಯ ದಿನದವರೆಗೂ ನನಗೆ ಟಿಕೆಟ್ ಖಾತ್ರಿ ಎಂದುಕೊಂಡಿದ್ದ ಬಿ.ರಾಮಕೃಷ್ಣರಿಗೆ ಟಿಕೆಟ್ ಆಸೆ ಕಮರಿದ್ದೇ ಮಧ್ಯಾಹ್ನ 2 ಗಂಟೆ ಸುಮಾರಿಗೆ ಸಂಸದ ಪುಟ್ಟರಾಜು, ಉಪಸಭಾಪತಿ ಮರಿತಿಬ್ಬೇಗೌಡ ಸಮೇತ ಬಂದ ಅಪ್ಪಾಜಿ ಗೌಡ ನಾಮಪತ್ರ ಸಲ್ಲಿಸಿದಾಗ. ರಾಮಕೃಷ್ಣನಿಗೆ ಟಿಕೆಟ್ ತಪ್ಪಿಸಿ ಚಲುವರಾಯಸ್ವಾಮಿ ಅಹಂಗೆ ಪೆಟ್ಟುಕೊಟ್ಟಿದ್ದು ಮಾತ್ರವಲ್ಲದೇ ಮುಂದೆ ನಾಗಮಂಗಲದಲ್ಲಿ ಚಲುವಣ್ಣನಿಗೆ ಪರ್ಯಾಯವಾಗಿ ಅಪ್ಪಾಜಿ ಗೌಡನನ್ನು ಜೆಡಿಎಸ್ ಮುಖಂಡನನ್ನಾಗಿಸುವ ರಣತಂತ್ರವೂ ಗೌಡರ ತಲೆಯಲ್ಲಿದೆ. ಅದರಂತೆ ಅಪ್ಪಾಜಿ ಗೌಡ ಗೆದ್ದರೆ ಜಿಲ್ಲೆಯ ಮೇಲಿರುವ ಚಲುವರಾಯಸ್ವಾಮಿ ಹಿಡಿತ ಕೈ ತಪ್ಪಿ ಹೋಗುವುದಂತೂ ಖಚಿತ. ಆದರೆ ಇದಕ್ಕೆ ಚಲುವಣ್ಣ ಸಲೀಸು ದಾರಿ ಮಾಡಿಕೊಡುತ್ತಾರಾ ಅನ್ನೋದೆ ಸದ್ಯದ ಪ್ರಶ್ನೆ.

ವರ್ಷದ ಹಿಂದಷ್ಟೇ ಕುಚಿಕ್ಕೂ ಗೆಳೆಯರಂತಿದ್ದ ಕುಮಾರಣ್ಣ-ಚಲುವಣ್ಣನ ನಡುವೆ ಈಗ ಅಷ್ಟಕ್ಕಷ್ಟೇ. ಒನ್ಸ್ ಎಗೇನ್ ಜೆಡಿಎಸ್‌ನಲ್ಲಿ ಅಪ್ಪ-ಮಕ್ಕಳ ಹೊರತಾಗಿ ಬೇರೆಯವರಿಗೆ ಪ್ರಾತಿನಿಧ್ಯವಿಲ್ಲ ಎನ್ನುವುದು ಖಾತ್ರಿಯಾಗಿದೆ. ಬಿಬಿಎಂಪಿ ಚುನಾವಣೆಯಿಂದ ಶುರುವಾದ ಈ ಅಂತರ್ಯುದ್ಧ ಇದೇ ಪರಿಷತ್ ಚುನಾವಣೆಯ ಮೈತ್ರಿ ವಿಚಾರದಿಂದಾಗಿ ಬೀದಿಗೆ ಬಿದ್ದಿದೆ. ವಿಧಾನಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಜೊತೆ ದೋಸ್ತಿ ಕುದುರಿಸಲು ಹೋದ ಚಲುವರಾಯಸ್ವಾಮಿ ಅಂಡ್ ಟೀಂ ವಿರುದ್ಧ ಕಿಡಿಕಾರಿದ್ದ ಕುಮಾರಸ್ವಾಮಿ "ದೋಸ್ತಿ ಕುದುರಿದರೆ ನಾನು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ" ಎಂಬ ಬೆದರಿಕೆ ಹಾಕಿದ್ದರು. ಚಲುವರಾಯಸ್ವಾಮಿ ಅಂಡ್ ಟೀಮನ್ನು 'ಕಾಂಗ್ರೆಸ್ ಏಜೆಂಟ'ರೆಂದು ಕರೆಯುವಷ್ಟು ತಮ್ಮ ಸಿಟ್ಟನ್ನು ಹೊರಹಾಕಿದ್ದರು. ಆಮೇಲೆ ಪಕ್ಷದ ಶಾಸಕಾಂಗ ಸಭೆಯಲ್ಲಿ ಚಲುವಣ್ಣನ ಬಳಗ ಕುಮಾರಸ್ವಾಮಿಯ ಮೇಲೆ ಮುರಕೊಂಡ ಬಿದ್ದದ್ದು, ನಾನು ಏಜೆಂಟರೆಂದು ಕರೆದಿಲ್ಲ ಅಂತ ಕುಮಾರಣ್ಣ ಮಾತು ತೇಲಿಸಿದ್ದು, ತಮ್ಮ ಕರುಳು ಕುಡಿಯನ್ನು ತಮ್ಮ ಕಣ್ಣೆದುರಿಗೇ ಹೀನಾಮಾನ ದಬಾಯಿಸುತ್ತಿರುವ ದೃಶ್ಯ ಕಂಡು ಗೌಡರು ಒಳಗೊಳಗೇ ಕೊರಗಿದ್ದು, ಮೇಲ್ನೋಟಕ್ಕೆ ಎಲ್ಲರನ್ನೂ ಸಮಾಧಾನಿಸಿದ್ದು.... ಎಲ್ಲವೂ ನಡೆದವು. ಆದರೆ ಚಲವರಾಯಸ್ವಾಮಿಯ ಬಾಲ ಕಟ್ ಮಾಡುವ ಮಾಸ್ಟರ್ ಪ್ಲ್ಯಾನ್ ಆ ವೇದಿಕೆಯಲ್ಲೇ ಗೌಡರ ತಲೆಯಲ್ಲಿ ಸಜ್ಜಾಗಿತ್ತು. ಬಿ.ರಾಮಕೃಷ್ಣನಿಗೆ ಟಿಕೆಟು ತಪ್ಪಿಸುವ ಮೂಲಕ ಅದು ಪ್ರಕಟಗೊಂಡಿದೆ. ಕುಮಾರಸ್ವಾಮಿಯಂತೆ ದೇವೇಗೌಡರಿಗೂ ಚಲುವರಾಯಸ್ವಾಮಿಯ ಮೇಲೆ ಸಿಟ್ಟಿರುವುದಕ್ಕೆ, ಟಿಕೆಟಿನ ಕುರಿತು ಚಲುವರಾಯಸ್ವಾಮಿ ಅಪಸ್ವರವೆತ್ತಿದಾಗ ಮಾಧ್ಯಮಗಳ ಮುಂದೆಯೇ 'ಚಲುವರಾಯಸ್ವಾಮಿಗೆ ಇಷ್ಟು ದಿನ ಜಿಲ್ಲೆಯ ನಾಯಕತ್ವ ವಹಿಸಿದ್ದು ಸಾಲದೆ' ಎಂದ ದೊಡ್ಡಗೌಡರ ಮಾತುಗಳೇ ಸಾಕ್ಷಿ!

ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಮಾಜಿ ಶಾಸಕ ಎಲ್.ಆರ್.ಶಿವರಾಮೇಗೌಡ ಪಳಗಿದ ರಾಜಕಾರಣಿ. ಕಳೆದ 18 ವರ್ಷಗಳಿಂದ ಯಾವುದೇ ಅಧಿಕಾರವಿಲ್ಲದೆ ಮನೆಯಲ್ಲಿದ್ದ ಶಿವರಾಮೇಗೌಡ ಸಾಕಷ್ಟು ಸರ್ಕಸ್ ನಡೆಸಿ ಕೊನೆಗೂ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿಕೊಂಡಿದ... ವಿರುದ್ಧ ಜೆಡಿಎಸ್ ಅಪ್ಪಾಜಿ ಗೌಡ ಎಂಬ... ಎಸ್ಟೇಟ್ ಗಿರಾಕಿಗೆ ಟಿಕೆಟ್ ನೀಡಿದೆ. ಅಪ್ಪಾಜಿ... ಹಾಲಿ ಸದಸ್ಯ ಬಿ.ರಾಮಕೃಷ್ಣರಿಗೆ ಜೆಡಿಎಸ್ ಟಿಕೆಟ್... ಈ ಕ್ಷೇತ್ರವನ್ನು ಬಹಳ ಸುಲಭವಾಗಿ ಗೆಲ್ಲ... ಹಾಗಂತ ಈಗ ಜೆಡಿಎಸ್‌ನ ಗೆಲುವು... ಎಂದರ್ಥವಲ್ಲ. ಏಕೆಂದರೆ ಎಲ್.ಆರ್.ಶಿವರಾ... ನಾಲಿಗೆ ಸರಿಯಿಲ್ಲ. ಆತನ ವಿರುದ್ಧ ಸ್ಥಳೀಯ... ಜನಪ್ರತಿನಿಧಿಗಳಿಗೆ ಸಾಕಷ್ಟು ಅಸಹನೆಯಿದೆ. ... ಕೆ.ಆರ್.ಪೇಟೆ ಮೊದಲಾದ ತಾಲ್ಲೂಕುಗಳಲ್ಲಿ ... ಗೌಡ ಸಾಕಷ್ಟು ಹೆಸರು ಕೆಡಿಸಿಕೊಂಡಿದ್ದಾರೆ. ... ನಾಯಕರು ತಮ್ಮೆಲ್ಲಾ ಭಿನ್ನಾಭಿಪ್ರಾಯ, ಕು... ಬದಿಗಿಟ್ಟು ಪ್ರಚಾರಕ್ಕಿಳಿದರೆ ಗೆದ್ದು ಬರು... ಕಷ್ಟವಾಗಲಿಕ್ಕಿಲ್ಲ. ಇಲ್ಲದಿದ್ದರೆ ಡಿಕೆಶಿ ಗೆಲುವನ್... ಮಾಡಿ ಶಿರಾಮೇಗೌಡನ ಜೋಳಿಗೆಗೆ ಎಸೆದುಬಿ... ಡೌಟೇ ಇಲ್ಲ!

ಹಾಗೆ ನೋಡಿದರೆ ವಿಧಾನಪರಿಷತ್ ... ಬಿ.ರಾಮಕೃಷ್ಣ ಸಾಕಷ್ಟು ಕೆಲಸ ಮಾಡಿದ್ದರು. ... ಕಬ್ಬಿನ ಬೆಲೆ ನಿಗದಿ, ರೈತ-ಕೃಷಿ ಕಾರ್ಮಿಕ... ನೀರು ಸೇರಿದಂತೆ ಜಿಲ್ಲೆಯ ವಿವಿಧ ಸಮ... ವಿಧಾನ ಪರಿಷತ್‌ನ ಒಳಗೆ-ಹೊರಗೆ ದನಿ... ಕಲೆ, ಸಾಹಿತ್ಯ ರಂಗಭೂಮಿ ಮೊದಲಾದ ... ಕ್ಷೇತ್ರದಲ್ಲೂ ಆಸಕ್ತಿ ಹೊಂದಿದ್ದ ಅವರು ... ವ್ಯಕ್ತಿ ಎನಿಸಿಕೊಂಡಿದ್ದರು. ರಾಮಕೃಷ್ಣ ರಿಗೆ ಟಿಕೆ... ಜಿಲ್ಲೆಯ ಕಾರ್ಯಕರ್ತರು ಹಾಗೂ ಜನಪ್ರ... ಸಾಕಷ್ಟು ಅಸಮಾಧಾನ ಮೂಡಿಸಿದೆ. ಉ... ಬಿ.ರಾಮಕೃಷ್ಣ ನಾಮಪತ್ರ ಸಲ್ಲಿಸುವ ದಿನ ಬಂದ... ತಾ.ಪಂ., ಜಿ.ಪಂ. ಹಾಗೂ ಗ್ರಾಮ ಪಂಚಾಯ... ಅಪ್ಪಾಜಿ ಗೌಡ ನಾಮಪತ್ರ ಸಲ್ಲಿಸುವಾಗ ಇ...

ಚೆಲುವಣ್ಣ ಗರಂ


ಗೌಡರ ಹಟ್ಟಿಯ ಕುತಂತ್ರದಿಂದಾಗಿ ... ಟಿಕೆಟು ತಪ್ಪಿರುವುದರ ವಿರುದ್ಧ ಚಲುವರಾಯ... ಆಗಿದ್ದಾರೆ. ಇದರ ಹಿಂದೆ ತನ್ನನ್ನು ಮಟ್ಟ ಹಾಕು... ಇದೆ ಎನ್ನುವುದನ್ನು ಅರ್ಥಮಾಡಿಕೊಳ್ಳದಷ್ಟು ... ಚೆಲುವಣ್ಣ. ತಮ್ಮ ಸಿಟ್ಟನ್ನು ಬಹಿ... ಕಾರಿಕೊಂಡಿದ್ದಾರೆ. ಚೆಲುವಣ್ಣನ ಆಕ್ರೋಶವನ್ನು... ಮಾತುಗಳಲ್ಲಿ ದಾಖಲಿಸುವುದಾದರೆ 'ಅಪ... ವಿಧಾನಪರಿಷತ್ ಚುನಾವಣೆ ಆಕಾಂಕ್ಷಿ ... ಪದವೀಧರ ಕ್ಷೇತ್ರದ ಟಿಕೆಟ್ ಕೇಳಿದ್ದರು. ಆ ಸ... ನೋಡೋಣ ಅಂದಿದ್ದೆ. ಅಂತಹ ಅಪ್ಪಾಜಿ... ವಿಧಾನ ಪರಿಷತ್ ಟಿಕೆಟ್ ನೀಡುವ ಮ... ವಿರುದ್ಧ ಬೆಳೆಸುವ ತಂತ್ರ ಮಾಡಿದ್ದಾರೆ. ಅ...



ನಾಮಪತ್ರ ಸಲ್ಲಿಸಿದ್ದ ಸಂದರ್ಭದಲ್ಲಿ ಜೆಡಿಎಸ್ ಜನಪ್ರತಿನಿಧಿಗಳೊಂದಿಗೆ ಹಾಲಿ ಸದಸ್ಯ ಬಿ. ರಾಮಕೃಷ್ಣ



ಜಾತ್ಯತೀತ ಜನತಾ ದಳ ಅಭ್ಯರ್ಥಿಯಾಗಿ ಅಪ್ಪಾಜಿಗೌಡ ನಾಮಪತ್ರ ಸಲ್ಲಿಸಿದ ಸಂದ...



...ಚುನಾವಣೆಯ ಸಂದರ್ಭದಲ್ಲಿ ಪಕ್ಷದ ಅಭ್ಯರ್ಥಿಗಳಿಗೆ ...ನೆರವು ನೀಡುವಂತೆ ಅಪ್ಪಾಜಿ ಗೌಡನಿಗೆ ತಿಳಿಸಿದ್ದೆ. ... ಮಾಡುವುದಾಗಿ ಭರವಸೆ ನೀಡಿದ್ದ ಆತ ...ಗೆ 2-3 ದಿನ ಇದ್ದಂತೆ ತನ್ನ ಮೊಬೈಲ್ ಸ್ವಿಚ್ ...ಮಾಡಿಕೊಂಡಿದ್ದ. ಆಗ ರಾಮಕೃಷ್ಣರೇ ಜಿಲ್ಲೆಯ ...ಲ್ಲೂಕುಗಳ ಗ್ರಾ.ಪಂ. ಅಭ್ಯರ್ಥಿಗಳಿಗೆ ಹಣಸಹಾಯ ...ದರು. ಆಗ ಸ್ವತಃ ದೇವೇಗೌಡ ಹಾಗೂ ...ಸ್ವಾಮಿಯೇ ಬಿ.ರಾಮಕೃಷ್ಣರಿಗೆ ವಿಧಾನ ಪರಿಷತ್ ...ಎಂದು ಹೇಳಿದ್ದರು. ಈಗ ಇದ್ದಕ್ಕಿದ್ದಂತೆ ನನ್ನದೇ ...ಅಪ್ಪಾಜಿ ಗೌಡನಿಗೆ ಟಿಕೆಟ್ ನೀಡುವ ಮೂಲಕ ...ದ್ಧ ಬೆಳೆಸಲು ಹೊರಟಿದ್ದಾರೆ.

...ಡುವೆ ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ...ರಾಮಕೃಷ್ಣರಿಂದ ನಾಮಪತ್ರ ವಾಪಾಸ್ ತೆಗೆಸಲು ...ಡ ಹಾಗೂ ಕುಮಾರಸ್ವಾಮಿ ತಿಪ್ಪರಲಾಗ ...ಾ ಸಾಧ್ಯವಾಗಲಿಲ್ಲ. ಕೊನೆಗೆ ನಾಮಪತ್ರ ...ಯುವ ಕೊನೆಯ ದಿನಾಂಕದಂದು ದೇವೇಗೌಡರು ...ಯಸ್ವಾಮಿಯ ಜೊತೆ ಮಾತಾಡಿ ವಾಪಾಸ್ ...ಶೆ ಹೇಳಿದ ಮೇಲಷ್ಟೇ ರಾಮಕೃಷ್ಣ ಕಣದಿಂದ ...ದಿದದ್ದು. ನಾಮಪತ್ರ ಹಿಂಪಡೆದ ವೇಳೆಯಲ್ಲಿ ...ಾಗಿ ನಾನು ಬಹಳ ನೊಂದಿದ್ದೇನೆ. ನನಗೇನೂ ... ಬೇರೇನೂ ಕೇಳಬೇಡಿ ಎಂದು ...ಗಳ ಮುಂದೆ ರಾಮಕೃಷ್ಣ ನೋವಿನ ಹೇಳಿಕೆಯನ್ನು ...ನಂತರ ಜೆಡಿಎಸ್ ಜನಪ್ರತಿನಿಧಿಗಳು ಮತ್ತಷ್ಟೂ ...ಬಂದಿದ್ದಾರೆ. ಯಾರದೋ ತಪ್ಪಿಗೆ ಯಾರಿಗೋ ...ದ ದೊಡ್ಡಗೌಡರ ವಿರುದ್ಧವೇ ಒಳಗಿಂದೊಳಗೇ ...ಕೊಳ್ಳಲು ಶುರು ಮಾಡಿದ್ದಾರೆ. ಇದು ...ಯಲ್ಲಿ ಪ್ರತಿಫಲಿಸಿದರೂ ಅಚ್ಚರಿಯಿಲ್ಲ!

...ಟ್ಟನ್ನು ಬಿಗಿದುಕೊಂಡ ಕಾಂಗ್ರೆಸ್

...ರಾಜಕಾರಣದ ಗಮ್ಮತ್ತನ್ನೇನಾದರು ಕಾಣಬೇಕಿದ್ದರೆ ಅದನ್ನು ಮಂಡ್ಯ ಕಾಂಗ್ರೆಸ್‌ನಲ್ಲೇ ಕಾಣಬೇಕು. ಇಲ್ಲಿ ಕಾಂಗ್ರೆಸ್‌ಗೆ ಕಾಂಗ್ರೆಸ್ಸೇ ಶತ್ರು ಎನ್ನುವಷ್ಟರ ಮಟ್ಟಿಗೆ ಬಂಡಾಯ ಹಾಸುಹೊಕ್ಕಾಗಿದೆ. ಆದರೆ ಈ ಬಾರಿ ಶಿವರಾಮೇಗೌಡನ ಅದೃಷ್ಟವೋ ಏನೋ ಡಿ.ಕೆ.ಶಿವಕುಮಾರ್ ಚುನಾವಣಾ ಸಾರಥ್ಯ ವಹಿಸುತ್ತಿದ್ದಂತೆಯೇ ಒಡೆದ ಮನೆಯಂತಾಗಿದ್ದ ಕಾಂಗ್ರೆಸ್‌ನಲ್ಲಿ ಒಗ್ಗಟ್ಟಿನ ಮಂತ್ರ ಧ್ವನಿಸುತ್ತಿದೆ. ಎಸ್.ಎಂ.ಕೃಷ್ಣ ಬಣ, ಅಂಬರೀಶ್ ಬಣ, ಮಾದೇಗೌಡರ ಬಣಗಳನ್ನು ಒಗ್ಗೂಡಿಸಿ ಹೊಲಿಗೆ ಹಾಕಿರುವ ಡಿಕೇಶಿ, ಬರೋಬ್ಬರಿ 18 ವರ್ಷಗಳಿಂದ ಅಧಿಕಾರ ವಿರಹದಲ್ಲಿ ಒದ್ದಾಡಿಹೋಗಿರುವ ಶಿವರಾಮೇಗೌಡರ ಗೆಲುವಿನ ಸಾಧ್ಯತೆಯನ್ನು ದಟ್ಟವಾಗಿಸಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ರಮ್ಯಾಳನ್ನು ಸೋಲಿಸಿದ್ದು ನಾನೇ ಎಂದು ಮಾಧ್ಯಮಗಳ ಮುಂದೆ ಬಹಿರಂಗವಾಗಿ ಹೇಳಿಕೆ ಕೊಟ್ಟಿದ್ದ ಶಿವರಾಮೇಗೌಡರಿಗೆ ಯಾವ ಮಾನದಂಡ ಅನುಸರಿಸಿ ಟಿಕೆಟ್ ನೀಡಿದ್ದೀರಿ ಎಂದು ಶ್ರೀರಂಗಪಟ್ಟಣದ ರವೀಂದ್ರ ಶ್ರೀಕಂಠಯ್ಯ ಹಾಗೂ ಮಾಜಿ ಸಂಸದ ಜಿ.ಮಾದೇಗೌಡ ಅಪಸ್ವರ ಎತ್ತಿದ್ದರು. ಸದ್ಯದ ಮಟ್ಟಿಗೆ ಅಂಬಿ ಬಣದಲ್ಲಿ ಗುರುತಿಸಿಕೊಂಡಿರುವ ಶಿವರಾಮೇಗೌಡನ ವಿರುದ್ಧ ಕೆಲಸ ಮಾಡಲು ಕೃಷ್ಣ ಬಣವಂತೂ ಸಜ್ಜಾಗಿ ನಿಂತಿತ್ತು, ಆದರೆ ಮೇಲ್ನೋಟಕ್ಕೆ ಅದೆಲ್ಲಾ ತಣ್ಣಗಾದಂತೆ ಕಂಡುಬರುತ್ತಿದೆ. ಆದರೆ ಕಾಂಗ್ರೆಸ್ಸಿಗರ ಒಳಮರ್ಮಗಳು ಹೇಗಿವೆಯೋ ಬಲ್ಲವರಿಲ್ಲ. ಚುನಾವಣೆ ಹೊತ್ತಿಗೆ ಯಾರು, ಹೇಗೆ ಬೇಕಾದರೂ ಪೊಲಿಟಿಕ್ಸ್ ಪ್ಲೇ ಮಾಡಬಹುದು. ಈಗಿರುವ ಒಗ್ಗಟ್ಟು ಕಡೆಯವರೆಗೂ ಉಳಿಸಿಕೊಳ್ಳುವಲ್ಲಿ ಡಿಕೆಶಿ ಯಶಸ್ವಿಯಾಗುತ್ತಾರಾ ಕಾದು ನೋಡಬೇಕು. ಯಾಕೆಂದರೆ ಸ್ವತಃ ಶಿವರಾಮೇಗೌಡನ ಮಾತುಗಳೇ ಆ ಪರಿ ಡ್ಯಾಮೇಜಿಂಗ್ ಡೈಲಾಗ್‌ಗಳಾಗಿರುತ್ತವೆ.

ಅಸಲಿಗೆ ಮಂಡ್ಯದ ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್‌ಗಿಂತ 450ಕ್ಕೂ ಹೆಚ್ಚು ಜೆಡಿಎಸ್ ಜನಪ್ರತಿನಿಧಿಗಳು ಆರಿಸಿ ಬಂದಿದ್ದಾರೆ. ಹಣವೇ ಮಾನದಂಡವಾಗಿರುವ ವಿಧಾನಪರಿಷತ್ ಚುನಾವಣೆಯಲ್ಲಿ ಜೆಡಿಎಸ್‌ನಲ್ಲಿರುವಷ್ಟು ಪಕ್ಷನಿಷ್ಠೆ ಕಾಂಗ್ರೆಸ್‌ನಲ್ಲಿ ಕಾಣುವುದು ಕಷ್ಟ. ಜೆಡಿಎಸ್‌ನಲ್ಲಿ ಒಬ್ಬ ನಾಯಕ ಉಲ್ಟಾ ಹೊಡೆದರೂ ಆ ಪಕ್ಷದ ಅಭ್ಯರ್ಥಿಗಳಿಗೆ ಅಂತಹ ನಷ್ಟವೇನೂ ಆಗುವುದಿಲ್ಲ. ಆದರೆ ಕಾಂಗ್ರೆಸ್‌ನಲ್ಲಿ ಒಬ್ಬ ನಾಯಕ ಉಲ್ಟಾ ಹೊಡೆದರೆ ಶಿವರಾಮೇಗೌಡ ಶಾಶ್ವತವಾಗಿ ಮನೆ ಸೇರಬೇಕಾಗುತ್ತೆ. ಜೆಡಿಎಸ್‌ಗೆ ಭಯ ಇರುವುದು ಚಲುವರಾಯಸ್ವಾಮಿ ಕಡೆಯಿಂದ. ಜಿ.ಪಂ., ತಾ.ಪಂ. ಚುನಾವಣೆಗೆ ದಿನಗಣನೆ ಶುರುವಾಗಿದ್ದು ತನ್ನ ಬೆಂಬಲಿಗರಿಗೆ ಟಿಕೆಟ್ ಕೊಡಿಸುವ ಜವಾಬ್ದಾರಿ ಚಲುವರಾಯಸ್ವಾಮಿ ಮೇಲಿರುವುದರಿಂದ ಆತ ದೊಡ್ಡಗೌಡರ ವಿರುದ್ಧ ಉಲ್ಟಾ ಹೊಡೆಯುವ ಸಾಧ್ಯತೆಗಳು ತೀರಾ ಕಮ್ಮಿ ಎನ್ನಲಾಗುತ್ತಿದೆ. ರಾಜಕಾರಣವನ್ನು ಡಿಕ್ಟೇಟ್ ಮಾಡುವುದು ಸುಲಭ; ಆದರೆ ಗೆಸ್ ಮಾಡುವುದು ಕಷ್ಟ. ಎಲ್ಲಕ್ಕೂ ಫಲಿತಾಂಶವೇ ಉತ್ತರ ಹೇಳಲಿದೆ.

■ ವರದಿಗಾರ

...ಂಕೇಶ್ ಪ್ರಕಾಶನದ ಪುಸ್ತಕಗಳು

...ರ್ನಾಟಕದ ಎಲ್ಲಾ ಪ್ರಮುಖ ಪುಸ್ತಕ ಮಳಿಗೆಗಳಲ್ಲಿ ಲಭ್ಯವಿದೆ.
...ಹೆಚ್ಚಿನ ಮಾಹಿತಿಗಾಗಿ ಫೋನ್: 080–26676427

...ಲಂಕೇಶರ ಕೃತಿಗಳು

ಕತೆ-ಕಾದಂಬರಿ	
...ಜೆಯ ಕಥಾ ಪ್ರಸಂಗ	250.00
	60.00
	80.00
... ಕವಿದ ಸಂಜೆ	85.00
...ಪತಿ ಸ್ಕಾಲರ್‌ಶಿಪ್ ಯಾತ್ರೆ	70.00
...ರಗುವ ಸಮಯ	125.00
	60.00
... ನೀರಮು ಕೆರೆಗೆ ಚೆಲ್ಲಿ	50.00
...ಘನೆ	80.00
...ಲೇಖನಗಳ ಸಂಗ್ರಹಗಳು	
...ಟಿಪ್ಪಣಿ 1	200.00
...ಟಿಪ್ಪಣಿ 2	200.00
...ಟಿಪ್ಪಣಿ 3	200.00
...ಮುವ ಮುಸ್ಸ-ಸಂಗ್ರಹ 1	150.00
...ಮುವ ಮುಸ್ಸ-ಸಂಗ್ರಹ 2	150.00
...ಮುವ ಮುಸ್ಸ-ಸಂಗ್ರಹ 3	150.00
...ಕಾರಂಜಿಯ ಸ್ಪರ್ಶ	150.00
... ಈ ಪುಳಕ	125.00
...ಚಿಜಾ-ಬೋಜಾ!	150.00


ಸಾಹಿತಿ ಸಾಹಿತ್ಯ ವಿಮರ್ಶೆ	300.00
ರೂಪಕ ಲೇಖಕರು	70.00
ಕಂಡದ್ದು ಕಂಡಹಾಗೆ	100.00
ಪ್ರಸ್ತುತ	80.00
ಪಾಂಚಾಲಿ	150.00
ಲಂಕೇಶ್‌ರ ಕವನ ಸಂಗ್ರಹಗಳು	
ನೀಲು ಕಾವ್ಯ –ಸಂಗ್ರಹ 1	150.00
ನೀಲು ಕಾವ್ಯ –ಸಂಗ್ರಹ 2	150.00
ನೀಲು ಕಾವ್ಯ –ಸಂಗ್ರಹ 3	200.00
ಚಿತ್ರ ಸಮೂಹ	90.00
ಅಕ್ಷರ ಹೊಸ ಕಾವ್ಯ	250.00
ಪಾಪದ ಹೂಗಳು	60.00
ಆತ್ಮಕಥನ	
ಹುಳಿಮಾವಿನ ಮರ	250.00
ಲಂಕೇಶ್‌ರ ನಾಟಕಗಳು	
ಬಿರುಕು	40.00
ಸಂಕ್ರಾಂತಿ	45.00
ತೆರೆಗಳು	50.00
ಈಡಿಪಸ್ ಮತ್ತು ಅಂತಿಗೊನೆ	60.00
ಟಿ. ಪ್ರಸನ್ನನ ಗೃಹಸ್ಥಾಶ್ರಮ	50.00
ಗುಣಮುಖ	30.00
ಕ್ರಾಂತಿ ಬಂತು ಕ್ರಾಂತಿ	40.00

"ಅಹಿಂದ ಬಜೆಟ್ಟು ಹಾಳೆ ಮೇಲೆ ಅದಂತಲ್ಲಾ ಸಾ"

ಥೂತ್ತೇರಿ

▸ ಯಾಹೂ

ಯಾರು ಏನೇ ಹರಕೊಂಡರೂ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಮಧ್ವಾಚಾರ್ಯರು ಗುರುತಿಸಿದ ನಿತ್ಯ ನಾರಕಿಗಳು ಮಡೆಸ್ನಾನದ ಹೆಸರಿನಲ್ಲಿ ಎಡೆ ಸ್ನಾನ ಮಾಡಿಬಿಟ್ಟವಂತಲ್ಲಾ. ಇದರಿಂದ ಸಂತೃಪ್ತಗೊಂಡ ಪುರೋಹಿತಶಾಹಿಗಳು ಈ ಮೂಢಾಚರಣೆಯಲ್ಲಿ ತಾವೇ ಗೆದ್ದ ಖುಷಿಯಿಂದ 'ಮುಂದೆ ಈ ಸರಕಾರ ತರಬಹುದಾದ ಮೂಢಾಚರಣೆ ಕಾಯಿದೆಗೂ ಇದೇ ಗತಿ ಮಾಡುತ್ತೇವೆ' ಎಂದವಂತಲ್ಲಾ. ಭರತ ಖಂಡದ ಅಜ್ಞಾನಿಗಳು ಮೊದಲಿಂದಲೂ ಯಜ್ಞ ಯಾಗ ಮಾಡುತ್ತಾ ಬಂದಿವೆ. ಇವುಗಳ ತಲೆಗೆ ಹೊಳೆಯುವ ಕಾರ್ಯಗಳೆಲ್ಲಾ ಇಂತವೆ. ಈ ಮಡೆಸ್ನಾನಕ್ಕಾಗಿ ಬಳಕೆಯಾಗುವ ಮುಗ್ಧರ ತಲೆಯಲ್ಲಿ ಇಂತಹ ಉರುಳು ಸೇವೆಯಿಂದ ಮುಕ್ತಿಯ ಜೊತೆಗೆ ಚರ್ಮರೋಗ ಮುಕ್ತಿಯೂ ಉಂಟಂತೆ. ನಿಜಕ್ಕೂ



ಇದೊಂದು ಚರ್ಮರೋಗದಂತಹ ನಂಬಿಕೆ. ಈ ನಂಬಿಕೆಯನ್ನು ಗೌರವಿಸಿ ಮಾತನಾಡಿದ ಹೆಗ್ಗೋಡು ಮಠದ ಅಕ್ಷರನಿಗೆ ತನ್ನ ವಾದಸರಣಿ ಮುಂದುವರಿದುದಕ್ಕೆ ಸಮಾಧಾನವಾಗಿರಬಹುದು. ಕಾಕತಾಳೀಯವೆಂಬಂತೆ ಅಕ್ಷರ "ಕ್ರಿಕೆಟ್ ಕಲಿಗಳ ಹರಾಜಿನ ಬಗ್ಗೆ ತಲೆಕೆಡಿಸಿಕೊಳ್ಳಿ. ಅದಕ್ಕಿಂತ ಅವಮಾನ ಈ ಮಡೆಸ್ನಾನದಲ್ಲಿಲ್ಲ" ಎಂದಿದ್ದರು. ಆಯ್ತು ಕೆಡಿಸಿಕೊಂಡಿದ್ದೇವೆ. ಮಹೇಂದ್ರ ಸಿಂಗ್ ಧೋನಿ 12.5 ಕೋಟಿಗೆ ಹರಾಜಾಗಿದ್ದಾನೆ. ಇದೇ ಹಣ ಹೆಗ್ಗೋಡಿಗೆ ಬಂದರೆ ಇನ್ನೊಂದಿಷ್ಟು ಒಣ ಚರ್ಚೆ ನಡೆಸಬಹುದಿತ್ತಲ್ಲಾ, ಥೂತ್ತೇರಿ!

* * *

ಕಾಂಗ್ರೆಸ್ಸಿನ ಸಜ್ಜನ ವ್ಯಕ್ತಿ ಜಯಪ್ರಕಾಶ್ ಹೆಗಡೆಯನ್ನು ಕಾಂಗ್ರೆಸ್ ಆರು ವರ್ಷ ಕಾಲ ಉಚ್ಚಾಟಿಸಿದೆ. ದಕ್ಷಿಣ ಕನ್ನಡ ಕ್ಷೇತ್ರದಿಂದ ಬಂಡಾಯ ಅಭ್ಯರ್ಥಿಯಾಗುವ ಮುನ್ನ ಹೆಗಡೆ ಯೋಚಿಸಬೇಕಿತ್ತು. ಅವರ ಜಾಗದಲ್ಲಿ ನಿಂತು ಎಂಪಿಯಾಗಿರುವ ಶೋಭಕ್ಕ ಎಂಬ ಮೋದಿ ಕೂದಲ ಪ್ರಿಯೆ ಕ್ಷೇತ್ರದ ಕಡೆ ಗಮನ ಕೊಡದೆ ಉಳಿದ ಜಿಲ್ಲೆ ಸುತ್ತತೊಡಗಿದ್ದಾರೆ. ಅದರಲ್ಲೂ ಯಡಿಯೂರಪ್ಪನನ್ನು ಮತ್ತೆ ರಾಜ್ಯದ ಮುಖ್ಯಮಂತ್ರಿ ಮಾಡಬೇಕೆಂದು ಹೋರಾಡುತ್ತಿರುವ ಶೋಭಕ್ಕನ ಕಾರ್ಯವೈಖರಿಯನ್ನು ಉಡುಪಿ-ಚಿಕ್ಕಮಗಳೂರು ಕ್ಷೇತ್ರದ ಜನರಿಗೆ ಮನವರಿಕೆ ಮಾಡಬಹುದಿತ್ತು. ಅದುಬಿಟ್ಟು ಮತವೊಂದಕ್ಕೆ ಹತ್ತು ಹದಿನೈದು ಸಾವಿರ ಖರ್ಚಿನ ಪರಿಷತ್ ಚುನಾವಣೆ ಸಹವಾಸಕ್ಕೆ ಹೋಗುವ ಸಾಹಸ ಮಾಡಬಾರದಿತ್ತೆಂಬುದು ಅವರ ಹಿತೈಷಿಗಳ ವಾದವಾಗಿದೆಯಲ್ಲಾ. ರಾಜಕಾರಣಕ್ಕೆ ಬಂದವರು ಹಾಗೆ ಬಂದು ಹೀಗೆ ಹೋಗುವ ಅಧಿಕಾರದ ಬಗ್ಗೆ ತಲೆಕೆಡಿಸಿಕೊಳ್ಳದೆ ರಿಸ್ಕ್ ತೆಗೆದುಕೊಳ್ಳಲು ತಯಾರಾಗಬೇಕು. ಎಂ.ಪಿ. ಪ್ರಕಾಶ್, ಎಸ್.ಕೆ. ಕಾಂತ ಮತ್ತು ಕಮ್ಯುನಿಸ್ಟ್ ಲೀಡರುಗಳು ಅಧಿಕಾರವಿಲ್ಲದಾಗ ಮಾಡುವ ಕಾರ್ಯಗಳ ಬಗ್ಗೆ ಯೋಚಿಸುತ್ತಿದ್ದರು. ಕಾಂಗ್ರೆಸ್ ಪಾರ್ಟಿಯೀಗ ಸಜ್ಜನ ವ್ಯಕ್ತಿಗಿಂತ ಗೆಲ್ಲುವ ಕುದುರೆ ಬೆನ್ನುಬಿದ್ದಿದೆ. ಅಲ್ಲಿ ಸಜ್ಜನ ಅಭ್ಯರ್ಥಿಗೆ ಮನ್ನಣೆಯಿಲ್ಲ ಎಂಬುದನ್ನು ಹೆಗಡೆ ಅರ್ಥ ಮಾಡಿಕೊಂಡಿಲ್ಲವಂತಲ್ಲಾ, ಥೂತ್ತೇರಿ!!

* * *

ಸಿದ್ದರಾಮಯ್ಯನವರು ಘೋಷಿಸಿದ ಕಾರ್ಯಕ್ರಮಗಳೆಲ್ಲಾ ಬಜೆಟ್ ಹಾಳೆಯಲ್ಲೇ ಉಳಿದು ಅಧಿಕಾರಿಗಳು ಆರಾಮವಾಗಿದ್ದ ಫಲವಾಗಿ ಸರಕಾರ ಕುಂಟೆತ್ತಿನ ನಡಿಗೆಯಲ್ಲಿ ನಿಧಾನವಾಗಿ ಸಾಗಿದೆಯಂತಲ್ಲಾ. ಈ ಬಗ್ಗೆ ಅಧಿಕಾರಿಗಳ ಎದುರು ಕೆರಳಿರುವ ಅವರನ್ನೇ ಮಾತನಾಡಿಸಿದರೆ ಹೇಗೆ ಅನ್ನಿಸಿ ಫೋನ್ ಮಾಡಲಾಗಿ ರಿಂಗಾಯ್ತು, ತೆಗೆಯಲಿಲ್ಲ, ಕಟ್ ಮಾಡಿ ಮತ್ತೆ ಮಾಡಿದಾಗ ರಿಂಗಾಯ್ತು, ಹಾಗೆ ಮೂರು ಬಾರಿ ಮಾಡಿದ್ದಾಯ್ತು.

"ಹಲೋ? ನಾನು ಯಾಹು. ಮುಖ್ಯಮಂತ್ರಿಗೆ ಫೋನ್ ಕೊಡ್ತೀರಾ?"

"ಆಯ್ತು ಕೊಟ್ಟೆ."

"ಹಲೋ ಯಾರೂ?"

"ನಾನು ಸಾರ್ ಯಾಹು."

"ಏನೇಳಿ ಯಾಹೂ."

"ಒಂದೆರಡು ಪ್ರಶ್ನೆ ಸಾರ್."

"ಕೇಳಿ ಅದೇನು?"

"ನಿಮ್ಮ ಅಹಿಂದ ಬಗ್ಗೆ ಕಾಳಜಿ ಮತ್ತು ಬಜೆಟ್ಟು ಕಾಗದದ ಮೇಲೆ ಉಳುದುಬುಟ್ಟದಲ್ಲಾ ಸಾರ್?"

"ಆ?"

"ಅಧಿಕಾರಿಗಳು ನಿಮ್ಮ ಕಾರ್ಯಕ್ರಮನೆ ಅನುಷ್ಠಾನಕ್ಕೆ ತಂದಿಲ್ಲ."

"ಊ ತಂದಿಲ್ಲ."

"ಮತ್ತೇನು ಮಾಡ್ತಿರಿ ಸಾರ್?"

"ಮಾರ್ಚ್ ತಿಂಗಳೊಳಗೆ ಮಾಡಿ ಅಂತ ಎಚ್ಚರಿಕ ಕೊಟ್ಟಿದ್ದಿನಿ."

"ಏನು ಮಾಡಿ ಅಂತ?"

"ಅನುದಾನ ಖರ್ಚು ಮಾಡಿ ಅಂತ."

"ಉಳದಿರೋ ಮುಕ್ಕಾಲು ಭಾಗ ಖರ್ಚು ಮಾಡಬೇಕಾದ್ರೆ, ಅಧಿಕಾರಿಗಳಿಗೆ ಅಂತ ತಲೆಯಿರಬೇಕಲ್ಲ ಸಾರ್."

"ತಲೆ ಐತೆ. ಸುಮ್ಮನಾಗಿಬುಟ್ಟವ್ರರೆ."

"ರಾಜಕಾರಣಿಗಳು ಅಧಿಕಾರಿಗಳನ್ನು ವಿಶ್ವಾಸಕ್ಕೆ ತಗಂಡು ಓಡಾಡಿದ್ರೆ ಖರ್ಚು ಮಾಡಬಹುದು. ನಿಮ್ಮ ಸರ್ಕಾರದಲ್ಲಿ ಅಂತ ಮಂತ್ರಿನೆ ಕಾಣ್ತಯಿಲ್ಲ ಸಾರ್."

"ಅವ್ರುರೇ ಕಂಡ್ರೀ. ಅದೇನಂದ್ರೇ ಸುದ್ದಿಯಾಗ್ತಯಿಲ್ಲ ಅಷ್ಟೆ."

"ಸುದ್ದಿಯಾಗಂಗೆ ಏನಾರ ಮಾಡಬೇಕು ಸಾರ್."

"ಏನು ಮಾಡಬೇಕೂ?"

"ಹಲವು ಪತ್ರಕರ್ತರಿಗೆ ಗಿಫ್ಟ್, ದುಡ್ಡು, ಸೈಟು ಕೊಟ್ರೆ ಏನಾರ ಮಾಡ್ತರೆ ಸಾರ್."

"ಯಡಿಯೂರಪ್ಪ ಅದ್ಯಲ್ಲಾನು ಕೊಟ್ನಂತೆ. ಬರದ್ರು ಸರಿ. ಅಮ್ಯಾಲೇನಾಯ್ತೂ?"

"ಅವ್ರುರು ಉಬ್ಬಿ ಬೇರೆ ಪಾರ್ಟಿ ಮಾಡಿದ್ರಿಂದ ನೀವು ಅಧಿಕಾರಕ್ಕೆ ಬಂದ್ರಿ, ಗೊತ್ತ?"

"ಅವ್ರುರು ಬೇರೆ ಪಾರ್ಟಿ ಮಾಡಿ ನಿಲ್ದೆಯಿದ್ರೆ ಅವ್ರುರ ತಕ್ಕಂಡ್ ಓಟು ನಮಿಗೆ ಬತ್ತಿದ್ದೊ ಕಂಡ್ರೀ."

"ಅದ್ಯಲ್ಲ ಇವತ್ತಿನ ಮಾತು ಸಾರ್. ಯಾಕೊ ನಿಮಿಗೇನೇಳಿದ್ರು ಕೇಳಿಸದಿಲ್ಲ ಅನ್ನುತ್ತೆ ಸಾ."

"ಆ?"

"ಏನೇಳಿದ್ರು ಹಳೆ ರಾಗ ಹೇಳ್ತಿರಿ. ಅಧಿಕಾರಿಗಳು ಚುರುಕಾಗಿಲ್ಲ ಅನ್ನದು ಗೊತ್ತಾಯ್ತು, ಅಂದ್ರೇ ನಿಮ್ಮ ಸರಕಾರ ಹ್ಯಂಗದೆ ಅಂತ ಗೊತ್ತಾಗಿರಬೇಕು."

"ಅದೂ ಏನಾಗಿಬುಟ್ಟದೆ ಅಂದ್ರೇ ಸರಕಾರದ ಕಾರ್ಯಕ್ರಮಗಳನ್ನು ಜನಗಳು ಬಂದು ಕೇಳಬೇಕಾಗಿತ್ತು. ಅವ್ರುರೂ ಸುಮ್ಮನವ್ರುರೆ. ಅಧಿಕಾರಿಗಳೂ ಸುಮ್ಮನವ್ರುರೆ."

"ಇದನ್ನ ತಿಳಕೊಂಡು ನೀವೂ ಸುಮ್ಮನಿದ್ದಿರಿ."

"ಸುಮ್ಮನೆಲ್ಲಿದ್ದಿನೀ? ಅಧಿಕಾರಿಗಳ ಸಭೆ ಮಾಡಿ ಪರಿಶೀಲಿಸ್ದೆ ಕಂಡ್ರೀ."

"ಸಾರ್, ಮೀಟಿಂಗ್‌ನಿಂದ ಏನಾಯ್ತದೆ, ಪರಿಶೀಲನೆಯಿಂದ ಏನಾಯ್ತದೆ ಅಂತ ಗೊತ್ತು ಸಾರ್. ನಿಮ್ಮ ಅಹಿಂದ ಬಜೆಟ್ ಅವ್ರುರಿಗೇ ತಲುಪಿಲ್ಲ ಅಂದ್ರೆ ಮುಂದೆ ನೀವು ಅಹಿಂದ ಅಂತ ಹೇಳಿಕೊಂಡೋದ್ರೆ ಜನ ಬೈಯ್ಯಕ್ಕುಲವ ಸಾರ್?"

"ಆ?"

"ಅಹಿಂದ ಅಂತ ಹೇಳಿಕಂಡೋಗಿ ತಿರಗ ಅದೇ ಮಾತಾಡಕ್ಕೆ ಬಂದವ್ರುನ ಅಂತ ದುಡ್ಡು ಕಾಸು ಕೊಡೊ ಕದಿಕ್ಕೆ ಹೋಗಲ್ವ?"

"ಅದ್ಯಾಕೋದರೂ?"

"?!?!" ■



ಅಸಹಿಷ್ಣು ಬೆಂಕಿಗೆ ಮಸ್ತಾನಿ ಮದ್ದು

ಇದು Intolarence, ಅಸಹಿಷ್ಣುತೆ ಅಂದರೆ ಕೋಮು ಕಾರ್ಮೋಡದ ಕಾಲ. ಅಮಿರ್ ಖಾನ್, ಶಾರುಖ್ ಖಾನ್‌ರಂಥ ಬಾಲಿವುಡ್ ದಿಗ್ಗಜರು ಆಡಿದ ಯಾವುದೋ ಡೈಲಾಗ್‌ಗೇ ದೇಶಾದ್ಯಂತ ಕೇಸರಿ ಸಂಘಟನೆಗಳು ಬೀದಿರಂಪಕ್ಕಿಳಿದು ಭೂತ ಸುಟ್ಟ ವಿಷಗಳಿಗೆ ಕೂಡ. ವಾಟ್ಸಪ್, ಫೇಸ್‌ಬುಕ್, ಟ್ವಿಟ್ಟರ್... ಏನೇ ತೆರೆದರೂ ಅಸಹಿಷ್ಣುತೆಯದ್ದೇ ಮಾಯಾ ಜಾಲ. ದೇಶ ವಿಭಜನೆ, ಗಾಂಧಿ ಹತ್ಯೆ, ಆರೆಸ್ಸೆಸ್‌ನ ಉಗಮ, ಗೋಡ್ಸೆಯ ಆರಾಧನೆ, ಜನಸಂಘದ ಸ್ಥಾಪನೆ, ತುರ್ತು ಪರಿಸ್ಥಿತಿ, ಮೀರತ್ ಗಲಭೆ, ಬಿಜೆಪಿಯ ಹುಟ್ಟು ಬೆಳವಣಿಗೆ, ಅಯೋಧ್ಯೆ ಕರಸೇವೆ, ರಥಯಾತ್ರೆ, ಬಾಬರಿ ಮಸೀದಿಯ ನೆಲಸಮ, ವಾಜಪೇಯಿಗೆ ಪ್ರಧಾನಿ ಪಟ್ಟ, ಗೋಧ್ರಾ ಹತ್ಯಾಕಾಂಡ, ಗುಜರಾತ್‌ನ ದಾವಾನಲ, ಮೋದಿಯ ಭಜನೆ, ಅದ್ವಾನಿಯ ಮೂಲೆಗುಂಪು, ಮೋದಿ ಅಲೆ ಮತ್ತು ಬಿಜೆಪಿಗೆ ದಕ್ಕಿದ ಬಹುಮತ ಇತ್ಯಾದಿಗಳೆಲ್ಲವೂ ಈ ಅಸಹಿಷ್ಣುತೆಯ ಗರ್ಭಜನ್ಯ ಘಟನಾವಳಿಗಳೇ ಎಂಬುದನ್ನು ಬಿಡಿಸಿ ಹೇಳುವವರ್‍ಯಾರು?

ಆದರೆ ಮನುಷ್ಯತ್ವವಿದೆಯಲ್ಲ ಅದು ಎಂಥಾ ವಿಷವರ್ತುಲದಲ್ಲೂ ಜೀವಗಂಗೆ ಜಿನುಗಿಸುತ್ತದೆ, ಯಾವ ಬೆಂಕಿಯಲ್ಲೂ ಹೂವರಳಿಸುತ್ತದೆ. ಜಿನ್ನಾ ಕುರಿತಂತೆ ಅಡ್ವಾನಿಯ ಹೇಳಿಕೆಗೂ, ತಾನೇ ನಿಂತು ತನ್ನ ತಂಗಿಗೆ ಹಿಂದೂ ಹುಡುಗನನ್ನು ಮದುವೆ ಮಾಡಿದ ಸಲ್ಮಾನ್ ಖಾನ್ ದೊಡ್ಡಸ್ತಿಕೆಗೂ, ತನ್ನ ಮಕ್ಕಳಿಗೆ ಹಿಂದೂ ದೇವತೆಗಳ ಹೆಸರಿಟ್ಟ ಆಮಿರ್ ಖಾನ್ ಅಂತಃಕರಣಕ್ಕೂ, ಚೆನ್ನೈ ಜಲಪ್ರಳಯದಲ್ಲಿ ಮುಸ್ಲಿಮರನ್ನು ದೇವಸ್ಥಾನದಲ್ಲಿ ರಕ್ಷಿಸಿ ಕಾಪಾಡಿದ ಜನಸಾಮಾನ್ಯರಿಗೂ ಮತ್ತು ಊರ ಜಾತ್ರೆಯಲ್ಲಿ ಗ್ರಾಮ ದೇವತೆಗೆ ಆರತಿ ಬೆಳಗಿದ ಬೆಂಗಳೂರಿನ ಮಾವಳ್ಳಿಯ ಮುಸ್ಲಿಮರಿಗೂ ದೊಡ್ಡ ವ್ಯತ್ಯಾಸವೇನಿಲ್ಲ,

ಮರಾಠಾ ಪೇಶ್ವೆ....

ಅಸಹಿಷ್ಣುತೆಯ ವಿರಸವೆಂಬ ವಿಷಕ್ಕೆ ದೇಶಕ್ಕೆ ದೇಶವೇ ಬಲಿಯಾದ ಈ ವಿಷಗಳಿಗೆಯಲ್ಲಿ ಕಾಕತಾಳೀಯವೆನ್ನಿ ವಿಕಟವೆನ್ನಿ ಸ್ಥಿತಿ ನ್ಯಾಯವೆನ್ನಿ ಯಾವುದೋ ಮೂಲೆಯಿಂದ ಮಧುರ ಗೀತೆಯೊಂದು ಮೊಳಗುತ್ತಿದೆ.

ಅವಳು ಬಾಜಿರಾವ್ ಮಸ್ತಾನಿ!

ಕೆಲವೊಮ್ಮೆ ಯಾರೂ ಬಯಸದೆಯೇ ಅನಿರೀಕ್ಷಿತ ಸನ್ನಿವೇಶಗಳು, ಕಾಕತಾಳೀಯ ಪ್ರಸಂಗಗಳು, ಅಚಾನಕ್ ಪರಿಹಾರಗಳು ತನ್ನಿಂತಾನೇ ಸಂಭವಿಸುತ್ತವೆಯಂತೆ. ದೇಶಕ್ಕೆ ದೇಶವೇ ಅಸಹಿಷ್ಣು ವಿರಸದಲ್ಲಿ ಮುಳುಗಿರುವಾಗಲೇ ಅದಕ್ಕೊಂದು ಮದ್ದೆಂಬಂತೆ ಸಂಜಯ್ ಲೀಲಾ ಬನ್ಸಾಲಿಯ 'ಬಾಜಿರಾವ್ ಮಸ್ತಾನಿ' ತೆರೆ ಕಾಣುತ್ತಿದೆ. ಅದೊಂದು ಕಾಲ್ಪನಿಕ ಕತೆಯಾಗಿದ್ದರೆ, ಆ ಮಾತು ಬೇರೆ. ಆದರದು ಇತಿಹಾಸ ಅಂದರೆ ಎಂದೋ ಸಂಭವಿಸಿ ಕಾಲಗರ್ಭದಲ್ಲಿ ಹೂತುಹೋಗಿದ್ದ ಸತ್ಯ ಘಟನಾವಳಿ!

ಇವತ್ತಿನ ಅಸಹಿಷ್ಣು ಬೆಂಕಿಗೆ ಇತಿಹಾಸದ ಯಾವುದೋ ಕಾಲಘಟ್ಟದ ಬೀಜವೆಂಬಂತೆ ಚರಿತ್ರೆಯಲ್ಲಿ ದಾಖಲಾದ ಅದೆಷ್ಟೋ ಹೆಸರುಗಳ ಪೈಕಿ ಪ್ರಜ್ವಲಮಾನ ಹೆಸರೆಂದರೆ ಅದು ಮೊದಲನೇ ಪೇಶ್ವೆ ಬಾಜಿರಾಯ. ಮರಾಠಾ ಚಕ್ರಾಧಿಪತಿ ಸಾಹು ಮಹಾರಾಜರ ಸೇನೆಯ ದಂಡನಾಯಕನೂ ಪ್ರಧಾನಮಂತ್ರಿಯೂ ಆಗಿದ್ದ ಪೇಶ್ವೆ ಬಾಜಿರಾವ್ ಬಲ್ಲಾಳ್ ಭಟ್ ಎಂಬ ಚಿತ್ಪಾವನ ಬ್ರಾಹ್ಮಣ ಸೇನಾನಿ ಶಿವಾಜಿಯ ನಂತರ ಮಾಡಿದ ಯುದ್ಧಗಳು, ಆತನ ಮುಸ್ಲಿಂ ವೈಷಮ್ಯ, ಮೊಘಲರನ್ನು ಮಟ್ಟಾ ಹಾಕಿದ ಪರಾಕ್ರಮ ಮತ್ತು ಹಿಂದೂ ಸಾಮ್ರಾಜ್ಯ ಸ್ಥಾಪನೆಯ ಆತನ ಛಲ ಎಲ್ಲವೂ ಚರಿತ್ರೆಯ ಪುಟಗಳಲ್ಲಿ ಹಾಸುಹೊಕ್ಕಾಗಿ ಅಡಗಿವೆ.

ಆವತ್ತು ಪೇಶ್ವೆ ಬಾಜಿರಾವ್ ಭಿತ್ತಿದ ಹಿಂದೂ ಸಾಮ್ರಾಜ್ಯದ ಬೀಜಗಳೇ ಕಾಲಕ್ರಮೇಣ ಆತನದ್ದೇ ರಕ್ತಸಂಜಾತ ಚಿತ್ಪಾವನ ಬ್ರಾಹ್ಮಣ ಸಮೂಹ ರಾಷ್ಟ್ರೀಯ ಸ್ವಯಂಸೇವಕ ಸಂಘ ಅಂದರೆ ಆರೆಸ್ಸೆಸ್ ಹುಟ್ಟು ಹಾಕುವ ಮೂಲಕ ಇವತ್ತು ಹೆಮ್ಮರವಾಗಿ, ಮೋದಿ ಎಂಬ ಸರ್ವಾಧಿಕಾರಿಯ ಹಿಡಿತಕ್ಕೆ ಇಡೀ ದೇಶವನ್ನೊಪ್ಪಿಸುವಷ್ಟು ಅಗಾಧವಾಗಿ ಹುಲುಸಾಗಿ ಬೆಳೆದುನಿಂತಿದೆ.

ಪೇಶ್ವೆ ಬಾಜಿರಾಯ

ಹೈದರಾಬಾದಿನ ನಿಜಾಮ, ಮಾಲ್ವಾರ ಅಧಿಪತಿ ಮುಹಮ್ಮದ್ ಖಾನ್ ಬಂಗಾಶ್, ಗುಜರಾತ್‌ನ ಸುಲ್ತಾನ್ ಹಮೀರ್ ಖಾನ್, ಮೊಘಲರ ಸಾಮಂತ ಸರ್‌ಬುಲಂದ್ ಖಾನ್, ಆಗ್ರಾದ ಸೇನಾನಿ ಸಾರತ್‌ಖಾನ್, ದೆಹಲಿಯ ದಂಡನಾಯಕ ಹಸನ್ ಕೋಕಾ, ದೆಹಲಿಯ ಚಕ್ರವರ್ತಿ ಮೊಘಲ್ ಸಾಮ್ರಾಟ ಮುಹಮ್ಮದ್ ಷಾ, ಆತನ ದಳಪತಿ ಮುಬಾರಿಜ್ ಖಾನ್, ನಿಜಾಮನ ಕಮಾಂಡರ್ ಆಸಿಫ್ ಝಾ- ಹೀಗೆ ದಕ್ಷಿಣದ ತಮಿಳುನಾಡಿನಿಂದ ಉತ್ತರದ ದೆಹಲಿ ಸೇರಿದಂತೆ ಸಿಂಧು ತಟದ ಅಟೋಕ್ ಯ... ವರೆಗೂ ಮುಸ್ಲಿಂ ಸುಲ್ತಾನರು, ಅವರ ಸಾಮಂತರು, ... ಲರು, ನಿಜಾಮರು ಯಾರನ್ನೂ ಬಿಡದೆ ಒಬ್ಬೊಬ್ಬ... ಧ್ವಂಸಗೈದ ಪೇಶ್ವೆ ಬಾಜಿರಾಯನೆಂದರೆ ಇವ... ಇತಿಹಾಸಕಾರರೂ ರೋಮಾಂಚನಗೊಳ್ಳುವ ಹೆಸರ...

ಹಿಂದೂ ಸಾಮ್ರಾಜ್ಯದ ಚರಿತ್ರೆಗೆ ಬಂದರೆ ಶಿವಾ... ನಂತರದ ಅತ್ಯಂತ ಪರಾಕ್ರಮಿಯೆಂದರೆ ಅದು ಮೊದ... ಪೇಶ್ವೆ ಬಾಜಿರಾಯನೆ. ಶಿವಾಜಿ ಮರಾಠಾ ಕ್ಷತ್ರಿಯ. ಆ... ರಾಜ್ಯ ವಿಸ್ತರಣೆ. ಆತ ಸೋತಿದ್ದ ಸೆರೆಯ... ಗಾಯಗೊಂಡಿದ್ದ. ಆದರೆ ಬಾಜಿರಾವ್ ಬ್ರಾಹ್ಮಣ. ಯ... ರಕ್ತ, ಖಡ್ಗ, ಹತ್ಯೆಗೆ ತೀರ ವಿರೋಧಾಭಾಸದ ಚಿತ... ಬ್ರಾಹ್ಮಣ ಪ್ರಧಾನಿಯೋರ್ವ ಶಿವಾಜಿಯನ್ನೂ ಮೀರಿಸು... ಯುದ್ಧಕೋರನೂ ಪರಾಕ್ರಮಿಯೂ ಆಗಿರಲು ... ಸಾಧ್ಯವೆಂಬುದೇ ಇವತ್ತಿಗೂ ಒಗಟು. ಕೇವಲ ದೆಹ... ಮೊಘಲ್ ಸಾಮ್ರಾಟ ಮಹಮ್ಮದ್ ಷಾನ ಬ... ಸೇನೆಯನ್ನಷ್ಟೇ ಅಲ್ಲ, ಆಧುನಿಕ ಶಸ್ತ್ರಾಸ್ತ್ರ ಸ... ಪೋರ್ಚುಗೀಸರನ್ನೇ ಹೀನಾಯವಾಗಿ ಸೋಲಿಸಿ ... ಹಾಕಿದ್ದು ಬಾಜಿರಾಯ.

ಪಾಕಿಸ್ತಾನದ ಇತಿಹಾಸಕಾರರ ಪ್ರಕಾರ ಮೊಘ... ಭಾರತದಿಂದ ಶಾಶ್ವತವಾಗಿ ನಿಕಾಲಿ ಮಾಡಿದ್ದು ... ಬಾಜಿರಾವ್!


ಆತ ಬದುಕಿದ್ದು ಕೇವಲ ನಲವತ್ತು ವರ್ಷಗಳು ... ತನ್ನ ನಲವತ್ತು ವರ್ಷಗಳ ಸೀಮಿತ ಆಯುಸ್ಸಾವಧಿ... ಬರೋಬ್ಬರಿ ನಲವತ್ತೊಂದು ಭಯಾನಕ ಯುದ್ಧ... ಮಾಡಿದ ಬಾಜಿರಾಯನ ಯಾವೊಂದು ಯುದ್ಧ... ಸೋಲಲಿಲ್ಲ, ಯಾವತ್ತಿಗೂ ಯಾವ ವೈರಿಗೂ ತಲೆಬಾ... ಇಂಥಾ ಪರಾಕ್ರಮಿ ಬ್ರಾಹ್ಮಣ ಸೇನಾನಿಯ ಅಕಾಲ ... ಅಂದರೆ ತನ್ನ ನಲವತ್ತನೇ ವಯಸ್ಸಿಗೇ ನಿಗೂಢವಾಗಿ... ಬಾಜಿರಾಯನ ಇಡೀ ವೀರಗಾಥೆಗೊಂದು ಅನಿ... ತಿರುವು ಬರುವುದು ಮಸ್ತಾನಿ ಎಂಬ ಆತನ ... ಪ್ರೇಯಸಿಯಿಂದ!

ಪ್ರೇಯಸಿಯಲ್ಲ; ಅವಳು ಬಾಜಿರಾಯನ ಅ... ಪತ್ನಿ ಮತ್ತು ಎರಡನೇ ಮಡದಿ!

ಹಿಂದೂ ಸಾಮ್ರಾಜ್ಯಕ್ಕಾಗಿ

ಮೊಘಲರು, ನಿಜಾಮರು, ಸುಲ್ತಾನರ ವಿರುದ್ಧ... ಕೋಡಿಯನ್ನೇ ಹರಿಸಿದ, ಹಿಂದೂ ಸಾಮ್ರಾಜ್ಯ ಸ್ಥಾಪನೆ... ತನ್ನ ಬದುಕನ್ನೇ ಮುಡುಪಿಟ್ಟ ಪೇಶ್ವೆ ಬಾಜಿರಾಯನಿಗ... ಮುಸ್ಲಿಂ ಮಡದಿಯಿದ್ದಳೆಂದಾಗಲಿ, ಆಕೆಯನ್ನು ಬಾಜಿ... ತನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸಿದ್ದಾಗಲಿ, ಬಾಜಿರ... ಬಹುತೇಕ ಯುದ್ಧಗಳಲ್ಲಿ ಆಕೆ ತನ್ನ ಪ್ರಾಣ ಪ... ತನ್ನದೇ ಧರ್ಮದ ಮುಸ್ಲಿಮರ ವಿರುದ್ಧ ಹೋರಾಡಿದ... ಆಕೆಯ ಒಬ್ಬನೇ ಮುಸ್ಲಿಂ ಮಗ ಸಂಶೇರ್ ಬಹಾ... ತನ್ನ ಹಿಂದೂ ತಂದೆಯ ಹಂಗಿಗೆ ಬಿದ್ದು ಮರಾಠ... ಮುಸ್ಲಿಂ ಸೇನೆಯ ವಿರುದ್ಧ ಪಾಣಿಪತ್ ಕದನದಲ್ಲಿ ... ತೆತ್ತಿದ್ದಾಗಲಿ ದೇಶಭಕ್ತಿಯ ಗುತ್ತಿಗೆ ಹಿಡಿದ ಈ ತಲೆ... ಯುವಪೀಳಿಗೆಗೆ ಗೊತ್ತೇ ಇರಲಿಕ್ಕಿಲ್ಲ, ಬಾಜಿರಾ... ಮೊದಲನೇ ಹಿಂದೂ ಪತ್ನಿ ಕಾಶಿಬಾಯಿ ತನ್ನ ...





ಅರೆಮುಸ್ಲಿಂ ಕೃಷ್ಣರಾಯನ ಉಪನಯನ ಮತ್ತು ಚಿತ್ಪಾವನರ ಬಹಿಷ್ಕಾ...

ಬಹುತೇಕ ಇತಿಹಾಸಕಾರರು ಬಾಜಿರಾಯನ ಶೌರ್ಯಪರಾಕ್ರಮಗಳನ್ನಷ್ಟೇ ಗೌರವಿಸಿ ಆತನಿಗೊಬ್ಬಳು ಮುಸ್ಲಿಂ ಪ್ರೇಯಸಿಯಿದ್ದಳೆಂದೋ, ನರ್ತಕಿಯಾಗಿದ್ದ ಮಸ್ತಾನಿಯನ್ನು ಬಾಜಿರಾವ್ ಅಪಾರವಾಗಿ ಪ್ರೀತಿಸುತ್ತಿದ್ದನೆಂದಷ್ಟೇ ಹೇಳಿ ವಿಷಯ ತೇಲಿಸಿಬಿಡುತ್ತಾರೆ. ಆದರೆ ಪತ್ರಕರ್ತೆ ಕುಸುಮ್ ಛೋಪ್ರಾ ಕಲೆ ಹಾಕಿದ ವಿವರಗಳು ಮಾಡಿದ ಸಂಶೋಧನೆ ಮಸ್ತಾನಿಯ ವ್ಯಕ್ತಿತ್ವಕ್ಕೆ ಬೇರೆಯದೇ ನ್ಯಾಯ ಕಲ್ಪಿಸುತ್ತದೆ.

ಆ ಪ್ರಕಾರ ಮಸ್ತಾನಿ ಬುಂದೇಲ್ ಖಂಡದ ದೊರೆ ಛತ್ರಸಾಲ ಮತ್ತಾತನ ಪರ್ಷಿಯನ್ ಮಡದಿ ರುಹಾನಿ ಬಾಯಿಯ ಮುದ್ದಿನ ಮಗಳು. ಛತ್ರಸಾಲ ನೀಡಿದ ಆ ಪಾಟ ವರದಕ್ಷಿಣೆಯಿಂದಾಗಿಯೇ ಬಾಜಿರಾಯನ ಮನೆತನ ಶ್ರೀಮಂತಿಕೆಯ ಸುಪ್ಪತ್ತಿಗೆ ಸೇರಿತು. ಬಾಜಿರಾಯನಿಂದ ಜನಿಸಿದ ತನ್ನ ಮಗನಿಗಾಕೆ ಕೃಷ್ಣರಾವ್ ಎಂದೇ ಹೆಸರಿಟ್ಟಿದ್ದಳು. ಆದರೆ ಮಸ್ತಾನಿಗೆ ಕೃಷ್ಣನ ಮೇಲೆ ಅಪಾರ ಭಕ್ತಿಯಿತ್ತು, ಏಕೆಂದರೆ ತಂದೆ ಛತ್ರಸಾಲ ತನ್ನ ಪರ್ಷಿಯನ್ ಮಡದಿಯಿಂದ ಪ್ರಭಾವಿತನಾಗಿ ಹಿಂದೂ ಮುಸ್ಲಿಂ ಏಕತೆಯ ಉದ್ದೇಶದಿಂದಲೇ 'ಪ್ರಣಾಮೀ ಪಂಥ'ವೆಂಬ ಹೊಸ ಪಂಥವೊಂದನ್ನು ಸ್ಥಾಪಿಸಿದ್ದ. ತಂದೆಯ ಆದರ್ಶವನ್ನೇ ಪಾಲಿಸುತ್ತಿದ್ದ ಮಸ್ತಾನಿ ಭಜನೆ ಮತ್ತು ನಮಾಜನ್ನು ಒಟ್ಟೊಟ್ಟಿಗೆ ನಿರ್ವಹಿಸುತ್ತಿದ್ದಳು. ಯುದ್ಧ ಕಲೆ, ರಾಜಕಾರಣ ಮತ್ತು diplomacy ಯಲ್ಲಿ ಆಕೆಗೆ ಪರಿಣಿತಿಯಿತ್ತು.

ಬಂದೇಲ ಖಂಡದ ದೊರೆ ಛತ್ರಸಾಲನ ಮಗಳನ್ನು ಏಕಾಏಕಿ ಒಪ್ಪಿಕೊಂಡ ಬಾಜಿರಾಯನ ನಿರ್ಧಾರಕ್ಕೂ ಬೇರೆಯದೇ ಕಾರಣವಿತ್ತು, ಅದು ದೆಹಲಿಯ ಮೊಘಲ್ ಸಾಮ್ರಾಜ್ಯದ ಮೇಲೆ ದಂಡೆತ್ತಿ ಹೋಗುವ ಆತನ ಮಹತ್ವಾಕಾಂಕ್ಷೆಗೆ ಮಧ್ಯ ಭಾರತದ ಕೊನೆತುದಿಯಲ್ಲಿದ್ದ ಬಂದೇಲ್ ಖಂಡವು ಸುರಕ್ಷಿತ ರಹದಾರಿಯಂತಿತ್ತು, ಪುಣೆ, ಸತಾರಾ, ಮಾಲ್ವಾಗಳಿಂದ ಸುಲಭವಾಗಿ ಬಂದೇಲ ಖಂಡದಲ್ಲಿ ಸೇನೆ ಜಮಾಯಿಸಿ ಅಲ್ಲಿಂದ ದೆಹಲಿಗೆ ಅರ್ಧ ದೂರ ಮತ್ತು ಮುಕ್ಕಾಲು ಅಪಾಯ ಕಮ್ಮಿಯಾಗುತ್ತಿತ್ತು. ... ಅರ್ಥಮಾಡಿಕೊಳ್ಳುವ ತಾಳ್ಮೆ, ವ್ಯವಧಾನವಾದರೂ ಬಾಜಿರಾಯನ ಅತ್ತೆ, ... ತಮ್ಮಂದಿರಿಗೆಲ್ಲಿತ್ತು?

ಮಸ್ತಾನಿಯ ಮಗ ಕೃಷ್ಣರಾವ್‌ನನ್ನು ತನ್ನ ಮೊದಲ ಪತ್ನಿ ಕಾಶಿಬಾಯಿಯ ಮ... ಬಾಲಾಜಿರಾವ್ ಮತ್ತು ರಘುನಾಥ್‌ರಾವ್ ಜೊತೆಜೊತೆಗೇ ಉಪನಯನ ಮಾಡಿ ಜ... ತೊಡಿಸಬೇಕೆಂದು ಬಾಜಿರಾಯ ಇನ್ನಿಲ್ಲದಂತೆ ಆಸೆಪಟ್ಟ. ಪೇಶ್ವೆಯ ಮಕ್ಕಳ ಉಪನಯನ... ಖುದ್ದು ಸಾಹು ಮಹಾರಾಜರೇ ಸತಾರಾದಿಂದ ಬರುತ್ತೇನೆಂದು ಮಾತು ಕೊಟ್ಟ... ಆದರೆ ಮುಸ್ಲಿಂ ಪತ್ನಿಗೆ ಹುಟ್ಟಿದ ಕೃಷ್ಣರಾಯನನ್ನು ಕಾಶಿಬಾಯಿಯ ಮಕ್ಕಳ ... ಜನಿವಾರ ಧಾರಣೆಗೆ ಪುಣೆಯಷ್ಟೇ ಅಲ್ಲ, ಇಡೀ ಮರಾಠಾ ಸಾಮ್ರಾಜ್ಯದ ಯಾ... ಬ್ರಾಹ್ಮಣರೂ ಒಪ್ಪಲಿಲ್ಲ. ಕರ್ಮಠ ಚಿತ್ಪಾವನ ಬ್ರಾಹ್ಮಣ ಸಮುದಾಯ ಪೂರ್ತಿ ಬಾಜಿರ... ಮುಸ್ಲಿಂ ಪತ್ನಿ ಮಗನ ಮುಂಜಿಯ ವಿರುದ್ಧ ತಿರುಗಿಬಿದ್ದಿತ್ತು, ಕೃಷ್ಣರಾಯನನ್ನು ಬೇರೆ... ಕಾಶಿಬಾಯಿಯ ಮಕ್ಕಳಿಗೆ ಉಪನಯನವಾಯಿತು. ಸಾಹು ಮಹಾರಾಜರೇ ಬಂದರ... ಮಸ್ತಾನಿ ಮಾತ್ರ ನಾಪತ್ತೆ!

ಅಂದರೆ ಆ ಹೊತ್ತಿಗಾಗಲೇ ಮಸ್ತಾನಿಯನ್ನು ಕಾಶಿಬಾಯಿಯ ತಾಯಿ ರಾಧಾ... ಕೊಲ್ಲಿಸಿಯಾಗಿತ್ತೆ?

ಇದನ್ನು ಅರಿತೇ ಮಸ್ತಾನಿ ತನಗಿನ್ನು ಹಿಂದೂ ಋಣವಿಲ್ಲವೆಂಬ ನಿರ್ಧ... ಬಂದಿರಬೇಕು. ವಿಧಿಯಿಲ್ಲದೇ ತನ್ನ ಮಗನ ಭವಿಷ್ಯಕ್ಕೆಂದು ಇಸ್ಲಾಂ ಹಾದಿ ಹಿಡಿದಿರ... ಕೃಷ್ಣರಾವ್ ಆಗಿದ್ದ ಮಸ್ತಾನಿಯ ಮಗ ಸಂಶೇರ್ ಬಹದ್ದೂರ್ ಆದ ಬಗ್ಗೆ ಬ... ಚರಿತ್ರೆಕಾರರದ್ದು ಮಾರ್ಮಿಕ ಮೌನ!

ಕೊಲೆಯಾದ ಮಸ್ತಾನಿಯ ಕೊರಗಲ್ಲೇ ಬಾಜಿರಾಯನ ಆತ್ಮಹತ್ಯೆ?

ಬಾಜಿರಾಯನ ಅನಿರೀಕ್ಷಿತ ಅಕಾಲಿಕ ಮೃತ್ಯುವಿನ ಮರ್ಮವನ್ನೂ ಚರಿತ್ರಕಾರರು ನಿಗೂಢವಾಗೇ ಇಟ್ಟಿದ್ದಾರೆ ಅಥವಾ ಆತನ ಕುಟುಂಬದ ವಾದವನ್ನೇ ಕುರುಡಾಗಿ ನಂಬಿಕೊಂಡಿದ್ದಾರೆ. 1740ರ ಏಪ್ರಿಲ್ 28ರಂದು ಖರೆಗಾಂವ್‌ನ ತನ್ನ ತೋಟದ ಜಮೀನನ್ನು ನೋಡುತ್ತಿರುವಾಗ ಹಠಾತ್ತಾಗಿ ಬಾಜಿರಾಯನ ಮೃತ್ಯು ಸಂಭವಿಸಿತೆಂಬುದು ಬಹುತೇಕರ ವಾದ. ಅದು ಬಿಸಿ ಗಾಳಿ ಅಥವಾ ಉಷ್ಣದ ಫಲವೆನ್ನುತ್ತಾರೆ. ತನ್ನ ಜೀವಮಾನವಿಡೀ ಯುದ್ಧದಲ್ಲೇ ದಂಡೆತ್ತಿ ಹೋಗುವುದರಲ್ಲೇ ತಲ್ಲೀನನಾಗಿದ್ದ ಬಾಜಿರಾಯ ತನ್ನ ತೋಟದ ಜಮೀನಿನಲ್ಲಿ ಅದೂ ನಲವತ್ತನೇ ವಯಸ್ಸಿನಲ್ಲಿ ಹೇಗೆ ತಾನೇ ಸಾಯಲು ಸಾಧ್ಯ?

ಬಾಜಿರಾಯ ಸತ್ತ ಕೆಲವೇ ದಿನಗಳಲ್ಲಿ ಮಸ್ತಾನಿಯೂ ಸತ್ತಳೆಂಬುದನ್ನಾಗಲಿ, ಆಕೆಯದ್ದೂ ಯಾವುದೋ ವ್ಯಾಧಿಯಿಂದಾದ ಸಾವೆಂಬುದಾಗಲಿ ನಂಬಲು ಸಾಧ್ಯವೇ?

ಯಾವತ್ತು ಸಾಹು ಮಹಾರಾಜರು ಉಪನಯನಕ್ಕೆಂದು ಬಂದಾಗ ಮಸ್ತಾನಿ ಕಾಣಿಸಲಿಲ್ಲವೋ ಬಾಜಿರಾಯನಿಗೆ ಆಕೆ ಕೊಲೆಯಾಗಿ ಹೋಗಿದ್ದಾಳೆಂಬುದು ಖಾತರಿಯಾಗಿದೆ. ಅದಕ್ಕೂ ಮೊದಲೇ ಬಾಜಿರಾಯನ ಅತ್ತೆ ಮತ್ತು ತಮ್ಮಂದಿರು ಸೇರಿ ಆಕೆಯನ್ನು ಗೃಹಬಂಧನದಲ್ಲಿಟ್ಟಾಗಿತ್ತು. ಮಸ್ತಾನಿಯ ಜೊತೆ ಮಾತಾಡುವುದಕ್ಕೂ ಬಾಜಿರಾಯನಿಗೆ ಅವಕಾಶವಿಲ್ಲದಂತೆ ಅತ್ತೆ ರಾಧಾಬಾಯಿ ನಿರ್ಬಂಧಿಸಿದ್ದಳು. ಬದುಕಿರಬಹುದೆಂದೇ ಭಾವಿಸಿದ್ದ ಬಾಜಿರಾಯನಿಗೆ ಮಸ್ತಾನಿ ಕೊಲೆಯಾದ ಸತ್ಯ ಗೊತ್ತಾಗಿದ್ದೇ ಆತ್ಮಹತ್ಯೆ ಮಾಡಿಕೊಂಡಿರಬೇಕು. ಅದಕ್ಕೂ ಮುನ್ನ ತಿಂಗಳುಗಟ್ಟಲೇ ತನ್ನ ಅಂತಃಪುರ ಸೇರಿಕೊಂಡಿದ್ದ ಬಾಜಿರಾಯ ಮಸ್ತಾನಿಯ ವಿರಹವೇದನೆಗೆ ಬದ್ಧೇ ಮದಿರೆಯ ದಾಸನಾಗಿದ್ದ. ವಿಪರೀತ ಕಾಡಿತ್ತ ಖಿನ್ನತೆ, ಕೊರಗು ಆತನನ್ನು ಕೃಶನನ್ನಾಗಿಸಿತ್ತು ಅಥವಾ ರಾಧಾಬಾಯಿಯೇ ಮದ್ಯದಲ್ಲಿ ವಿಷ ಬೆರೆಸಿಕೊಟ್ಟಿರಲೂಬಹುದು. ಬಹುಶಃ ತಾಯಿಯ ಹತ್ಯೆ ಮತ್ತು ತಂದೆಯ ಆತ್ಮಹತ್ಯೆಯ ನಂತರ ಅನಾಥನಾದ ಕೃಷ್ಣರಾವ್ ತನ್ನ ಅಜ್ಜಿ ರುಹಾನಿಬಾಯಿಯ ಮುಸ್ಲಿಂ ಸಂಬಂಧಿಕರ ಆಸರೆಗೆ ಬಿದ್ದು ಸಂಶೇರ್ ಬಹದ್ದೂರ್ ಆಗಿರಬೇಕು. ಹೇಗೂ ಮಸ್ತಾನಿಯ ತಂದೆ ಛತ್ರಸಾಲನ ಬಂದೇಲ್ ರಾಜ್ಯವಿತ್ತಲ್ಲ ಅದಕ್ಕೆ ಕಾಲಕ್ರಮೇಣ ದೊರೆಯಾದವನು ಸಂಶೇರ್ ಬಹಾದ್ದೂರ್‌ನ ಮಗ ಅಲಿ ಬಹಾದ್ದೂರ್. ಅದಕ್ಕೂ ಮೊದಲೇ ಸಂಶೇರ್ ಮರಾಠರಿಗಾಗಿ ಪಾಣಿಪತ್ ಕದನದಲ್ಲಿ ಪ್ರಾಣತೆತ್ತು ಹುತಾತ್ಮನಾಗಿದ್ದ!

ಚರಿತ್ರೆಯ ಅನ್ಯಾಯ ವಂಚನೆಗೆ ಬಲಿಯಾದ ಮಸ್ತಾನಿ ಮತ್ತಾಕೆಯ ಹತಭಾಗ್ಯ ಪುತ್ರ ಸಂಶೇರ್ ಬಹಾದ್ದೂರ್ ಅಲಿಯಾಸ್ ಕೃಷ್ಣರಾವ್‌ರ ತ್ಯಾಗ ಬಲಿದಾನಗಳನ್ನು ಸಹಿಸಲಾರದಷ್ಟು, ಕೃತಜ್ಞರಾಗಿರಲಾರದಷ್ಟು ಕ್ರೂರಿಯೇ ಭರತಖಂಡ?



...ನಿಗೆ ಕೊಟ್ಟ ಹಿಂಸೆ; ಕಾಶಿಬಾಯಿಯ ತಾಯಿ ..., ಬಾಜಿರಾಯನ ತಮ್ಮ ಚಿಮಾಜಿ ಅಪ್ಪಾ ಮಸ್ತಾನಿಯನ್ನು ಪೀಡಿಸಿದ್ದು; ಮಗ ಬಾಲಾಜಿ ...ಜಿರಾಯ ಮುಸ್ಲಿಮಳೆಂದು ತನ್ನ ಮಲತಾಯಿ ...ನ್ನ ಮುಗಿಸಲು ಮಾಡಿದ ಕಾರಸ್ಥಾನ; ಮಸ್ತಾನಿಯ ...ಎಂದೂ ಧರ್ಮಕ್ಕೆ ಸೇರಿಸಿಕೊಳ್ಳದೆ ತಿರಸ್ಕರಿಸಿದ ಬ್ರಾಹ್ಮಣರ ಕ್ರೌರ್ಯ; ಬಾಜಿರಾಯನ ವಿರುದ್ಧ ಮಹಾರಾಷ್ಟ್ರದ ಬ್ರಾಹ್ಮಣರ ಜಾತೀಯ ಮೌಢ್ಯ...

ಪರಿಣಾಮವೆಂಬಂತೆ ಮಸ್ತಾನಿ ಮತ್ತು ...ನ ದಾರುಣ ಅಂತ್ಯಗಳ ಕತೆಯಲ್ಲೇ ಅಸಹಿಷ್ಣು ...ಷಮನದ ಮದ್ದಡಗಿರುವಂತಿದೆ.

...ಜ್ ಲೀಲಾ ಬನ್ಸಾಲಿಯ 'ಬಾಜಿರಾವ್ ಮಸ್ತಾನಿ' ...ಈ ಎಲ್ಲಾ ಅಂಶಗಳು ಯಥಾವತ್ತಾಗಿ ...ದಿದ್ದರೆ ಅದು ಮಸ್ತಾನಿಗೆ ಸಂದ ...ಹುದು. ಆದರೆ ಬಾಜಿರಾಯನ ಧರ್ಮಪತ್ನಿ ಆಕೆಯ ವೈದಿಕ ಸಂತತಿಯ ಹಿತಾಸಕ್ತಿ, ...ಲೇ ಹಿತಾಸಕ್ತಿಗನುಗುಣವಾಗಿ ಇತಿಹಾಸಕಾರರು ಮಾಡಿದ ಅಪಚಾರ, ಅಪಪ್ರಚಾರ ಎಲ್ಲವೂ ಪುನರಾವರ್ತನೆಗೊಂಡಿದ್ದರೆ ಅದೊಂದು ಅನ್ಯಾಯವಾಗಿಯೆ ಉಳಿದು ಬಿಡುತ್ತದೆ. ಅದು ...ಸಾಮಾನ್ಯ ಸಹಿಷ್ಣು ಪರಂಪರೆ ಮತ್ತು ...ಸ್ಲಿಂ ಸಾಮರಸ್ಯದ ಧರ್ಮಾತೀತ ಸಂಸ್ಕೃತಿಗೆ ...ಚಾರವಾಗುವ ಅಪಾಯವೂ ಇದೆ. ಈ ನಿಟ್ಟಿನಲ್ಲಿ ...ಗಿ ಬಾಜಿರಾವ್-ಮಸ್ತಾನಿ ಪ್ರೇಮಪ್ರಸಂಗದ ...ದ ಬೆಳಕು ಹರಿಸುವುದಷ್ಟೇ ಈ ಲೇಖನದ

ಹಿಮಾಲಯದಾಚೆಗೆ

...ವ್ ಬಲ್ಲಾಳ್ ಭಟ್ ಯಾನೇ ಪೇಶ್ವೆ ...ಅರ್ಥಾತ್ ಶ್ರೀಮಂತ್ ಬಾಜಿರಾವ್ ಬಲ್ಲಾಳ್‌ನ 18ನೇ ಆಗಸ್ಟ್ 1700 ರಿಂದ 28 ಏಪ್ರಿಲ್ ...ರೆಗೆ. ಈತನ ಮಗ ಬಾಲಾಜಿ ಬಾಜಿರಾವ್ ...ಡನೇ ಪೇಶ್ವೆ ಬಾಜಿರಾಯ. ಶಿವಾಜಿ ನಂತರದ ...ಮ್ರಾಜ್ಯದ ಐದನೇ ಛತ್ರಪತಿ ಸಾಹು ರಾಜೇ ...ಂದರೆ ಸಾಹು ಮಹಾರಾಜರ ಆಸ್ಥಾನದಲ್ಲಿ ...ಯಾಗಿದ್ದ ಭಾಜಿರಾವ್ ಇತಿಹಾಸಕಾರರ ಪ್ರಕಾರ ...he greatest warriors in Indian ...ತಂದೆ ಬಾಲಾಜಿ ವಿಶ್ವನಾಥ್ ಸಾಹು ಮಹಾರಾಜರ ಆಸ್ಥಾನದಲ್ಲಿ ಮೊದಲನೇ ಪೇಶ್ವೆಯಾಗಿದ್ದ.

ಮರಾಠಾ ಸಾಮ್ರಾಜ್ಯದ ಒಂಬತ್ತು ಮಂದಿ ಪೇಶ್ವೆಗಳ ಪೈಕಿ Most Influencial ಹಿಂದೂ empireನ ವಿಸ್ತಾರಕ, ಯುದ್ಧ ತಂತ್ರ ನಿಪುಣ, ಮಹಾನ್ ಪರಾಕ್ರಮಿ ಎಂದೆಲ್ಲ ಹೆಗ್ಗಳಿಕೆಯ ಬಾಜಿರಾಯ ಛತ್ರಪತಿ ಸಾಹು ಮಹಾರಾಜರ ಪ್ರಧಾನಿ ಪಟ್ಟಕ್ಕೇರಿದ್ದು ತನ್ನ ಇಪ್ಪತ್ತನೇ ವಯಸ್ಸಿಗೆ. ವಯಸ್ಸು, ಅನುಭವ, ಪರಿಣಿತಿ ಯಾವುದನ್ನೂ ಲೆಕ್ಕಿಸದೆ ಕೇವಲ ವ್ಯಕ್ತಿತ್ವಕ್ಕೆ ಮಾರುಹೋದ ಸಾಹು ಮಹಾರಾಜರು ಆ ಸಣ್ಣ ವಯಸ್ಸಿಗೇ ತನ್ನ ಇಡೀ ಸೇನೆಯನ್ನು ಬಾಜಿರಾಯನಿಗೆ ವಹಿಸಿಕೊಟ್ಟಿದ್ದಕ್ಕೂ ಕಾರಣವಿತ್ತು. ತಾನು ಪ್ರಧಾನಿ ಪದವಿ ವಹಿಸಿಕೊಂಡ ಮರುಗಳಿಗೆಯಲ್ಲೇ ಬಾಜಿರಾವ್ ಮಹಾರಾಜನನ್ನುದ್ದೇಶಿಸಿ ಹೇಳಿದ ಮಾತುಗಳು ಚರಿತ್ರಾರ್ಹ-

.... ನಾವು ದಕ್ಷಿಣದ ಬಂಜರು ಪ್ರದೇಶವನ್ನು ದಾಟಿ ಮಧ್ಯ ಭಾರತಕ್ಕೆ ಲಗ್ಗೆ ಹಾಕಬೇಕು. ಮೊಘಲ್ ದೊರೆಗಳು ಮದ್ಯ, ಅಫೀಮು, ಹೆಣ್ಣು ಚಟಕ್ಕೆ ಬಿದ್ದು ಲೋಲುಪ್ತರಾಗಿ ಹಿಂದೆಂದಿಗಿಂತಲೂ ದುರ್ಬಲರಾಗಿರುವ ಈ ಸಂದರ್ಭವನ್ನು ಬಳಸಿಕೊಂಡು ನಾವು ಸಫಲರಾದೆವೆಂದರೆ ಅವರ ಖಜಾನೆಯಲ್ಲಿರುವ ಇಡೀ ಉತ್ತರ ಭಾರತದ ಸಂಪತ್ತು ನಮ್ಮದಾಗುತ್ತದೆ. ಕ್ರೂರಿಗಳೂ ಧರ್ಮಕಂಟಕರನ್ನು ಈ ಭರತ ಖಂಡದಿಂದ ಹೊರದಬ್ಬಲೇಬೇಕು. ಅವರನ್ನು ಹಿಮಾಲಯದಿಂದಾಚೆಗೆ ಅವರ ಮೂಲಸ್ಥಾನಕ್ಕೆ ಓಡಿಸಿ ಭಗವಾಧ್ವಜವನ್ನು ಹಿಮಾಲಯದೆತ್ತರಕ್ಕೆ ನೆಡಬೇಕು. ಕೃಷ್ಣಾನದಿಯಿಂದ ಸಿಂಧೂನದಿಯವರೆಗಿನ ಹಿಂದೂಸ್ತಾನವನ್ನು ವಿಶ್ವದೆತ್ತರಕ್ಕೆ ಬೆಳಗಿಸಬೇಕು...!

ಬುಂದೇಲರ ದೊರೆ

ಸಾಹು ಮಹಾರಾಜರ ಆಸ್ಥಾನದ ದಾಖಲೆಗಳಲ್ಲಿ ಇವತ್ತಿಗೂ ಬಾಜಿರಾಯನ ಈ ಮಾತುಗಳ ದಾಖಲೆಯಿದೆ. ಇದನ್ನೇ ಸಂಘ ಪರಿವಾರ ತನ್ನ ಧ್ಯೇಯವನ್ನಾಗಿಸಿಕೊಂಡಿದೆ. ಇದು ಬಾಜಿರಾಯನ ಉದ್ದೇಶ, ದೃಷ್ಟಿಕೋನ ಮತ್ತು ವ್ಯಕ್ತಿತ್ವದ ಲಕ್ಷಣವಷ್ಟೆ. 1758ರಲ್ಲಿ ಮಗ ಬಾಲಾಜಿ ಎರಡನೇ ಬಾಜಿರಾಯನ ಕಾಲಕ್ಕೆ ಸಿಂಧೂ ತಟದ 'ಅಟೋಕ್' ಅನ್ನು ವಶಪಡಿಸಿಕೊಳ್ಳುವ ಮೂಲಕ ಇದು ಸಾಕಾರಗೊಂಡಿತಾದರೂ ಆ ಹೊತ್ತಿಗೆ ಬಾಜಿರಾಯನೇ ಬದುಕಿರಲಿಲ್ಲ. ಆದರೆ ಆತ ಹಾಕಿಕೊಟ್ಟ ಅಡಿಪಾಯ, ಕಲಿಸಿಕೊಟ್ಟ ಯುದ್ಧ ತಂತ್ರ ಮತ್ತು ಸಾಧಿಸಿದ್ದ ಜಯವೆಲ್ಲವೂ ಸಣ್ಣ ಸಂಗತಿಗಳಾಗಿರಲಿಲ್ಲ.

1720 ರಲ್ಲಿ ಪ್ರಧಾನಿ ಪಟ್ಟ ವಹಿಸಿಕೊಂಡ ಬಾಜಿರಾವ್ 1722ರಲ್ಲಿ ಹೈದ್ರಾಬಾದ್ ನಿಜಾಮನ ಸೇನಾನಿ ಆಸಿಫ್ ಝಾನನ್ನು ಹಿಮ್ಮೆಟ್ಟಿಸಿದ. ಅದೇ ಹೊತ್ತಿಗೆ ನಿಜಾಮ ಮರಾಠರ ಸಹಾಯ ಪಡೆದು ಆತನಕ ತಾನು ಮೊಘಲ್ ಸಾಮ್ರಾಜ್ಯಕ್ಕೆ ಸಾಮಂತನಾಗಿದ್ದನ್ನು ಧಿಕ್ಕರಿಸಿ ಸ್ವತಂತ್ರ ಘೋಷಿಸಿಕೊಂಡು ಹೈದರಾಬಾದನ್ನು ತನ್ನ ರಾಜಧಾನಿಯೆಂದು ಘೋಷಿಸಿದ. ಬಂಡೆದ್ದ ನಿಜಾಮನನ್ನು



ಬಂಧಿಸಲೆಂದು ದೆಹಲಿ ದೊರೆ ಮಹಮ್ಮದ್ ಷಾ ತನ್ನ ದಳಪತಿ ಮುಬರಿಜ್ ಖಾನ್ ನೇತೃತ್ವದ ಸೇನೆಯನ್ನು ಛೂಬಿಟ್ಟ. ಆದರೆ ನಿಜಾಮ ಮರಾಠರ ಜೊತೆ ಒಪ್ಪಂದ ಮಾಡಿಕೊಂಡಿದ್ದನಲ್ಲ; ಮೊಘಲ್ ಸೇನೆಯ ವಿರುದ್ಧ ನಿಜಾಮನ ರಕ್ಷಣೆಗೆ ನಿಂತ ಬಾಜಿರಾವ್ 1724ರ ಷಾಖೇರ್ ಖೇಡಾ ಯುದ್ಧದಲ್ಲಿ ಮುಬರಿಜ್ ಖಾನ್‌ನನ್ನು ಹೀನಾಯವಾಗಿ ಸೋಲಿಸಿದ. ಅದು ಬಲಾಢ್ಯ ಮೊಘಲ್ ಸೇನೆಗೆ ಮರಾಠರಿಂದಾದ ಮೊದಲ ಪೆಟ್ಟು.

ಮೊಘಲ್ ಸಾಮಂತಿಕೆಯಿಂದ ಪಾರಾದ ನಿಜಾಮ ನಿಯತ್ತು ಉಳಿಸಿಕೊಳ್ಳದೇ ಮತ್ತೆ ಮರಾಠರನ್ನು ವಂಚಿಸಿದ್ದು, ಸಾಹು ವಿರುದ್ಧ ಕೊಲ್ಲಾಪುರ 2ನೇ ಸಾಂಭಾಜಿ, ಚಂದ್ರಸೇನ್ ಜಾದವ್, ನಿಂಬಾಳ್ಕರ್ ಮುಂತಾದ ಪುಡಿ ರಾಜರನ್ನು ಛೂಬಿಟ್ಟದ್ದು, ಅದು ಪಾಲ್‌ಖೇಡ್ ಕಾಳಗದಲ್ಲಿ ಪರ್ಯಾವಸಾನಗೊಂಡು ನಿಜಾಮರು ಶರಣಾಗಿದ್ದು, ಮಾಲ್ವಾ ಕಾಳಗದಲ್ಲಿ ಮೊಘಲ್ ಸೇನಾನಿ ಮುಹಮ್ಮದ್ ಖಾನ್ ಬಂಗಾಶ್‌ನನ್ನು ಬಾಜಿರಾವ್ ಸೋಲಿಸಿದ್ದು ಆತನ ಪರಾಕ್ರಮದ ಆರಂಭಿಕ ಕುರುಹುಗಳಷ್ಟೆ. ಇದನ್ನು ಸೂಕ್ಷ್ಮವಾಗೇ ಗ್ರಹಿಸಿದವನು ಬುಂದೇಲ್ ಖಂಡದ ಹಿಂದೂ ದೊರೆ ಛತ್ರಸಾಲ.

ಪರ್ಶಿಯನ್ ಪತ್ನಿ

ಅದು 1727ರ ಕಾಲ. ಮೊಘಲ್ ಸೇನಾನಿ ಮುಹಮ್ಮದ್ ಖಾನ್ ಬಂಗಾಶ್ ಆ ಹೊತ್ತಿಗೆ ಬುಂದೇಲ್ ಖಂಡದ ಮೇಲೆ ದಂಡೆತ್ತಿ ಬಂದಿದ್ದ. ಬಲಾಢ್ಯ ಮೊಘಲರ ವಿರುದ್ಧ ಛತ್ರಸಾಲ ಸಾಹು ಮಹಾರಾಜರ ನೆರವನ್ನ ಬೇಡಿದನಾದರೂ ಸಕಾಲದಲ್ಲಿ ಸಹಾಯ ಬಾರದ ಕಾರಣ ಬಂಗಾಶ್‌ನ ದಾಳಿಗೆ ಗಾಯಗೊಂಡು ಛತ್ರಸಾಲ ಮೊಘಲ್ ಸೈನ್ಯಕ್ಕೆ ಸೆರೆಯಾದ. ಹಾಗೆಂದು ತನ್ನ ಪ್ರಯತ್ನ ನಿಲ್ಲಿಸಲಿಲ್ಲ. 1729ರಲ್ಲಿ ಸೆರೆಯಿಂದಲೇ ಬಾಜಿರಾಯನಿಗೊಂದು ಪತ್ರ ರವಾನಿಸಿದ. ಆಗ ಗರ್ಹಾ ಮಾಲ್ವಾರ ಸಮೀಪ ತನ್ನ ಸೇನೆಯೊಂದಿಗೆ ಮೊಕ್ಕಾಂ ಹೂಡಿದ್ದ ಬಾಜಿರಾಯ ಬಂಗಾಶ್‌ನ ಸೇನೆಯನ್ನು ಸುತ್ತುವರಿದ. ಬಂಗಾಶ್‌ನ ಮಗ ದಿಕ್ಕೆಟ್ಟು ಪಲಾಯನಗೈದರೆ ಶರಣಾದ ಬಂಗಾಶ್ ಪ್ರಾಣಭಿಕ್ಷೆ ಬೇಡಿ ಬಾಜಿರಾಯನ ಕಾಲಿಗೆ ಬಿದ್ದ.

ಅಲ್ಲಿಗೆ ಬುಂದೇಲ್ ಖಂಡದ ದೊರೆ ಛತ್ರಸಾಲನ ಕಂಟಕ ನಿವಾರಣೆಯಾಗಿತ್ತು. ತನ್ನನ್ನು ಬಂಧಮುಕ್ತನನ್ನಾಗಿಸಿ ಮರಳಿ ಸಿಂಹಾಸನಕ್ಕೆ ತಂದ ಬಾಜಿರಾಯನ ಋಣ ತೀರಿಸಬೇಕಲ್ಲ; ಅದಕ್ಕೆ ಛತ್ರಸಾಲ ತನ್ನ ಮಗಳು ಮಸ್ತಾನಿಯನ್ನೇ ಬಾಜಿರಾಯನಿಗಿತ್ತು ಮದುವೆ ಮಾಡಿದ. ಕೆಲ ಇತಿಹಾಸಕಾರರು ಮಸ್ತಾನಿಯನ್ನು ಓರ್ವ ನರ್ತಕಿಯೆಂದೂ, ಇನ್ನೂ ಕೆಲವರು ಆಕೆ ಹೈದ್ರಾಬಾದಿನ ನಿಜಾಮನ ಮಗಳೆಂದೂ ತರಹೇವಾರಿ ಕತೆ ಹೇಳುತ್ತಾರೆ. ಆದರೆ ವಾಸ್ತವಕ್ಕೆ ಹೆಚ್ಚು ಹತ್ತಿರವಿರುವುದು ಆಕೆ ಛತ್ರಸಾಲನ ಪರ್ಶಿಯನ್ ಮುಸ್ಲಿಂ ಪತ್ನಿಯಾದ ರುಹಾನಿಬಾಯಿ ಮಗಳೆಂಬುದು.

ಅಪ್ರತಿಮ ಸುಂದರಿಯಷ್ಟೇ ಅಲ್ಲ, ಕತ್ತಿ ವರಸೆ, ಕುದುರೆ ಸವಾರಿ, ಭರ್ಜಿ ಕಾಳಗ, ಬಿಲ್ಲುವಿದ್ಯೆ ಪರಿಣಿತಳಾದ ಮಸ್ತಾನಿಯನ್ನು ಬಾಜಿರಾಯನಿಗಿತ್ತು ಮದುವೆ ಮಾಡಿದ್ದಷ್ಟೇ ಅಲ್ಲ, ತನ್ನ ರಾಜ್ಯದ ಮೂರನೇ ಒಂದು ಭಾಗವನ್ನು, ಜೊತೆಗೆ ಸಾಗರ್, ಬಂದಾ, ಝಾನ್ಸಿಯಲ್ಲದೆ ಹತ್ತಾರು ಗ್ರಾಮಗಳನ್ನು ಆ ಕಾಲದ ಪ್ರತಿಷ್ಠಿತ 'ಪನ್ನಾ' ವಜ್ರದ ಗಣಿಯನ್ನೂ ಮಸ್ತಾನಿ ಪಾಲಿಗೆ ವರದಕ್ಷಿಣೆಯಾಗಿ ತಂದೆ ಛತ್ರಸಾಲ ನೀಡಿದ್ದ. ಹೆಚ್ಚುವರಿಯಾಗಿ 30 ಲಕ್ಷ ಚಿನ್ನದ ನಾಣ್ಯಗಳನ್ನೂ ಕೊಟ್ಟ. ಆ ಕಾಲಕ್ಕಿದು ಅತ್ಯಂತ ದೊಡ್ಡ ಮೊತ್ತದ ವರದಕ್ಷಿಣೆಯಾಗಿತ್ತು.

ದುರಂತ ಅಂತ್ಯ

ಆದರೆ ಪುಣೆಯ ಪೇಶ್ವೆ ಮನೆತನದ ಸಂಪ್ರದಾಯವೇ ಬೇರೆಯಿತ್ತು. ಮಸ್ತಾನಿಯನ್ನು ಪುಣೆ ಶನಿವಾರ ವಾಡಾದ ತನ್ನ ಅರಮನೆಗೆ ಕರೆತಂದ ಬಾಜಿರಾಯನಿಗೆ ತನ್ನ ಪತ್ನಿ ಕಾಶಿಬಾಯಿ, ಅತ್ತೆ ರಾಧಾಬಾಯಿ, ತಮ್ಮ ಚಿಮಾಜಿ ಅಪ್ಪಾ, ಮಗ ಬಾಲಾಜಿ ಮಾತ್ರವೇ ಅಲ್ಲ ಬ್ರಾಹ್ಮಣ ಸಮುದಾಯವೇ ತಿರುಗಿಬೀಳಬಹುದೆಂಬ ಲೆಕ್ಕಾಚಾರವಿರಲಿಲ್ಲ. ಹೇಗೂ, ಯುದ್ಧ ನೈಪುಣ್ಯವಿತ್ತಲ್ಲ ತನ್ನ ಬಹುತೇಕ ದಾಳಿ, ಕಾಳಗಗಳಿಗೆಲ್ಲ ಮಸ್ತಾನಿಯನ್ನು ಕರೆದೊಯ್ದ. ಮಸ್ತಾನಿಯ ಸಾಂಗತ್ಯ ಆತನ ಪರಾಕ್ರಮವನ್ನು ಇನ್ನಷ್ಟು ಹೆಚ್ಚಿಸಿತು. ನಿಜಾಮನ ಚೇಲಾ ಹಮೀರ್ ಖಾನನ ವಿರುದ್ಧದ 1730ರ ಕಾಳಗ, ಮೊಘಲ್ ಸೇನಾನಿ ಸರ್‌ಬುಲಂದ್ ಖಾನನ ವಿರುದ್ಧದ ರಣರಂಗ, 1735ರ ಮಾಲ್ವಾ ಮತ್ತು ಗುಜರಾತ್ ಯುದ್ಧಗಳೆಲ್ಲದರಲ್ಲೂ ಬಾಜಿರಾಯನ ಹೆಗಲಿಗೆ ಹೆಗಲು ಕೊಟ್ಟವಳು ಮಸ್ತಾನಿ.

1737ರ ಮಾರ್ಚ್ 28ರಂದು ಚಾರಿತ್ರಿಕವಾಗಿ ಮೊಘಲ್ ದೊರೆ ಮಹಮ್ಮದ್ ಷಾನ ದೆಹಲಿಯ ಕೆಂಪು ಕೋಟೆಗೆ ಮರಾಠಾ ಸೇನೆಯನ್ನು ನುಗ್ಗಿಸಿದ ಬಾಜಿರಾಯನ ಗೆಲುವಿನಲ್ಲೂ ಮಸ್ತಾನಿಯ ಪಾತ್ರವಿತ್ತು!


ಇಡೀ ಮಧ್ಯಭಾರತವನ್ನೇ ಹಿಂದೂ ಸಾಮ್ರಾಜ್ಯವನ್ನಾಗಿ ಪರಿವರ್ತಿಸಿದ ಬಾಜಿರಾಯನ ಪರಾಕ್ರಮಕ್ಕೆ ಇಡೀ ಮೊಘಲ್ ಚಕ್ರಾಧಿಪತ್ಯವೇ ಥರಗುಟ್ಟಿ ಹೋಯಿತು. ಆದರೆ ಪುಣೆಯಲ್ಲಿ ಇದಕ್ಕೆ ವ್ಯತಿರಿಕ್ತ ಪರಿಸ್ಥಿತಿಯೇರ್ಪಟ್ಟಿತು. ಧರ್ಮಪತ್ನಿ ಕಾಶಿಬಾಯಿಯೇ ಬಾಜಿರಾಯನ ವಿರುದ್ಧ ತಿರುಗಿಬಿದ್ದಳು. ಮಸ್ತಾನಿಯನ್ನು ಮುಗಿಸಲು ಕಾಶಿಭಾಯಿಯ ತಾಯಿ ರಾಧಾಬಾಯಿ ಮತ್ತು ಬಾಜಿರಾಯನ ತಮ್ಮ ಚಿಮಾಜಿ ಇನ್ನಿಲ್ಲದಂತೆ ಕತ್ತಿ ಮಸೆಯುತ್ತಿದ್ದರು. ಕಾಶಿಬಾಯಿಯಿಂದ ಬಾಜಿರಾಯನಿಗೆ ಬಾಲಾಜಿರಾವ್ ಮತ್ತು ರಘುನಾಥರಾವ್ ಎಂಬ ಇಬ್ಬರು ಮಕ್ಕಳಾದರೆ ಮಸ್ತಾನಿಯ ಮಗನೇ ಸಂಶೇರ್ ಬಹಾದ್ದೂರ್.

ಮುಂದೆ 1740ರ ಏಪ್ರಿಲ್ 28ರಂದು ಇದ್ದಕ್ಕಿದ್ದಂತೆ ಬಾಜಿರಾಯನ ಸಾವಿನ ಸುದ್ದಿ ಬಂತು. ಬೆನ್ನಲ್ಲೇ ಮಸ್ತಾನಿಯೂ ಕೊನೆಯುಸಿರೆಳೆದ ಪುಕಾರೆದ್ದಿತು. ಮಸ್ತಾನಿಯನ್ನು ಬಾಜಿರಾಯನ ಪತ್ನಿ ಅತ್ತೆ ತಮ್ಮ ಸೇರಿಕೊಂಡು ಕೊಂದರಾ? ಅದು ಗೊತ್ತಾಗಿದ್ದೇ ಬಾಜಿರಾಯ ಆತ್ಮಹತ್ಯೆ ಮಾಡಿಕೊಂಡನಾ? ಇವತ್ತಿಗೂ ಪ್ರಶ್ನೆಯಾಗಿಯೇ ಉಳಿದಿದೆ. ಆದರೆ ಹಿಂದೂ ಸಾಮ್ರಾಜ್ಯ ಸ್ಥಾಪನೆಗಾಗಿ ತನ್ನದೇ ಧರ್ಮದ ಮುಸ್ಲಿಮರ ವಿರುದ್ಧ ಹೋರಾಡಿದ ಮಸ್ತಾನಿಯ ಜಾತಿಮತ, ಆಕೆಯ ಮಗ ಸಂಶೇರ್ ಬಹಾದ್ದೂರ್ ಪಾಣಿಪತ್ ಕದನದಲ್ಲಿ ಮಹಮ್ಮದ್ ಷಾ ಅಬ್ದಾಲಿಯ ವಿರುದ್ಧ ಹೋರಾಡಿ ಪ್ರಾಣತೆತ್ತ ತ್ಯಾಗ ಇತ್ಯಾದಿಗಳೆಲ್ಲವನ್ನೂ ಬನ್ಸಾಲಿ ತನ್ನ ಚಿತ್ರದಲ್ಲಿ ಹೇಳದೇಹೋದರೆ ಅದಕ್ಕಿಂತ ಅನ್ಯಾಯವುಂಟೇ?

■ ರಾ. ಸೋಮನಾಥ್



ದೆಹಲಿ ದಾಳಿ-ಮೂರೂ ಬಿಟ್ಟೆ ಸಿಬಿಐ!



ಇದು ರಾಜಕೀಯದಲ್ಲಿ ತೀರಾ ಅಪರೂಪದ ಪ್ರಸಂಗ. ಒಂದು ರಾಜ್ಯದ ಮುಖ್ಯಮಂತ್ರಿಯೊಬ್ಬರು ಆಡಳಿತಾರೂಢ ಬಲಿಷ್ಠ ಪ್ರಧಾನ ಮಂತ್ರಿಯವರಿಗೆ "ಹೇಡಿ", "ಹುಚ್ಚ" ಎಂದೆಲ್ಲಾ ನೇರವಾಗಿ ಮೂದಲಿಸುವ ಸಂದರ್ಭ ಸಾಮಾನ್ಯವಾಗಿ ಎದುರಾಗುವುದಿಲ್ಲ. ರಾಜಕೀಯ ಕೆಸರೆರಚಾಟ ಮಾಮೂಲಿ ಎಂದುಕೊಂಡರೂ, ಅದು ಇಷ್ಟು ವೈಯಕ್ತಿಕ ದೂಷಣೆಯ ಮಟ್ಟಕ್ಕೆ ಇಳಿಯಬಾರದಿತ್ತು. ಅಂಥಾ ಒಂದು ಸಂದರ್ಭ ಇದೀಗ ದೆಹಲಿಯಲ್ಲಿ ಎದುರಾಗಿದೆ. ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಪ್ರಧಾನಿ ಮೋದಿಯವರನ್ನು ಉದ್ದೇಶಿಸಿ ಹೀಗೆ ಟೀಕಾಪ್ರಹಾರ ಮಾಡಿದ್ದಾರೆ.

ಸದಾ ನಾಗರಿಕ ಭಾಷೆಯಲ್ಲಿ ಮಾತಾಡುವ ಕೇಜ್ರಿವಾಲ್ ಅವರಿಗೆ ಪ್ರಧಾನ ಮಂತ್ರಿಯ ಬಗ್ಗೆ "ಹುಚ್ಚ", "ಹೇಡಿ" ಎಂದೆಲ್ಲಾ ಮಾತಾಡಬೇಕಾದ ಪ್ರಸಂಗ ಯಾಕೆ ಬಂತೆಂಬುದೂ ಕುತೂಹಲದ ಸಂಗತಿಯೇ ಸರಿ.

ಡಿಸೆಂಬರ್ 15ರ ಬೆಳಗ್ಗೆಯೇ ದೆಹಲಿ ಮುಖ್ಯಮಂತ್ರಿ ಕಚೇರಿಯನ್ನು ಅಮರಿಕೊಂಡ ಸಿಬಿಐ ತಂಡ ಫೈಲುಗಳ ಶೋಧನೆಯಲ್ಲಿ ತೊಡಗಿದರು. ಕಚೇರಿಗೆ ಯಾರೂ ಪ್ರವೇಶಿಸದಂತೆ ಹೊರಗಿನಿಂದ ಬೀಗ ಜಡಿಯಲಾಗಿತ್ತು. ಹೋಗಲಿ, ಚುನಾಯಿತ ಸರ್ಕಾರದ ಮುಖ್ಯಮಂತ್ರಿಯನ್ನು ಕೂಡ ತನ್ನ ಕಚೇರಿಗೆ ಪ್ರವೇಶ ಮಾಡದಂತೆ ನಿರ್ಬಂಧಿಸ ಲಾಗಿತ್ತು. ಹೀಗೆ ಮುಖ್ಯಮಂತ್ರಿ ಕಚೇರಿಯ ಮೇಲೆ ದಾಳಿ ಮಾಡಿದ್ದು ಸಿಬಿಐನ ಇತಿಹಾಸದಲ್ಲೇ ಪ್ರಪ್ರಥಮ ಘಟನೆ.

ಈ ದಾಳಿಗೆ ನೀಡಲಾದ ಕಾರಣಗಳಾದರೂ ಏನು? ಆಶಿಶ್ ಜೋಷಿ ಎಂಬ ಮಾಜಿ ಅಧಿಕಾರಿಯೊಬ್ಬರು 13ನೇ ಜುಲೈ 2015ರಲ್ಲಿ ಸಿಬಿಐಗೆ ಒಂದು ಕಂಪ್ಲೈಂಟ್ ಕೊಟ್ಟಿದ್ದು, ಅದರಲ್ಲಿ ಸಿಎಂ ಕೇಜ್ರಿವಾಲ್‌ರ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆಂಬ ಆರೋಪ ಮಾಡಿದ್ದರು. ಆ ಭ್ರಷ್ಟಾಚಾರ ನಡೆದದ್ದು ಯಾವಾಗ ಅಂತೀರಿ? 2007ರಿಂದ 2014ರವರೆಗಿನ ಅವಧಿಯಲ್ಲಿ!

2007ರಲ್ಲಿ ಯಾರೋ ನಡೆಸಿದ 'ಅಕ್ರಮಗಳಿಗೂ 2015ರಲ್ಲಿ ಅಧಿಕಾರಕ್ಕೆ ಬಂದಿರುವ ಕೇಜ್ರಿವಾಲ್ ಅವರಿಗೂ ಎತ್ತಣಿಂದೆತ್ತಣ ಸಂಬಂಧ? ಅದೆಲ್ಲಾ ನಮ್ಮ ಕಾಮನ್‌ಸೆನ್ಸ್‌ಗೆ ಬಿಟ್ಟ ವಿಚಾರ. ಇದೆಲ್ಲ ವಿಚಿತ್ರವಾಗಿ ಕಂಡುಬಂದರೂ ಅದೇ ಸತ್ಯ.

ದೆಹಲಿಯ ಮುಖ್ಯಮಂತ್ರಿಗೆ ತಮ್ಮ ಕಚೇರಿ ಪ್ರವೇಶ ನಿರ್ಬಂಧಿಸಿದ ಸಿಬಿಐ ಕಟ್ಟಾಳುಗಳು ಅಲ್ಲಿ ಫೈಲುಗಳನ್ನು ತಡಕಾಡುತ್ತಿದ್ದಂತೆಯೇ, ಇತ್ತ ಕೇಜ್ರಿವಾಲ್ ಮಾಧ್ಯಮಗಳ ಮುಂದೆ ಆಡಿದ ಮಾತುಗಳನ್ನು ಕೇಳೋಣ. "ಈ ದಾಳಿ 2007-14ರ ನಡುವಿನ ಅವಧಿ ಪ್ರಕರಣಗಳಿಗೆ ಸಂಬಂಧಿಸಿದ್ದು, ಸಿಬಿಐನವರು ಹೇಳುತ್ತಿರುವುದೇನೆಂದರೆ ಈ ಹಿಂದೆ ರಾಜೇಂದ್ರಜಿಯವರು ಶಿಕ್ಷಣ ಇಲಾಖೆಯ ಕಾರ್ಯದರ್ಶಿಯಾಗಿದ್ದರು, ವ್ಯಾಟ್ ಕಮಿಷನರ್ ಆಗಿದ್ದರು; ಆದಾಯ ತೆರಿಗೆ ಇಲಾಖೆಯ ಕಾರ್ಯದರ್ಶಿಯಾಗಿದ್ದರು. ಆ ಅವಧಿಯಲ್ಲಿ ಕೆಲವು ಅವ್ಯವಹಾರಗಳು ನಡೆದಿವೆ ಎಂಬುದು ಸಿಬಿಐನ ವಿವರಣೆ. ಆ ಹಳೇ ಪ್ರಕರಣಗಳ ನೆಪದಲ್ಲಿ ಈಗ ದೆಹಲಿಯ ಮುಖ್ಯಮಂತ್ರಿ ಕಚೇರಿಯ ಮೇಲೆ ದಾಳಿ ನಡೆಸಿದ್ದಾರೆ. 2007ರಲ್ಲಿ ಶಿಕ್ಷಣ ಇಲಾಖೆಯಲ್ಲಿ ನಡೆದ ಅವ್ಯವಹಾರಗಳಿಗೆ ಸಂಬಂಧಿಸಿದ ಫೈಲುಗಳು ಎಲ್ಲಿವೆ? ಅವು ಮುಖ್ಯಮಂತ್ರಿಯ ಕಪಾಟಿನಲ್ಲಿಲ್ಲ; ಅವು ಶಿಕ್ಷಣ ಇಲಾಖೆಯ ರಿಕಾರ್ಡ್ ರೂಂನಲ್ಲಿರುತ್ತವೆ. ವ್ಯಾಟ್‌ಗೆ ಸಂಬಂಧಿಸಿದ ಎಲ್ಲಾ ಫೈಲುಗಳು ವ್ಯಾಟ್ ಕಚೇರಿಯ ಕಡತದ ರೂಂನಲ್ಲಿರುತ್ತವೆ. ಶಿಕ್ಷಣ ಇಲಾಖೆಯ ಕಚೇರಿಯ ಮೇಲೆ ದಾಳಿ ನಡೆದಿಲ್ಲ; ವ್ಯಾಟ್ ಕಚೇರಿಯ ಮೇಲೆ ದಾಳಿ ನಡೆದಿಲ್ಲ. ಹೋಗಲಿ, ಇಂಥಾ ಫೈಲುಗಳು ಬೇಕೆಂದು ದೆಹಲಿ ಸರ್ಕಾರವನ್ನು ಇದುವರೆಗೂ ಸಿಬಿಐ ಕೇಳಿಯೇ ಇಲ್ಲ.

'ಆದರೆ ಇವರು ದಾಳಿ ಮಾಡಿದ್ದು ಯಾರ ಮೇಲೆ? ದೆಹಲಿ ಮುಖ್ಯಮಂತ್ರಿ ಕಚೇರಿಯ ಮೇಲೆ. ಮುಖ್ಯಮಂತ್ರಿ ಕಚೇರಿಯಲ್ಲಿ ಹೆಚ್ಚೆಂದರೆ ಎರಡು ವಾರಗಳ ಹಿಂದಿನ ಫೈಲುಗಳು ಮುಖ್ಯಮಂತ್ರಿಯ ಸಹಿಗಾಗಿ ಮಾತ್ರ ಇರುತ್ತವೆ. ಅದಕ್ಕಿಂತ ಹಿಂದಿನ ಯಾವ ಫೈಲೂ ಉಳಿಯೋದಿಲ್ಲ. ಇದು ಸಿಬಿಐನವರಿಗೇ ಚೆನ್ನಾಗಿ ಗೊತ್ತಿರುವ ಸಂಗತಿ.

ಮತ್ತೊಂದು ಪ್ರಮುಖ ಅಂಶ ನಾವು ಗಮನಿಸಬೇಕು. ಏನಾದರೂ ಅಕ್ರಮಗಳು ನಡೆದಿದ್ದರೆ ಅದಕ್ಕೆ ಸಂಬಂಧಿಸಿದ ಹಲವಾರು ಅಧಿಕಾರಿಗಳು ಸಹಿ ಮಾಡಿರುತ್ತಾರೆ. ಮುಖ್ಯವಾಗಿ ಅಂದಿನ ಶೀಲಾ ದೀಕ್ಷಿತ್ ಕ್ಯಾಬಿನೆಟ್‌ನ ಮಂತ್ರಿಗಳು ಸಹಿ ಮಾಡಿರುತ್ತಾರೆ. ಅವರ್ಯಾರನ್ನೂ ಸಿಬಿಐನವರು ಮಾತಾಡಿಸುವ ಗೋಜಿಗೂ ಹೋಗಿಲ್ಲ. ಅವರು ಆಯ್ಕೆ ಮಾಡಿಕೊಂಡಿರುವುದು ರಾಜೇಂದ್ರ ಕುಮಾರ್ ಒಬ್ಬರನ್ನು ಮಾತ್ರ. ಯಾಕೆಂದರೆ ಅವರ ಗುರಿ ಇದ್ದದ್ದು ಹಳೆಯ ಅಕ್ರಮಗಳ ತನಿಖೆಯಲ್ಲ. ಅರವಿಂದ್ ಕೇಜ್ರಿವಾಲ್ ಕಚೇರಿಯನ್ನು ಶೋಧಿಸುವುದಾಗಿತ್ತು. ಸಿಬಿಐ ತಂಡ ನನ್ನ ಕಚೇರಿಯಲ್ಲಿದ್ದ ಪ್ರತಿಯೊಂದು ಕಡತವನ್ನು ತಡಕಾಡಿದ್ದಾರೆ. ಅವರು ಯಾವ ಫೈಲಿಗಾಗಿ ಹುಡುಕಾಡುತ್ತಿದ್ದರು? 2007ರ ಫೈಲು ಮುಖ್ಯಮಂತ್ರಿ ಕಚೇರಿಯಲ್ಲಿರುತ್ತದೆಯೆ? ಅವರ ಉದ್ದೇಶ ಏನು ಎಂಬುದನ್ನು ಬಹಿರಂಗಪಡಿಸಲಿ.

ಅವರು ಹುಡುಕುತ್ತಿದ್ದ ಫೈಲು ಬೇರೆಯದೇ ಆಗಿತ್ತು. ಅದು ಡಿಡಿಸಿಎ ಅಕ್ರಮಕ್ಕೆ ಸಂಬಂಧಿಸಿದ ಫೈಲು. ಈ ಅಕ್ರಮದಲ್ಲಿ ಕೇಂದ್ರ ಮಂತ್ರಿ ಅರುಣ್ ಜೈಟ್ಲಿ ನೇರವಾಗಿ ಶಾಮೀಲಾಗಿದ್ದಾರೆ. ಕಳೆದ ಕೆಲವಾರು ವರ್ಷಗಳಿಂದ ಅರುಣ್ ಜೈಟ್ಲಿ ಡಿಡಿಸಿಎ ಅಧ್ಯಕ್ಷರಾಗಿದ್ದರು. ಅಲ್ಲಿ ನಾನಾ ಭ್ರಷ್ಟಾಚಾರ ನಡೆದಿದೆ. ಈ ಬಗ್ಗೆ ಅಧ್ಯಯನ ಸಮಿತಿ ರಚನೆಯಾಗಿತ್ತು, ಆ ಸಮಿತಿ ಕೊಟ್ಟ ವರದಿ ನಮ್ಮ ಮುಂದಿದೆ. ಅದರ ಆಧಾರದಲ್ಲಿ ಒಂದು ತನಿಖಾ ದಳ ನೇಮಕ ಮಾಡಬೇಕೆಂದು ನಮ್ಮ ಸರ್ಕಾರ ಆಲೋಚಿಸುತ್ತಿದೆ. ಸಿಬಿಐನವರು ಹುಡುಕುತ್ತಿದ್ದದ್ದು ಇದೇ ಫೈಲು! ಅವರಿಗೆ ಬೇಕಾಗಿದ್ದುದು ಅರುಣ್ ಜೈಟ್ಲಿಯ ಫೈಲೇ ಹೊರತು ರಾಜೇಂದ್ರ ಕುಮಾರ್ ಫೈಲ್ ಅಲ್ಲ. ಅವರಿಗೆ ನಿಜಕ್ಕೂ 2007ರ ರಾಜೇಂದ್ರ ಕುಮಾರ್ ಫೈಲು ಬೇಕಿದ್ದರೆ ಅದು ಎಲ್ಲಿ ಸಿಗುತ್ತೋ ಅಲ್ಲಿಗೆ ಹೋಗುತ್ತಿದ್ದರು. ಹೋಗಲಿ, ಆ ಫೈಲಿಗಾಗಿ 2015ರ ಡಿಸೆಂಬರ್‌ವರೆಗೆ ಯಾಕೆ ಕಾಯ್ತಾ ಇದ್ದರು? ಇದು ಇದರ ಒಳಮರ್ಮ" ಎಂಬುದು ಕೇಜ್ರಿವಾಲ್‌ರ ವಿವರಣೆ.

ತಮ್ಮ ಮಾತನ್ನು ಹಾಗೇ ಮುಂದುವರೆಸಿದ ಕೇಜ್ರಿವಾಲ್ ಮೋದಿಗೆ ನೇರಾನೇರ ಸವಾಲ್ ಹಾಕಿದರು. "ನಾನು ನೇರವಾಗಿ ಮತ್ತೊಂದು ಮಾತು ಹೇಳುತ್ತೇನೆ ಮೋದಿಯವರೆ, ನೀವು ಸಿಬಿಐ ಭಯ ತೋರಿಸಿ ಅವರಿವರನ್ನು ಹೆದರಿಸಬಹುದು. ಆದರೆ ನಿಮ್ಮ ಸಿಬಿಐ ಗಿಬಿಐಗಳಿಗೆ ಈ ಕೇಜ್ರಿವಾಲ್ ಹೆದರುವವನಲ್ಲ; ನಾನು ದೇಶಕ್ಕೋಸ್ಕರ ಪ್ರಾಣ ಬೇಕಾದ್ರೂ ಕೊಡ್ತೀನಿ, ನಿಮ್ಮ ಬೆದರಿಕೆಗೆ ಬಗ್ಗೋದಿಲ್ಲ ನೆನಪಿಟ್ಟುಕೊಳ್ಳಿ" ಎಂದು ಸವಾಲು ಹಾಕಿದರು.


ಈ ಸುದ್ದಿ ಮಾಧ್ಯಮಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಮಿಂಚಿನಂತೆ ಸಂಚಾರವಾಗತೊಡಗಿದಂತೆ ಮೋದಿ ಸರ್ಕಾರದ ನಡವಳಿಕೆ ಬಗ್ಗೆ ಭಾರೀ ಖಂಡನೆ ವ್ಯಕ್ತವಾಯಿತು. ಪರಿಸ್ಥಿತಿ ಪ್ರತಿಕೂಲವಾಗುತ್ತಿರುವುದನ್ನು ಗ್ರಹಿಸಿದ ಕೇಂದ್ರದ ವಕ್ತಾರರು "ದೆಹಲಿ ಮುಖ್ಯಮಂತ್ರಿಯ ಕಚೇರಿಗೆ ಸಿಬಿಐನವರು ಹೋಗೇ ಇಲ್ಲ, ದಾಳಿಗೂ ಸರ್ಕಾರಕ್ಕೂ ಯಾವುದೇ ಸಂಬಂಧವಿಲ್ಲ" ಇತ್ಯಾದಿ ಹೇಳಿಕೆಗಳ ಕಂಠಪಾಠವನ್ನು ಮಾಧ್ಯಮಗಳಿಗೆ ಒಪ್ಪಿಸಿದ್ದೂ ಆಯ್ತು. "ಸಿಬಿಐ ಒಂದು ಸ್ವತಂತ್ರ ತನಿಖಾ ಸಂಸ್ಥೆ" ಎಂಬ ವೆಂಕಯ್ಯ ನಾಯ್ಡು ಅವರ ಹೇಳಿಕೆಯನ್ನು ಒಂದು ರಾಜಕೀಯ ಜೋಕ್ ಎಂದು ಪರಿಗಣಿಸಬಹುದೇನೋ?

ಕೇಜ್ರಿವಾಲ್‌ರ ಮಾತುಗಳಿಗೆ ಪುಷ್ಟಿ ಕೊಡುವಂತಹ ಸಾಕಷ್ಟು ಪುರಾವೆಗಳು ಸಿಗುತ್ತವೆ. (ವಿವರಗಳಿಗೆ ಬಾಕ್ಸ್ ನೋಡಿ)

ಸಿಬಿಐ ಛೂಬಿಡುವ ಐಡಿಯಾ ಮೋದಿಗೆ ಯಾವ ಬುದ್ಧಿವಂತರು ಕೊಟ್ಟರೋ ಗೊತ್ತಿಲ್ಲ. ಇದರ ಹಿಂದೆ ಮೋದಿ ಸರ್ಕಾರಕ್ಕೆ ಏನೇನು ಲೆಕ್ಕಾಚಾರವಿತ್ತೋ ಅದು ಅವರಿಗೇ ಗೊತ್ತು. ಆದರೆ ಆ ಲೆಕ್ಕಾಚಾರಗಳು ರಾಜಕೀಯವಾಗಿ ತಿರುಗುಬಾಣವಾಗಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಮೊದಲನೆಯದಾಗಿ, ವಿರೋಧ ಪಕ್ಷಗಳ ವಿರುದ್ಧ ರಾಜಕೀಯ ಪ್ರತೀಕಾರದ ಕ್ರಮಗಳನ್ನು ಮೋದಿ ಸರ್ಕಾರ ಕೈಗೊಂಡಿದೆ ಎಂಬ ವ್ಯಾಪಕ ಟೀಕೆಗಳಿವೆ. ಕಳೆದ ವಾರ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ವಿರುದ್ಧ ನ್ಯಾಷನಲ್ ಹೆರಾಲ್ಡ್ ಕೇಸು ಹಾಕಿದ್ದು, ವಾರವಿಡೀ ಸಂಸತ್ ಕಲಾಪ ಹಾಳಾಗಿದ್ದು ಎಲ್ಲವೂ ನಡೆದಿದೆ. ಇದರ ಬೆನ್ನಹಿಂದೆಯೇ ಈ ಸಿಬಿಐ ರೈಡ್ ಎಂಬುದು ವಿರೋಧ ಪಕ್ಷಗಳನ್ನು ಒಟ್ಟುಗೂಡಿಸುವ ಕ್ಯಾಟಲಿಸ್ಟ್ ಆಗಿ ಕೆಲಸ ಮಾಡುತ್ತಿದೆ. ಇಂದಿನ ಕೇಂದ್ರದ ರಾಜಕೀಯ ಬಲಾಬಲಗಳಲ್ಲಿ ವಿರೋಧ ಪಕ್ಷಗಳ ಸ್ಥಿತಿ ಚಿಂತಾಜನಕವಾಗಿರುವ ಸಂಗತಿ ನಮಗೆಲ್ಲಾ ತಿಳಿದದ್ದೇ. ಒಂದು ಕಾಲದಲ್ಲಿ ಪ್ರಬಲವಾಗಿದ್ದ ಎಡ ಪಕ್ಷಗಳು, ಬಿಎಸ್‌ಪಿಯಂಥಾ ಪಕ್ಷಗಳು ತೀರಾ ಅಶಕ್ತವಾಗಿ ನೆಲ ಕಚ್ಚಿವೆ. ಹೀಗಿರುವಾಗ ಎಡಪಕ್ಷಗಳು, ಸಮಾಜವಾದಿ ಪಕ್ಷ, ಮಮತಾರ ಟಿಎಂಸಿ ಇತ್ಯಾದಿಗಳನ್ನು ಒಗ್ಗೂಡಿ ಈಗಾಗಲೇ ಕೇಂದ್ರದ ವಿರುದ್ಧ ದನಿಯೆತ್ತಿದ್ದಾರೆ.

ಮತ್ತೊಂದು ಕಡೆ, ಅರವಿಂದ ಕೇಜ್ರಿವಾಲ್‌ರ ಕಚೇರಿ ಮೇಲೆ ಸಿಬಿಐ ದಾಳಿ ನಡೆಸುವ ಮೂಲಕ ಕೇಜ್ರಿವಾಲರ ಇಮೇಜಿಗೆ ಭಂಗ ತರುವ ಲೆಕ್ಕಾಚಾರವೂ ಮೋದಿಯ 'ಪಂಜರದ ಗಿಳಿ'ಗಳಿಗೆ ಇದ್ದಿರಬಹುದು. ಆದರೆ ವಾಸ್ತವದಲ್ಲಿ ಆಗಿರುವುದು, ಆಗಲಿರುವುದಾದರೂ ಏನು? ಅದಕ್ಕೆ ತದ್ವಿರುದ್ಧ. ಈಗ ಈ ದಾಳಿಯ ಪರಿಣಾಮವಾಗಿ ಅರವಿಂದ ಕೇಜ್ರಿವಾಲ್ ಒಬ್ಬ ಹೀರೋ ಆಗಿ ಮತ್ತೆ ಕಂಗೊಳಿಸುತ್ತಿದ್ದಾರೆ. ಕಳೆದ ತಿಂಗಳು ಕೇಜ್ರಿವಾಲ್ ಅಳವಡಿಸಿದ ಲೋಕಪಾಲ್ ಮಸೂದೆಯನ್ನು ಜೋಕ್‌ಪಾಲ್ ಎಂದು ಸ್ವರಾಜ್ ಅಭಿಯಾನದ ಮುಖಂಡರಾದ ಪ್ರಶಾಂತ ಭೂಷಣ್, ಯೋಗೇಂದ್ರ ಯಾದವ್, ಜಸ್ಟೀಸ್ ಸಂತೋಷ್ ಹೆಗ್ಡೆ ಮುಂತಾದವರು ಮೂದಲಿಸಿದ್ದರು ಎಂಬುದನ್ನು ನೆನಪಿಸಿಕೊಳ್ಳಬಹುದು. ಹೀಗೆ ಒಂದು ಕಾಲದಲ್ಲಿ ತಮ್ಮದೇ ಸಂಗಾತಿಗಳಾಗಿದ್ದವರಿಂದಲೇ ಮೂದಲಿಕೆಗೆ ಒಳಗಾಗಿದ್ದ ಕೇಜ್ರಿವಾಲ್‌ರ ಇಮೇಜಿಗೆ ಸಿಬಿಐ ದಾಳಿ ಎಂಬುದು ವರದಾನವಾಗಿ ಬಂದೊದಗಿದೆ ಎಂಬುದು ರಾಜಕೀಯ ವಿಶ್ಲೇಷಕರ ಅಂಬೋಣ.



ಅದೇನೇ ಇರಲಿ, ಮೋದಿ ಸರ್ಕಾರ ಸಿಬಿ[...] ಬಳಸಿಕೊಂಡು ಮಾಡಬೇಕಿದ್ದ ಕೆಲಸಗಳು ದಂಡಿಯ[...] ಮಧ್ಯಪ್ರದೇಶದಲ್ಲಿ ವ್ಯಾಪಂ ಹಗರಣದಲ್ಲಿ ಸಾಲ[...] ಕೊಲೆಗಳು ನಡೆಯುತ್ತಲೇ ಇವೆ. ಮೆಡಿಕಲ್ ಕಾ[...] ಇಬ್ಬರು ಡೀನ್‌ಗಳು, ರಾಜ್ಯಪಾಲರ ಮಗ, ಅ[...] ಸರ್ಕಾರಿ ಅಧಿಕಾರಿಗಳು, ವೈದ್ಯಕೀಯ ವಿದ್ಯಾರ್ಥಿಗಳ[...] ಕೊಲೆಗೀಡಾದವರ ಸಂಖ್ಯೆ ಹೆಚ್ಚುತ್ತಲೇ ಇದೆ. ಈ [...] ತನಿಖೆ ಮಾಡಲು ಹೋದ ಪತ್ರಕರ್ತರು ಕೂಡ ನಿಗೂ[...] ಕೊಲೆಯಾಗಿ ಹೋಗಿದ್ದಾರೆ. ಮೋದಿಯ ಸಿಬಿ[...] ಕಡೆ ಯಾವ ಗಂಭೀರ ಪ್ರಯತ್ನವನ್ನೂ ಹಾಕಿಲ್ಲ. ಯ[...] ಅಲ್ಲಿರುವುದು ತಮ್ಮದೇ ಬಿಜೆಪಿಯ ಆಡಳಿತ!

ಆಮ್ ಆದ್ಮಿ ಪಕ್ಷ ಅಧಿಕಾರಕ್ಕೆ ಬಂದಾಗಿನಿಂದ [...] ಸರ್ಕಾರ ಕೊಟ್ಟಿರುವ ಕೊಡುತ್ತಿರುವ ಕಿರುಕುಳ ಅ[...] ನಜೀಬ್ ಜಂಗ್ ಎಂಬ ರಿಲಯನ್ಸ್ ಕಂಪನಿ ಏಜ[...] ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಹುದ್ದೆಯಲ್ಲಿ [...] ಕಾಂಗ್ರೆಸ್ ಪಕ್ಷ ಕೂಡ ಈ ವಿಷಯದಲ್ಲಿ [...] ಪಾಲುದಾರರು.

ಭ್ರಷ್ಟಾಚಾರ ವಿರೋಧಿ ಸಂಸ್ಥೆಗೆ ದಕ್ಷ ಅಧಿಕಾ[...] ನೇಮಕ ಮಾಡುವುದನ್ನು ತಡೆಗಟ್ಟಿದ ನಜೀಬ್ [...] ತಾನೇ ತನಗೆ ಬೇಕಾದ ಕೆಲವು ಅಧಿಕಾರಿಗಳನ್ನು ನೇ[...] ಪ್ರಯತ್ನಿಸಿದ್ದು ಇಡೀ ದೇಶದಲ್ಲಿ ಭಾರೀ [...] ಗ್ರಾಸವಾಗಿತ್ತು. ಕಾನೂನುಮಂತ್ರಿಯೊಬ್ಬ ಫೇಕ್ ಸರ್ಟಿ[...] ಕೊಟ್ಟಿದ್ದಾನೆಂಬ ಕೇಸಿನಲ್ಲಿ ಆತನನ್ನು ಅರೆಸ್ಟ್ [...] ಜೈಲಿಗೆ ಕಳಿಸಲಾಗಿತ್ತು. ಆದರೆ ಅದೇ ಸಂದ[...] ಕೇಂದ್ರದ ಮಂತ್ರಿ ಸ್ಮೃತಿ ಇರಾನಿ [...] ಸರ್ಟಿಫಿಕೇಟ್‌ನೊಂದಿಗೆ ಮೋದಿಯ ಕ್ಯಾಬಿನೆ[...] ಗ್ಲಾಮರಸ್ ಮಂತ್ರಿಯಾಗಿ ಆರಾಮಾಗಿದ್ದಾಳೆ. ಎ[...] ಕೆಲವು ಎಂಎಲ್‌ಎಗಳನ್ನು ಸಣ್ಣಪುಟ್ಟ ನೆಪ[...] ಮುಂದೊಡ್ಡಿ ಅರೆಸ್ಟ್ ಮಾಡುವುದು ಕೇಸು ಜಡಿಯ[...] ದೆಹಲಿ ಪೊಲೀಸರ ದೈನಂದಿನ ರೊಟೀನ್ ಆಗಿ[...] ಕೇಂದ್ರದ ನಿಯಂತ್ರಣದಲ್ಲಿರುವ ದೆಹಲಿಯ ಪೊ[...] ತಮ್ಮ ಭ್ರಷ್ಟಾಚಾರಕ್ಕೆ, ಅದಕ್ಷತೆಗೆ ದೇಶದಲ್ಲೇ [...] ಗಳಿಸಿದ್ದಾರೆ. ವಿವಿಐಪಿಗಳ ಬೆಂಗಾವಲಾಗಿ ಸುತ[...] ಬಿಟ್ಟು ದೆಹಲಿ ಪೊಲೀಸ್ ವ್ಯವಸ್ಥೆ ಬೇರೆ ಯಾ[...] ಲಾಯಕ್ಕಿಲ್ಲ ಎಂಬ ಮಾತು ಕೇಳಿಬರುತ್ತಿದೆ. ಆ [...] ಹಾಗಿರಲಿ.


ಇತ್ತ ಎಎಪಿ ಸರ್ಕಾರ ನಿರೀಕ್ಷಿತ ಮಟ್ಟದಲ್[...] ಮಾಡುತ್ತಿಲ್ಲ; ದೇಶದಲ್ಲಿ ಒಂದು ರಾಜಕೀಯ ಪರ್ಯಾ[...] ಕೊಡುವಲ್ಲಿ ಸಂಪೂರ್ಣ ವಿಫಲವಾಗಿದೆ [...] ಆರೋಪಗಳನ್ನು ಒಪ್ಪಿಕೊಂಡರೂ, ಇತರೆ ಪಕ್ಷಗಳ [...] ಹೋಲಿಸಿದರೆ ಸಾಕಷ್ಟು ಭಿನ್ನ ಕಾರ್ಯಕ್ರಮಗಳನ್ನು[...] ತಂದಿದೆ. ಭ್ರಷ್ಟಾಚಾರ ನಿಯಂತ್ರಣದಲ್ಲೂ ಒಂದಷ[...] ಮಾಡಿದೆ ಎಂಬ ವರದಿಗಳಿವೆ. ದೆಹಲಿಯ ಫ್ಲ[...] ಒಂದಕ್ಕೆ 250 ಕೋಟಿ ಬಜೆಟ್ ಮಂಜೂರಾ[...] ನಿಗದಿತ ಅವಧಿಗಿಂತ ಮುಂಚೆಯೇ ಕೇವಲ 145 [...] ವೆಚ್ಚದಲ್ಲಿ ಮುಗಿಸಿದ್ದೊಂದು ಇತಿಹಾಸವನ್ನೇ [...] ಜನವಸತಿ ಪ್ರದೇಶಗಳಿಗೆ ಅತಿ ಹತ್ತಿರದಲ್ಲೇ ಕಡಿಮ[...] ಆರೋಗ್ಯ ಸೇವೆ ಒದಗಿಸಲು 1000 ವ[...] ಕ್ಲಿನಿಕ್‌ಗಳನ್ನು ತೆರೆಯುವ ಯೋಜನೆ ಪ್ರಗತಿಯಲ್ಲಿದೆ. [...] ಶಾಲೆಗಳನ್ನು ಅಭಿವೃದ್ಧಿಪಡಿಸುವ ಕೆಲಸದಲ್ಲೂ [...] ತೊಡಗಿಸಿಕೊಂಡಿದೆ. ಕೇಜ್ರಿವಾಲರಿಗೆ ವೈಯಕ್ತಿಕವ[...] ವಿಚಾರದಲ್ಲಿ ಆಸಕ್ತಿ ಇದೆಯೆಂದು ಹೇಳಲಾಗುತ್ತಿದೆ. [...] ಶಾಲೆಗಳ ಡೊನೇಷನ್ ಮತ್ತು ದುಬಾರಿ [...] ಹಾವಳಿಯನ್ನು ನಿಯಂತ್ರಿಸಲು ಕೆಲವು [...] ನಿಯಮಾವಳಿಗಳನ್ನು ಜಾರಿಗೆ ತರಲಾಗಿದೆ.

ಹೀಗೆ ಒಂದಷ್ಟು ಜನಪ್ರಿಯತೆ ಉಳಿಸಿಕೊಂಡ[...] ಮಾಡುತ್ತಾ ತಮ್ಮ ಕಾಲಬುಡದಲ್ಲೇ ತಮಗೆ ಸವಾಲ[...] ಎಎಪಿಯನ್ನು ಮಟ್ಟ ಹಾಕುವುದು ಮೋದಿ ಸ[...] ಆದ್ಯತೆಗಳಲ್ಲಿ ಒಂದು. ಹೀಗಾಗಿ ಇವೆಲ್ಲಾ ನಡೆ[...]

ಜಯಲಲಿತಾಗೆ ಶುಭಾಶಯ ಕೋರುತ್ತಾ ಕೇ[...] ಮೇಲೆ ಸಿಬಿಐಯನ್ನು ಛೂಬಿಡುತ್ತಿರುವ ಮೋ[...] ಆಟವನ್ನು ಈ ದೇಶದ ಮತದಾರರು [...] ಗಮನಿಸುತ್ತಿದ್ದಾರೆ. ಅಲ್ಲವೆ?

• ದೊಡ್ಡಿಪಾಳ್ಯ ನರಸಿಂಹಮ[...]

ಜೈಟ್ಲಿಯ ಕ್ವಾಟ್ಲೆ ಏನು?



"ಡಿಡಿಸಿಎ ತನಿಖೆಯ ಬಗ್ಗೆ ಅರುಣ್ ಜೈಟ್ಲಿ ಯಾಕೆ ಅಷ್ಟೊಂದು ಭಯ ಪಡುತ್ತಿದ್ದಾರೆ? ಹಾಗಾದರೆ ಅಲ್ಲಿ ನಡೆದಿರುವ ಅಕ್ರಮಗಳಲ್ಲಿ ಅವರ ಪಾತ್ರವೇನು?" ಎಂಬ ಕೇಜ್ರಿವಾಲ್‌ರ ಬಹಿರಂಗ ಸವಾಲನ್ನು ಕೆಲವರು ರಾಜಕೀಯಪ್ರೇರಿತ ಹೇಳಿಕೆ ಎಂದು ತಳ್ಳಿಹಾಕಬಹುದು. ಆದರೆ ಈ ಬಗ್ಗೆ ಆಡಳಿತಾರೂಢ ಬಿಜೆಪಿ ಪಕ್ಷದ ಎಂಪಿಯೊಬ್ಬರು ಈ ಹಿಂದೆ ಪ್ರಧಾನಿಯವರಿಗೆ ಬರೆದಿರುವ ಪತ್ರವನ್ನು ತಳ್ಳಿಹಾಕುವುದು ಸಾಧ್ಯವಾಗದ ಮಾತು.

ಈ ಪತ್ರ ಬರೆದದ್ದು ಕೀರ್ತಿ ಆಜಾದ್, ಹಾಲಿ ಬಿಜೆಪಿ ಎಂಪಿ. ಇವರು ಮಾಜಿ ಕ್ರಿಕೆಟಿಗ ಹಾಗೂ ದೆಹಲಿ ಕ್ರಿಕೆಟ್ ಅಸೋಸಿಯೇಷನ್‌ನ ಕಾರ್ಯಕಾರಿ ಸದಸ್ಯ. ಇವರು ಪತ್ರ ಬರೆದಿದ್ದಾದರೂ ಯಾರಿಗೆ? ಖುದ್ದು ಡಿಡಿಸಿಎ ಅಧ್ಯಕ್ಷ ಮಾನ್ಯ ಜೈಟ್ಲಿಯವರಿಗೆ! ಅದರ ಒಕ್ಕಣೆ ಇಷ್ಟೆ.

14 ವರ್ಷಗಳ ಅರುಣ್ ಜೈಟ್ಲಿಯವರ ಅಧ್ಯಕ್ಷಗಿರಿಯಲ್ಲಿ ಭಾರೀ ಅಕ್ರಮಗಳು, ಹಣಕಾಸು ದುರ್ಬಳಕೆ, ದುರಾಡಳಿತ, ಅಶಿಸ್ತು ಇತ್ಯಾದಿಗಳು ತಾಂಡವವಾಡುತ್ತಿದ್ದವು. ಅವುಗಳನ್ನು ಸರಿಪಡಿಸಿಕೊಳ್ಳುವಂತೆ ಹಲವು ಬಾರಿ ಜೈಟ್ಲಿಯವರಿಗೆ ಪತ್ರ ಬರೆದರೂ ಕಿವುಡನ ಮುಂದೆ ಕಿನ್ನರಿ ಬಾರಿಸಿದಂತಾಗಿದೆಯಂತೆ.

ಅಂತಿಮವಾಗಿ "ನಿಮಗೆ ಕಾನೂನಿನ ಬಗ್ಗೆ ಸ್ವಲ್ಪವಾದರೂ ವಿಶ್ವಾಸವಿದ್ದರೆ, ಡಿಡಿಸಿಎ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಿ, ಪ್ರತಿವರ್ಷ ಗುಳುಂ ಆಗುತ್ತಿರುವ ನೂರಾರು ಕೋಟಿಗಳನ್ನು ಸಂಸ್ಥೆಗೆ ಉಳಿಸಿ" ಎಂದು ಅಲವತ್ತು ಕೊಂಡಿದ್ದಾರೆ.

ಈ ಬಗ್ಗೆ ಒಂದು ಉದಾಹರಣೆಗಾಗಿ, ದೆಹಲಿಯ ಫಿರೋಜ್ ಶಾ ಕೋಟ್ಲಾ ಕ್ರೀಡಾಂಗಣದ ನವೀಕರಣ ಕಾಮಗಾರಿಯನ್ನೇ ತೆಗೆದುಕೊಳ್ಳಿ. ಈ ಕಾಮಗಾರಿಯ ಆರಂಭಿಕ ಯೋಜನಾ ವೆಚ್ಚ 24 ಕೋಟಿಯಾಗಿದ್ದರೆ, ಒಟ್ಟು ವೆಚ್ಚ ಮಾಡಿದ್ದು ಸುಮಾರು 130 ಕೋಟಿ ರೂಪಾಯಿಗಳು! ಶೇಕಡ 541 ಹೆಚ್ಚಳ. ಇದರಲ್ಲಿ ಜೈಟ್ಲಿ ಕರಾಮತ್ತು ಇದೆ ಎಂಬ ಗಂಭೀರ ಆರೋಪವಿದೆ.

ಲಕ್ಷಾಂತರ ಕೋಟಿಗಳ ಬಜೆಟ್ ಹೊಂದಿರುವ ಕೇಂದ್ರ ಸರ್ಕಾರದ ಹಣಕಾಸು ಖಾತೆಯಲ್ಲಿ ಪ್ರತಿಷ್ಠಾಪನೆಯಾದರೂ ಡಿಡಿಸಿಎ ತೊರೆದಿರಲಿಲ್ಲ; ವಿವಾದಗಳು ಹೆಚ್ಚಾಗುತ್ತಾ ಹೋದಂತೆ ಅನಿವಾರ್ಯವಾಗಿ ಡಿಡಿಸಿಎ ತೊರೆದಿದ್ದಾರೆ.

ಅದೇನೇ ಇರಲಿ, ಮಾಡಿದ ಪಾಪ ಬಿಡಬೇಕಲ್ಲಾ? ಕಾಡ್ತಾ ಇದೆ ಅಷ್ಟೆ.

...ದಾರಿ ತಪ್ಪುತ್ತಿರುವ ಬಿಲ್ಲವ ಯುವಜನತೆ ಮತ್ತು ನಾಯಕತ್ವದ ಸವಾಲುಗಳು



...ಳೆದೆರಡು ದಶಕಗಳಿಂದೀಚೆಗೆ ಅವಿಭಜಿತ ದಕ್ಷಿಣ ...ಜಿಲ್ಲೆಯಲ್ಲಿ ನಡೆದ ಯಾವುದೇ ಕೋಮುಗಲಭೆಗಳ ...ಗಳನ್ನೊಮ್ಮೆ ಅವಲೋಕನ ಮಾಡಿ ನೋಡಿ. ...ತ್ವದ ಪರವಾಗಿ ಅತೀ ಹೆಚ್ಚು ಜೀವಗಳನ್ನು ಬಲಿ ...ವರು ಬಿಲ್ಲವರು. ಜೈಲಿನ ಕಂಬಿಯೆನಿಸಿದವರಲ್ಲಿ ...ಪಾಲು ಬಿಲ್ಲವರದ್ದು. ಹಲ್ಲೆಗೊಳಗಾದವರು, ...ಾಂತಿಕ ಏಟು ತಿಂದವರ ಪಟ್ಟಿಯಲ್ಲೂ ದೊಡ್ಡ ... ಬಿಲ್ಲವರದ್ದು. ಹಿಂದೂತ್ವವೆಂಬ ದ್ವೇಷ ಬಿತ್ತುವ ...ರಣಕ್ಕಾಗಿ ಅತೀಹೆಚ್ಚು ಕ್ರಿಮಿನಲ್‌ಗಳಾದವರು ...ದು. ಕೋರ್ಟ್, ಕಚೇರಿ, ಠಾಣೆ, ಜೈಲು, ಎಂದು ... ಭವಿಷ್ಯದ ಮೇಲೆ ತಾವೇ ಚಪ್ಪಡಿ ಕಲ್ಲು ಎಳೆದು ...ವರಲ್ಲೂ ಬಹುಸಂಖ್ಯೆಯ ಯುವಕರು ಬಿಲ್ಲವರು. ...ಲ್ಲಿ ಬರಬರುತ್ತಾ ಎಂತಹ ಅತಿರೇಕ ಸ್ಥಿತಿಗೆ ...ತೆಂದರೆ ಹಿಂದೂತ್ವದ ರಕ್ಷಣೆಗಾಗಿ ಬಿಲ್ಲವ ಯುವಕರೇ ...ವನ್ನು ಕೊಲ್ಲುವ ಮಟ್ಟಿಗೆ. ಬಂಟ್ವಾಳದ ಅಮಾಯಕ ... ಯುವಕ ಹರೀಶ್ ಪೂಜಾರಿಯನ್ನು ಕೊಂದ ...ಪಿಗಳಲ್ಲಿ ಈಗಾಗಲೇ ಬಂಧಿತರಾಗಿರುವ ಮೂವರಲ್ಲಿ ...ಬ ಬಿಲ್ಲವರು. ಪ್ರಸಿದ್ಧ ಮಾರ್ಕ್ಸಿಸಂ ಮತ್ತು ...ಡ್ಕರಿಸಂ ಚಿಂತಕರಾಗಿರುವ ಡಾ| ಆನಂದ್ ತೇಲ್ ... ಹೀಗೆ ಬರೆಯುತ್ತಾರೆ: "ಮುಸ್ಲಿಮರ ವಿರುದ್ಧ ...ವನ್ನು ಎತ್ತಿಕಟ್ಟುವ ಮೂಲಕ ಬ್ರಾಹ್ಮಣಿಸಂ ಮತ್ತು ... ಒಂದೇ ಕಲ್ಲಿಗೆ ಎರಡು ಹಕ್ಕಿ ಹೊಡೆಯುತ್ತಿದೆ. ...ತಲೂ ಮಿಗಿಲಾಗಿ ಮೂಲತಃ ಒಂದೇ ಸಮುದಾಯ ...ದ ನಮ್ಮ ನಮ್ಮನ್ನು ಕಚ್ಚಾಡಿಸಿ, ನಮ್ಮವರ ಕೈಯಿಂದ ...ರನ್ನೇ ಕೊಲ್ಲಿಸುತ್ತದೆ." ಇದರ ತಾತ್ಪರ್ಯವೇನೆಂದರೆ ...ಮರು ಮೂಲತಃ ದಲಿತರು. ಹೌದು ದಕ್ಷಿಣ ಭಾರತ ...ಮರಲ್ಲಿ 95% ಮುಸ್ಲಿಮರು ದಲಿತ ಮತ್ತು ಶೋಷಿತ ...ಗಗಳಿಂದ ಇಸ್ಲಾಮಿಗೆ ಮತಾಂತರ ಹೊಂದಿದವರು. ...ಭಿಪ್ರಾಯಕ್ಕೆ ಒತ್ತು ನೀಡುವಂತೆ ಮಲಯಾಳಂನ ... ಕವಿ ಕುಮಾರನ್ ಆಶಾನ್ ಬಹು ಹಿಂದೆಯೇ ...ವಿತೆಯೊಂದರಲ್ಲಿ ಹೀಗೆ ಬರೆದಿದ್ದಾರೆ:

...ಂ ವಿಲಕ್ಕುಂ ವಯಿಯಾಟ್ಟುಂ
...ಮೀ ಕೂಟರ್ ಸಹಿಚ್ಚು
...ಬಿಮುಟ್ಟ ವಿಟ್ಟದಾಂ ಹಿಂದುಮದಂ
...ಮಿಲ್ ತಾನ್ನ ಕೆಟ್ಟುಕಯಿಂಞ
...ವಿದಿರಿ ಮದಂ, ಕೇರಳತ್ತಿಂಗಳ್ ಮುಸಲ್ಮಾನ್‌ಮಾರ್
ಹಾರಂಜಲಿಲ್ ನಿನ್ನೋ!
...ಲ್ ಚೇರುಂ ತಿರಗಳ್ ಕಡನ್ನೋ!
...ಬಯಮೇರಿ ವನ್ನವರೇರೆಯಿಲ್ಲ!
...ಮುಮ್ಮನ್ ಪೋಯಿ ತೊಪ್ಪಿಯಿಟ್ಟಾಲ್
...ವನೆತ್ತಿ ಚಾರುತ್ತರುತ್ತಿಡಾಂ
...ಪೇಡಿಕ್ಕಂಡ ತಂಬುರಾರೆ"


...ರಾಂಶ:

...ಡಿಸುವುದನ್ನು, ತಡೆಯುವುದನ್ನು, ದಾರಿಯಲ್ಲಿ ...ಯುಸುವುದನ್ನು ಮತ್ತೆಲ್ಲವನ್ನೂ ಸಹಿಸಿ ತಾಳ್ಮೆ ...ಡ ಜನಗಳು ಹಿಂದೂ ಮತ ತ್ಯಜಿಸಿದರು. ನೀಚ ...ವಸ್ಥೆಯ ಕಟ್ಟು ಕಠ ಹಿಡಿದ ನಂಬೂದರಿಗಳ ...ಣರ) ಹಿಡಿತದಲ್ಲಿರುವ ಧರ್ಮ ತ್ಯಜಿಸಿದರು. ಕೇರಳದ ...ಮರಲ್ಲಿ ಹೆಚ್ಚಿನವರ್‍ಯಾರು ಪಶ್ಚಿಮದಿಂದ ಬಂದವರಲ್ಲ, ...ಡಲುಗಳ ದಾಟಿ ಬಂದವರೂ ಅಲ್ಲ, ಹಿಮಾಲಯವೇರಿ ...ಬಂತೂ ಅಲ್ಲ. ಮೇಲುಜಾತಿಯ ನೀಚರನ್ನು ಕಂಡಾಗ ...ತಕ್ಕಿಸಿ ನಿಲ್ಲುತ್ತಿದ್ದವರು ಹೋಗಿ ಟೊಪ್ಪಿ ಧರಿಸಿ ...ಸ್ವೀಕರಿಸಿ) ಅಂಜದೇ ಅವರೆದುರು ನಿಂತರು.

...! ತೇಲ್‌ತುಂಬ್ಡೆಯವರು ಹೇಳಿದ್ದು ಪರೋಕ್ಷ ಸತ್ಯವ ... ಬಿಲ್ಲವರ ವಿಚಾರದಲ್ಲಿ ನಾವೆಲ್ಲಾ ಕಾಣುತ್ತಿರುವುದು ...ತ್ಯ ಎಂಬುವುದು ನಮಗೆ ಬಂಟ್ವಾಳದ ಹರೀಶ್ ...ರಿಯ ಕೊಲೆಯಲ್ಲಿ ಸ್ಪಷ್ಟವಾಗಿದೆ. ಆರೆಸ್ಸೆಸ್‌ಗೆ ಒಂದು ...ಸಿಯೆಂದೆ. ಅದನ್ನು ನಾವು ಆಗಾಗ ನೋಡುತ್ತಿದ್ದೇ...ವಾದರೂ ಅದನ್ನು ನಾವು ಅರ್ಥೈಸಿಲ್ಲ, ಆರೆಸ್ಸೆಸ್ ತನ್ನ ಉದ್ದೇಶಸಾಧನೆಗೆ ಯಾವತ್ತೂ ಮೇಲ್ಜಾತಿಯ ಯುವಕರನ್ನು ಬಳಸುವುದಿಲ್ಲ, ಅವರು ಹೆಚ್ಚೆಂದರೆ ಪ್ರಚೋದನಕಾರಿ ಭಾಷಣ ಕುಟ್ಟಿ ಕೆಳಜಾತಿಯ ಯುವಕರಲ್ಲಿ ಫ್ಯಾಸಿಸಂನ ನಂಜು ತುಂಬಿಸಿ ಹೋಗುತ್ತಾರೆ. ಆದರೆ ಕೆಳಜಾತಿಯ ಯುವಕರನ್ನು ಕಾಲಾಳುಗಳಾಗಿ ಬಳಸಿ ಅವರ ತಲೆಯಲ್ಲಿ ನೀವು ನಿಜವಾದ ಹೀರೋಗಳು ಎಂಬ ಗಾಳಿ ತುಂಬಿಸಿಬಿಡುತ್ತಾರೆ. ಮೇಲ್ಜಾತಿಯ, ಮೇಲ್ವರ್ಗದ ನಾಯಕರು ನಮ್ಮ ಮೇಲೆ ನಂಬಿಕೆಯಿಟ್ಟು ಧರ್ಮ ರಕ್ಷಣೆಯ ಮಹತ್ತರವಾದ ಜವಾಬ್ದಾರಿಯನ್ನು ಹೊರಿಸಿರುವರೆಂದು ಹೊಸದಾಗಿ ಸಂಘಪರಿವಾರದ ಖೆಡ್ಡಾಕ್ಕೆ ಬಿದ್ದ ಯುವಕರು ಮುಗ್ಧವಾಗಿ ನಂಬಿಬಿಡುತ್ತಾರೆ. ಈ ರೀತಿ ಧರ್ಮ ರಕ್ಷಣೆಯ ಅಮಲು ತಲೆಗೇರಿಸಿಕೊಂಡು ಸಹಜವಾಗಿಯೇ ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಾರೆ ಅಥವಾ ಭಾಗಿಯಾಗುವಂತೆ ಮಾಡಲಾಗುತ್ತದೆ. ಇಂತಹ ಯುವಕರು ತಮ್ಮ ಮೇಲೆ ಕೇಸುಗಳನ್ನೆಳೆದುಕೊಂಡರೆ ಅವರಿಗೆ ಧೈರ್ಯ ತುಂಬಲಾಗುತ್ತದೆ. ನೀವು ಧರ್ಮ ರಕ್ಷಣೆಯ ಪುಣ್ಯ ಕೈಂಕರ್ಯಕ್ಕಾಗಿ ತ್ಯಾಗ ಮಾಡುತ್ತಿದ್ದೀರಿ; ನೋಡಿ ನಿಮ್ಮ ಮೇಲೆ ಬಿದ್ದಿರುವುದು ಜುಜುಬಿ ಒಂದು ಕೇಸು, ಇದೇನು ಮಹಾ ನನ್ನ ಮೇಲೆ 30 ಕೇಸುಗಳಿವೆ, 40 ಕೇಸ್‌ಗಳಿವೆ ಎಂದು ಮತ್ತಷ್ಟು ಧೈರ್ಯ ತುಂಬಲಾಗುತ್ತದೆ. ಆಗ ಅವರಿಗೆ ಇನ್ನಷ್ಟು ಧೈರ್ಯ ಬರುತ್ತದೆ. ಶಾಸಕ, ಸಂಸದ, ಮಂತ್ರಿ, ಮುಖ್ಯಮಂತ್ರಿ ಮುಂತಾದವರ ಹಿನ್ನೆಲೆ, ಅವರು ಇಂದು ಈ ಹಂತಕ್ಕೆ ತಲುಪಬೇಕಾದರೆ ಅವರು ನಿಮ್ಮ ರೀತಿ ಕೇಸು, ಕೋರ್ಟು, ಜೈಲು ಎಲ್ಲವನ್ನೂ ಅಲೆದು ಅಲೆದೇ ಈ ಹಂತ ತಲುಪಿದ್ದಾರೆ ಎಂದು ನಂಬಿಸಲಾಗುತ್ತದೆ. ಹುಂಬ ಯುವಕರ ತಲೆಯಲ್ಲಿ ರಾಜಕೀಯ ಅಧಿಕಾರದ ಆಶೆ ಮೊಳೆಯುತ್ತದೆ. ಅವರು ಮುಂದೆ ಎಂತಹ ಅನಾಹುತಕಾರಿ ಕೆಲಸಕ್ಕಿಳಿಯಲೂ ಹಿಂಜರಿಯುವುದಿಲ್ಲ, ಒಮ್ಮೆ ಈ ಹಂತಕ್ಕೆ ಬಂದು ಅವರಿಗೆ ಬೇರ್‍ಯಾವುದೂ ಅರ್ಥವಾಗುವುದಿಲ್ಲ, ಈ ರೀತಿ ಬೆಳೆದ ಮೇಲೆ ಅಕಸ್ಮಾತ್ ಅವರು ಹತರಾದರೆ ಆರೆಸ್ಸೆಸ್ಸಿನ ಹಿರಿತಲೆಗಳಿಗೆ ಹಬ್ಬವೇ ಹಬ್ಬ, ಇದನ್ನೇ ಬಳಸಿಕೊಂಡು ಮತ್ತಷ್ಟು ಪ್ರಚೋದನೆ ನಡೆಸಿ ಇನ್ನಷ್ಟು ಹೊಸಯುವಕರನ್ನು ಫೀಲ್ಡಿಗೆ ತರುತ್ತಾರೆ. ಹತರಾದ ಕೆಳಜಾತಿಯ ಯುವಕರ ಹೆಣದ ಮೇಲೆ ತಮ್ಮ ಸಿಂಹಾಸನದ ಕಾಲುಗಳನ್ನು ಊರುತ್ತಾರೆ. ಸತ್ತವರಿಗೆ ಹುತಾತ್ಮ ಪಟ್ಟ ಕಟ್ಟುತ್ತಾರೆ. ಇಂತಹ ತಂತ್ರಗಳನ್ನೆಲ್ಲಾ ಬಳಸಿ ಕೆಳಜಾತಿಯ ಯುವಕರನ್ನು ಕ್ರಿಮಿನಲ್‌ಗಳನ್ನಾಗಿ ಮಾಡುತ್ತಾರೆ. ಈ ರೀತಿ ಕ್ರಿಮಿನಲ್‌ಗಳಾದವರಲ್ಲಿ ಬಹುದೊಡ್ಡ ಸಂಖ್ಯೆಯವರು ಬಿಲ್ಲವರು.


ಈ ಎಲ್ಲಾ ಸತ್ಯಗಳನ್ನು ತನ್ನ ಸಮುದಾಯದ ಯುವಕರಿಗೆ ಕುದ್ರೋಳಿ ದೇವಸ್ಥಾನದಲ್ಲಿ, ಜಾತಿ ಸಂಘದ ಸಭೆಗಳಲ್ಲಿ ಬಿಡಿಸಿ ಬಿಡಿಸಿ ಹೇಳಿ ತನ್ನ ಸಮುದಾಯದ ಯುವಜನತೆ ದಾರಿತಪ್ಪದಂತೆ ಮಾಡಲು ಯತ್ನಿಸಿದ ಏಕೈಕ ಬಿಲ್ಲವ ನಾಯಕರಿದ್ದರೆ ಅದು ಜನಾರ್ದನ ಪೂಜಾರಿ ಮಾತ್ರ. ಆದುದರಿಂದಲೇ ಆರೆಸ್ಸೆಸ್ ಎರಡು ದಶಕಗಳಷ್ಟು ಹಿಂದೆಯೇ ಜನಾರ್ದನ ಪೂಜಾರಿಯವರನ್ನು ರಾಜಕೀಯವಾಗಿ ಮುಗಿಸಲು ಸಂಚು ರೂಪಿಸಿತ್ತು, ಅದಕ್ಕಾಗಿ ಆರೆಸ್ಸೆಸ್ ಮಾಡಿದ ಮೊದಲ ಕೆಲಸ ಕಟ್ಟಾ ಹಿಂದೂ ಧರ್ಮಾನುಯಾಯಿಯಾದ ಜನಾರ್ದನ ಪೂಜಾರಿಯನ್ನು ಹಿಂದೂ ವಿರೋಧಿಯೆಂದು ಬಿಂಬಿಸಿದ್ದು. ಒಂದು ಕಾಲದಲ್ಲಿ ಜನಾರ್ದನ ಪೂಜಾರಿ ಎಂತಹ ಡೈನಾಮಿಕ್ ನಾಯಕರಾಗಿದ್ದರೆಂದರೆ 'ಧರ್ಮಸ್ಥಳ ರಿಪಬ್ಲಿಕ'ನ್ನು ಎದುರು ಹಾಕಿಕೊಳ್ಳುವ ಧೈರ್ಯವನ್ನು ಅವರು ಸುಮಾರು ಎರಡು ದಶಕಗಳ ಹಿಂದೆಯೇ ತೋರಿದ್ದರು. ದುರದೃಷ್ಟವಶಾತ್ 1996 ರ ಪಾರ್ಲಿಮೆಂಟ್ ಚುನಾವಣೆಯ ಸಂದರ್ಭ ದೇಶದಾದ್ಯಂತ ಕಾಂಗ್ರೆಸ್ ವಿರೋಧಿ ಅಲೆಯಿತ್ತು, ಮುಸ್ಲಿಂ ಸಮುದಾಯದ ಮನಸ್ಸಿನಿಂದ ಬಾಬರೀ ಮಸೀದಿಯ ನೋವಿನ್ನೂ ಮಾಸಿರಲಿಲ್ಲ, ಮಂಗಳೂರು ಲೋಕಸಭಾ ಕ್ಷೇತ್ರದ ಮುಸ್ಲಿಮರ ಮತಗಳು ಗಣನೀಯ ಸಂಖ್ಯೆಯಲ್ಲಿ ಜನತಾದಳದತ್ತ ವಾಲಿತು. ಪೂಜಾರಿ ಕಾಂಗ್ರೆಸ್ ವಿರೋಧಿ ಅಲೆ ಮತ್ತು ಬದಲಾದ ರಾಜಕೀಯ ಪರಿಸ್ಥಿತಿಯಿಂದ ಸೋತರೇ ಹೊರತು ಧರ್ಮಸ್ಥಳ ರಿಪಬ್ಲಿಕನ್ನು ಎದುರು ಹಾಕಿಕೊಂಡದ್ದರಿಂದ ಸೋತದ್ದಲ್ಲ, ಆದರೆ ಆರೆಸ್ಸೆಸ್ ಪೂಜಾರಿಯವರ ಸೋಲನ್ನು ಈ ಅರ್ಥದಲ್ಲಿ ಬಹಿರಂಗವಾಗಿ ವ್ಯಾಖ್ಯಾನಿಸಿತು. ಅದರೊಂದಿಗೆ ಜನಾರ್ದನ ಪೂಜಾರಿಯವರ ನಾಲಿಗೆ ಸರಿಯಿಲ್ಲವೆಂಬ ಅಪಪ್ರಚಾರವನ್ನು ವ್ಯವಸ್ಥಿತವಾಗಿ ಮಾಡಿತು. ಅದನ್ನು ಎಷ್ಟು ಜೋರಾಗಿ ಮತ್ತು ವ್ಯವಸ್ಥಿತವಾಗಿ ಮಾಡಿತೆಂದರೆ ಪೂಜಾರಿಯವರದ್ದೇ ಬಿಲ್ಲವ ಸಮುದಾಯದವರ ಬಾಯಲ್ಲಿ ಅದನ್ನು ಹೇಳಿಸುತ್ತಾ ಬಂತು. ತನ್ಮೂಲಕ ಪೂಜಾರಿಯವರ ರಾಜಕೀಯ ಸಮಾಧಿಗೆ ಅಡಿಪಾಯ ಹಾಕಿತು. ಇದನ್ನು ಬಿಲ್ಲವರು ಅರ್ಥೈಸಲೇ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತೀ ದೊಡ್ಡ ಸಂಖ್ಯೆಯ ಮತದಾರರು ಬಿಲ್ಲವರಾದರೂ ಬಿಲ್ಲವರ ಜನಾರ್ದನ ಪೂಜಾರಿ ಒಂದಲ್ಲ ಎರಡಲ್ಲ ಮೂರಲ್ಲ ನಾಲ್ಕು ಬಾರಿ ಸೋತರು. ಒಂದು ವೇಳೆ ಪೂಜಾರಿಯವರು ಈ ರೀತಿ ಸೋಲದಿರುತ್ತಿದ್ದರೆ ಅವರು ಈಗಾಗಲೇ ಕರ್ನಾಟಕದ ಮುಖ್ಯಮಂತ್ರಿಯಾಗುತ್ತಿದ್ದರು. ಬಿಲ್ಲವ ಸಮುದಾಯ ಆರೆಸ್ಸೆಸ್ಸಿನ ಷಡ್ಯಂತ್ರಕ್ಕೆ ಬಲಿಬಿದ್ದು ಒಂದೆಡೆ ತಮ್ಮ ಸಮುದಾಯದ ಯುವಕರನ್ನು ಬಲಿ ನೀಡುತ್ತ ಇದೆ. ಇನ್ನೊಂದೆಡೆ ಜನಾರ್ದನ ಪೂಜಾರಿಯಂತಹ ಸಮರ್ಥ ಮತ್ತು ಸಮುದಾಯದ ಬಗ್ಗೆ ಕಾಳಜಿ ಇರುವ ನಾಯಕನ ರಾಜಕೀಯ ಬದುಕನ್ನು ಮುಗಿಸಿಬಿಟ್ಟಿದೆ. ಜನಾರ್ದನ ಪೂಜಾರಿಗೆ ತನ್ನ ಸಮುದಾಯದ ಮೇಲೆ ಎಷ್ಟೊಂದು ಕಾಳಜಿಯಿದೆಯೆಂದರೆ ರಾಜಕೀಯವಾಗಿ ತನ್ನನ್ನು ಮತ್ತು ತನ್ನ ಐಡಿಯೋಲಜಿಯನ್ನು ದ್ವೇಷಿಸುವ ತನ್ನ ಸಮುದಾಯದ ಕಮ್ಯೂನಲ್ ಕ್ರಿಮಿನಲ್ ಎಲಿಮೆಂಟ್‌ಗಳು ಸಂಘ ಪರಿವಾರದ ಷಡ್ಯಂತ್ರಕ್ಕೆ ಬಲಿ ಬಿದ್ದು ಜೀವ ತೆತ್ತರೆ ಜನಾರ್ದನ ಪೂಜಾರಿ ಎಲ್ಲಾ ಮರೆತು ಅವರ ಮನೆಗಳಿಗೆ ಭೇಟಿ ನೀಡುತ್ತಾರೆ, ಸಾಂತ್ವನ ಹೇಳುತ್ತಾರೆ, ಆರ್ಥಿಕ ನೆರವು ನೀಡುತ್ತಾರೆ. ಮೇಲ್ನೋಟಕ್ಕೆ ಇದು ಅತಿಯಾಯಿತು ಎಂದೆನಿಸಿದರೂ ವಾಸ್ತವದಲ್ಲಿ ಇದು ಅತಿಯಲ್ಲ, ಏಕೆಂದರೆ ಕಮ್ಯೂನಲ್ ರೌಡಿ ಎಲಿಮೆಂಟ್‌ಗಳೇನೋ ಸತ್ತು ಹೋದರು. ಆದಕ್ಕೆ ಅವರ ಬಡಪಾಯಿ ಹೆತ್ತವರೋ, ಹೆಂಡತಿಯೋ, ಮಕ್ಕಳೋ, ಸಹೋದರಿಯರೋ ಹೊಣೆಯಲ್ಲ, ಅವರ ಪಾಲಿಗೆ ಓರ್ವ ಮನೆ ಮಗ ಸತ್ತ ಎಂಬುವುದಷ್ಟೇ ಆ ಗಳಿಗೆಯ ನೋವು.

ಬಿಲ್ಲವ ಸಮುದಾಯದ ಯಾವುದೇ ಮಹಿಳೆಯರನ್ನು ಮಾತನಾಡಿಸಿ ನೋಡಿ. ಬಹುತೇಕ ಮಹಿಳೆಯರು, ಯುವತಿಯರು ಕೋಮುವಾದವನ್ನು ದ್ವೇಷಿಸುತ್ತಾರೆ. ಸ್ವಲ್ಪ ವಿದ್ಯಾವಂತ ಮಹಿಳೆಯರು ಸಂಘ ಪರಿವಾರವನ್ನು ದ್ವೇಷಿಸುತ್ತಾರೆ. ಯಾಕೆಂದರೆ ಕೋಮುವಾದದ ನೇರ ಬಲಿಪಶು ಮಹಿಳೆ, ಸಂಘಪರಿವಾರ ತಮ್ಮ ಮಕ್ಕಳನ್ನು, ಗಂಡನನ್ನು, ಅಣ್ಣನನ್ನು ಬಲಿಪಶು ಮಾಡುತ್ತಿದೆ ಎಂಬ ವಾಸ್ತವವನ್ನು ಅರಿತಿದ್ದಾರೆ. ಆದರೆ ಈ ಯುವಕರಿಗೆಂದು ಬುದ್ಧಿ ಬರುವುದು? ಇತ್ತೀಚಿನ ವರ್ಷಗಳಲ್ಲಿ ಪೂಜಾರಿ ಬಹಳಷ್ಟು ಕಾಂಪ್ರಮೈಸ್ ಮಾಡಿಕೊಂಡಿದ್ದಾರೆ. ಅವರು ಧರ್ಮಸ್ಥಳ ರಿಪಬ್ಲಿಕ್‌ಗೆ ತಲೆಬಾಗಿದ್ದಾರೆ. ಮೃದು ಹಿಂದೂತ್ವ ಪಾಲಿಸಿಯನ್ನು ಒಪ್ಪಿಕೊಂಡಿದ್ದಾರೆ. ನಾವು ಹಳೆಯ ಕಾಲದ ಡೈನಾಮಿಕ್, ಸೆಕ್ಯುಲರ್ ಪೂಜಾರಿಯನ್ನು ಕಳಕೊಂಡಿದ್ದೇವೆ. ಇದಕ್ಕೆ ಪೂಜಾರಿಯವರ ನಿರಂತರ ಸೋಲಿನಷ್ಟೆ ಕಾರಣ ಅವರ ಸಮುದಾಯ ಅವರಿಗೆ ನೈತಿಕ ಬೆಂಬಲ ನೀಡದಿದ್ದುದು.



ಕಳೆದೆರಡು ದಶಕಗಳಲ್ಲಿ ಬಿಲ್ಲವ ಸಮುದಾಯಕ್ಕೆ ರಾಜಕೀಯ ನೇತೃತ್ವ ನೀಡಬಲ್ಲ ಇನ್ನೋರ್ವ ನಾಯಕ ಆ ಸಮುದಾಯದಿಂದ ಹುಟ್ಟಿ ಬರಲಿಲ್ಲ, ವಿನಯ್ ಕುಮಾರ್ ಸೊರಕೆ, ಗೋಪಾಲ ಪೂಜಾರಿ, ವಸಂತ ಸಾಲ್ಯಾನ್, ಕೋಟ ಶ್ರೀನಿವಾಸ್ ಪೂಜಾರಿ, ರುಕ್ಮಯ ಪೂಜಾರಿ ಇವರ್‍ಯಾರೂ ಸಮುದಾಯದ ನಾಯಕರಾಗಲೇ ಇಲ್ಲ, ಇವರು ಬಿಲ್ಲವ ಸಮುದಾಯವನ್ನು ಪ್ರತಿನಿಧಿಸಲೇ ಇಲ್ಲ, ಸಮುದಾಯದ ನೋವು-ನಲಿವು, ತವಕತಲ್ಲಣಗಳಿಗೆ ದನಿಯಾಗಲೇ ಇಲ್ಲ, ಇವರೆಲ್ಲಾ ಎಂ.ಎಲ್.ಎ, ಎಂ.ಪಿ, ಮಂತ್ರಿಗಳಾದರೂ ಸಮುದಾಯದ ನೋವಿಗೆ ಕಿವಿಗೊಡಲೇ ಇಲ್ಲ, ಇವರ್‍ಯಾರೂ ತಮ್ಮ ಸಾಮುದಾಯಿಕ ಅಸ್ಮಿತೆಯ ಜೊತೆ ಗುರುತಿಸಿಕೊಳ್ಳಲಿಲ್ಲ. ಅಂದಮಾತ್ರಕ್ಕೆ ಇವರೇನೂ ಸೆಕ್ಯುಲರ್ ಕಲಿಗಳೆಂದಲ್ಲ, ಇವರಿಗೆ ತಮ್ಮ ರಾಜಕೀಯ ಭವಿಷ್ಯ ಮುಖ್ಯವಾಗಿತ್ತೆ ಹೊರತು ಸಮುದಾಯದ ತಲ್ಲಣಗಳಲ್ಲ, ಜನಾರ್ದನ ಪೂಜಾರಿಯವರ ಗರಡಿಯಲ್ಲಿ ಪಳಗಿದ ಹರಿಕೃಷ್ಣ ಬಲ್ಲಾಳ ಒಂದೊಮ್ಮೆ ಸ್ವಲ್ಪ ಭರವಸೆ ಮೂಡಿಸಿದ್ದರಾದರೂ ಆ ಬಳಿಕ ಎಡಬಿಡಂಗಿಯಂತಾಡಿ ಸಮುದಾಯಕ್ಕೆ ಲಾಭ ಮಾಡಿದ್ದಕ್ಕಿಂತ ಹಾನಿ ಮಾಡಿದ್ದೇ ಹೆಚ್ಚು.

ಟಿಪ್ಪು ಜಯಂತಿಯನ್ನು ವಿರೋಧಿಸಿ ನಡೆದ ಗಲಭೆಯಲ್ಲಿ ಹರೀಶ್ ಪೂಜಾರಿಯನ್ನು ಸ್ವತಃ ಬಿಲ್ಲವರೇ ಸೇರಿಕೊಂಡು ಕೊಂದುಬಿಟ್ಟರು. ಇತಿಹಾಸದ ಕ್ರೂರ ವ್ಯಂಗ್ಯವನ್ನು ಗಮನಿಸಿ. ಮಲಬಾರ್‌ನಲ್ಲಿ ಇದೇ ಈಳವ (ಬಿಲ್ಲವ) ಸಮುದಾಯದ ಮಹಿಳೆಯರು ತಮ್ಮ ಸ್ತನಗಳನ್ನು ತೆರೆದು ನಡೆಯಬೇಕೆಂಬ ವಿಕೃತ ಸಂಪ್ರದಾಯವನ್ನು ಹುಟ್ಟು ಹಾಕಿದವರು ಇಂದಿನ ಆರೆಸ್ಸೆಸ್ಸಿನ ಪೂರ್ವಜರಾದ ನಂಬೂದಿರಿ(ಬ್ರಾಹ್ಮಣ)ಗಳು. ಆದರ ವಿರುದ್ಧ ಇತರ ಯಾವುದೇ ರಾಜನೋ



ಆಡಳಿತಾಧಿಕಾರಿಯೋ ಧ್ವನಿಯೆತ್ತದಿದ್ದಾಗ ಟಿಪ್ಪು ಸುಲ್ತಾನ್ ಆದರ ವಿರುದ್ಧ ಕಾನೂನು ಜಾರಿ ಮಾಡಿದ್ದರು. ಮಹಿಳೆಯರಿಗೆ ತಮ್ಮ ಸ್ತನಗಳನ್ನು ಮುಚ್ಚುವಂತೆ ಕಟ್ಟುನಿಟ್ಟಿನ ಆದೇಶ ನೀಡಿದ್ದರು. ಇದೀಗ ಅದೇ ಟಿಪ್ಪು ಸುಲ್ತಾನರ ಜಯಂತಿಯ ವಿರುದ್ಧ ಅದೇ (ಈಳವರು) ಬಿಲ್ಲವರನ್ನು ಮುಖ್ಯವಾಗಿ ಬಳಸಲಾಗುತ್ತದೆ. ಇದನ್ನೆಲ್ಲಾ ಆ ಸಮುದಾಯ ಅರ್ಥೈಸುವುದೆಂದು?

ಅತ್ತ ಕೇರಳದಲ್ಲಿ ಹಿಂದಿನಿಂದಲೂ ಆರೆಸ್ಸೆಸ್‌ನಿಂದ ಅಂತರ ಕಾಯ್ದುಕೊಂಡು ಬಂದಿದ್ದ SNDP (ಸ್ವಾಮಿ ನಾರಾಯಣ ಗುರು ಧರ್ಮ ಪರಿಪಾಲನಾ ಯೋಗಂ) ಇತ್ತೀಚಿನ ದಿನಗಳಲ್ಲಿ ತನ್ನ ಹೆಜ್ಜೆ ಬದಲಿಸುತ್ತಾ ಬಂದಿದೆ. ವೆಲ್ಲಪಳ್ಳಿ ನಟೇಶನ್‌ನಂತಹ ಅದರ ನಾಯಕರು ಮ್ಯಾನ್‌ಹೋಲ್‌ನಲ್ಲಿ ನರಳುತ್ತಿದ್ದ ಅಮಾಯಕ ಜೀವಗಳನ್ನು ರಕ್ಷಿಸಲು ಹೋಗಿ ಸ್ವತಃ ತಾನೇ ಬಲಿಯಾದ ರಿಕ್ಷಾ ಚಾಲಕ ನೌಶಾದ್‌ನ ಸಾವಿಗೆ ಕೇರಳ ಮುಖ್ಯಮಂತ್ರಿ ಕಂಬನಿ ಮಿಡಿದಿದ್ದನ್ನೂ ಕೋಮು ರಾಜಕೀಯ ಎಂಬರ್ಥದಲ್ಲಿ ವಿವಾದಾತ್ಮಕ ಹೇಳಿಕೆ ನೀಡಿ ತನ್ನ ಕೊಳಕು ಮನಸ್ಸನ್ನು ಪ್ರದರ್ಶಿಸಿದ್ದಾರೆ.


ವೆಲ್ಲಪಳ್ಳಿ ನಟೇಶನ್ "ಮುಸ್ಲಿಂ ಹಾಗೂ ಕ್ರೈಸ್ತರು ಸತ್ತಾಗ ಓಡೋಡಿ ಹೋಗುವ ಉಮ್ಮನ್ ಚಾಂಡಿ ಹಿಂದೂಗಳು ಸತ್ತಾಗ ಎಲ್ಲಿರುತ್ತಾರೆ" ಎಂಬ ವಿವಾದಾತ್ಮಕ ಹೇಳಿಕೆ ನೀಡಿದ್ದರು. ನೌಷಾದ್ ರಕ್ಷಿಸ ಹೊರಟಿದ್ದು ಎರಡು ಅಮಾಯಕ ಜೀವಗಳನ್ನು ಎಂಬುದು ಇಲ್ಲಿ ಉಲ್ಲೇಖನೀಯ. ಒಂದೇ ಜಾತಿ ಒಂದೇ ಧರ್ಮ ಒಂದೇ ದೇವರು ಎಂದು ಬೋಧಿಸಿದ ಸ್ವಾಮಿನಾರಾಯಣ ಗುರುಗಳ ಪಂಥಕ್ಕೆ ನಾಯಕರೆಂದು ಘೋಷಿಸಿಕೊಳ್ಳುವ ಈ ಮಂದಿಗಳು ಅಮಾಯಕರ ಸಾವಿನಲ್ಲೂ ಜಾತಿ, ಧರ್ಮ ಹುಡುಕುತ್ತಾರೆಂದರೆ ಗುರುಗಳಿಗೆ ಇದಕ್ಕಿಂತ ದೊಡ್ಡ ಅವಮಾನ ಬೇರಿಲ್ಲ.

1993 ರಲ್ಲಿ ಅಬ್ದುನ್ನಾಸರ್ ಮಅದನಿ ಪೂಜಪ್ಪುರ ಜೈಲಿನಲ್ಲಿ ಬಂಧಿಯಾಗಿದ್ದ ಸಂದರ್ಭದಲ್ಲಿ ಕೇರಳದ ಪ್ರಸಿದ್ಧ ಶಿವಗಿರಿ ಮಠದ ಮಠಾಧೀಶರಾಗಿದ್ದ ಸ್ವಾಮಿ ಸಾಸ್ವತೀಕಾನಂದಜೀ ಮತ್ತು ಈಳವ ಮುಖಂಡ ಸುವರ್ಣ ಕುಮಾರ್ ಮುಂತಾದವರು ಮಅದನಿಯವರನ್ನು ಭೇಟಿಯಾಗಿ "ನೀವು ಕೇವಲ ಮುಸ್ಲಿಮರನ್ನು ಮಾತ್ರ ಸಂಘಟಿಸಿದರೆ ಸಾಲದು. ಇಲ್ಲಿನ ಶೂದ್ರ ದಲಿತರೂ ನಿಮ್ಮಂತೆಯೇ ದಮನಿತರು, ಶೋಷಿತರು. ಅವರನ್ನೆಲ್ಲಾ ಸೇರಿಸಿ ಅನ್ಯಾಯದ ವಿರುದ್ಧ ಧ್ವನಿಯೆತ್ತುವ ರಾಜಕೀಯ ಪಕ್ಷ ಸ್ಥಾಪಿಸಿ" ಎಂದು ಸಲಹೆ ನೀಡಿದ್ದರು. ಮಾತ್ರವಲ್ಲದೇ ಪಕ್ಷ ಸ್ಥಾಪನೆಯಾದಂದು (1993 ಎಪ್ರಿಲ್ 14 ಅಂಬೇಡ್ಕರ್ ಜಯಂತಿ) ಅವರೂ ಉಪಸ್ಥಿತರಿದ್ದರು.

ಒಟ್ಟಿನಲ್ಲಿ ಬಿಲ್ಲವ ಸಮುದಾಯದ ಯುವಜನತೆ ಇತಿಹಾಸವನ್ನು ಅರಿತು ವರ್ತಮಾನದ ರಾಜಕೀಯ ಹೆಜ್ಜೆ ಇಡಲಿ. "ತಮ್ಮನ್ನು ಪುಸಲಾಯಿಸಿ ಹಿಂದೂತ್ವದ ಖೆಡ್ಡಾಕ್ಕೆ ದೂಡುವವರ ಮಕ್ಕಳು ಉನ್ನತ ಶಿಕ್ಷಣ ಪಡೆದು ಅಮೆರಿಕದಲ್ಲೋ, ಲಂಡನ್‌ನಲ್ಲೋ ಉನ್ನತ ಉದ್ಯೋಗಗಳಲ್ಲಿದ್ದಾರೆ. ನಮಗೆ ಮುಸ್ಲಿಂ ದ್ವೇಷ ಬೋಧಿಸುವವರ ಮಕ್ಕಳು ದುಬಾಯಿಯಲ್ಲೋ, ಸೌದಿಯಲ್ಲೋ ಮುಸ್ಲಿಮರ ಅಧೀನದಲ್ಲಿ ದುಡಿಯುತ್ತಾರೆ" ಎಂಬ ಜನಾರ್ದನ ಪೂಜಾರಿ ಬಹಳ ಹಿಂದಿನಿಂದಲೂ ಹೇಳುತ್ತಾ ಬಂದ ಸತ್ಯವನ್ನು ಅರ್ಥೈಸಲಿ. ದಕ್ಷಿಣ ಕನ್ನಡದ ಅತೀದೊಡ್ಡ ಸಮುದಾಯವಾದ ಬಿಲ್ಲವ ಸಮುದಾಯ ಆರೆಸ್ಸೆಸ್ಸಿನ ಕಬಂಧ ಬಾಹುವಿನಿಂದ ಹೊರಬಂದರೆ ಇಲ್ಲಿನ ಕೋಮು ಸಂಘರ್ಷಗಳು ಹೆಚ್ಚು ಕಡಿಮೆ ಇಲ್ಲವಾಗಬಹುದು. ನಾವು ಹಿಂದೂತ್ವಕ್ಕಾಗಿ ಶಸ್ತ್ರ ಹಿಡಿಯಬೇಕೆಂದರೆ ಮೊದಲು ನಿಮ್ಮ ಮಕ್ಕಳು ಶಸ್ತ್ರ ಹಿಡಿದು ಬೀದಿಗೆ ಬರಲಿ ಎಂದು ಆರೆಸ್ಸೆಸ್ ಮತ್ತು ಆರೆಸ್ಸೆಸ್ ನಾಯಕರಿಗೆ ಆವಾಜ್ [illegible] ಶಕ್ತರಾದಂದು ಈ ಸಮುದಾಯ ಸಹಜವಾದ ರಾಜಕೀಯ [illegible] ಸಾಧ್ಯ.

■ ಇಸ್ಮತ್ ಪಜೀರ್

ದುಡ್ಡು ಹಿಂದೆ ಕೊಟ್ಟಿದ್ದಾರೋ? ರಸೀದಿ ಉಂಟಾ




ಇತ್ತೀಚೆಗೆ, ಧರ್ಮಸ್ಥಳದಲ್ಲಿ ನಡೆದ 83ನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಡಾ. ಪ್ರಧಾನ್ ಗುರುದತ್ ತಮ್ಮ ಭಾಷಣದಲ್ಲಿ ಸಾಹಿತಿಗಳು ತಮಗೆ ಕೊಟ್ಟ ಪ್ರಶಸ್ತಿಗಳನ್ನು ಹಿಂದಿರುಗಿಸಿದ್ದನ್ನು ಪ್ರಸ್ತಾಪಿಸಿ "ಈ ಸಾಹಿತಿಗಳು ಕೇವಲ ಪ್ರಶಸ್ತಿ ಫಲಕ ಮಾತ್ರ ವಾಪಸು ಮಾಡಿದ್ದಾರೆ; ನಗದು ಹಿಂದೆ ಕೊಟ್ಟಿಲ್ಲ. ಇವರೆಲ್ಲ ರಾಜಕೀಯ ಏಜಂಟರಂತೆ ಅಸಹಿಷ್ಣುತೆಯ ಬೊಬ್ಬೆ ಹೊಡೆಯುತ್ತಿರುವವರು. ವಿಚಾರವಂತಿಕೆಯ ವೇಷ ಹಾಕಿಕೊಂಡವರ ಸೋಗಲಾಡಿ ಇಬ್ಬಂದಿತನವೇ ಈ ಹುಸಿ ಅಸಹಿಷ್ಣುತೆಯ ಕೂಗು" ಎಂದು ಹೇಳಿದ್ದಾರೆ. (ಉದಯವಾಣಿ 11-12-2015 ಪುಟ 14). ಅವರು ಮುಂದುವರಿದು ದೇಶದ ಒಟ್ಟು 1640 ಪ್ರಶಸ್ತಿ ಪುರಸ್ಕೃತರ ಪೈಕಿ ಕೇವಲ 42 ಮಂದಿ ಮಾತ್ರ ಪ್ರಶಸ್ತಿ ವಾಪಸು ಮಾಡಿದ್ದಾರೆ ಎಂಬ ಮಾಹಿತಿಯನ್ನು ಹೊರಗೆಡವಿದ್ದಾರೆ.

ನಾಡಿನ ಇನ್ನೊಂದು ಪ್ರಸಿದ್ಧ ಸಾಹಿತ್ಯ ಸಮಾರಂಭ ಮೂಡುಬಿದಿರೆಯ ಆಳ್ವಾಸ್ ನುಡಿಸಿರಿಯ ಈ ವರ್ಷದ ಸಮ್ಮೇಳನಾಧ್ಯಕ್ಷ ಡಾ। ವೆಂಕಟಾಚಲ ಶಾಸ್ತ್ರಿಗಳು ಸಹ ಲೇಖಕರ ಪ್ರಶಸ್ತಿ ವಾಪಸಾತಿಯ ಬಗ್ಗೆ ಕೇವಲವಾಗಿ ಮಾತನಾಡಿದ್ದಾರೆ. ಅವರು ಹೇಳುವ ಪ್ರಕಾರ ಕಡಿಮೆ ಮೊತ್ತದ ಪ್ರಶಸ್ತಿಗಳನ್ನು ಮಾತ್ರ ವಾಪಸು ಮಾಡಲಾಗಿದೆ. ಪ್ರಶಸ್ತಿಗಳನ್ನು ವಾಪಸು ಮಾಡಿದ ಎಲ್ಲರೂ ದೇಶದಲ್ಲಿ ಅಸಹಿಷ್ಣುತೆ ಹೆಚ್ಚುತ್ತಿರುವುದನ್ನು ಪ್ರತಿಭಟಿಸುವ ಸಲುವಾಗಿ ತಾವು ಈ ಕ್ರಮಕ್ಕೆ ಮುಂದಾಗಿರುವುದು ಎಂದು ತಿಳಿಸಿದ್ದಾರೆ. ಇವರುಗಳ ಪ್ರತಿಭಟನೆಯಿಂದ ಪ್ರಧಾನ್ ಗುರುದತ್, ವೆಂಕಟಾಚಲಶಾಸ್ತ್ರಿ ಮತ್ತು ಇನ್ನೂ ಹಲವು ಮಹನೀಯರ ಮನಸ್ಸಿಗೆ ನೋವಾಗಿದೆ. ವಿಚಾರವಾದಿಗಳನ್ನೂ, ಸಂಶೋಧಕರನ್ನೂ ಗುಂಡಿಟ್ಟು ಕೊಲ್ಲುವುದು, ಮನೆಯಲ್ಲಿ ಇರಿಸಿದ ಯಾವುದೋ ಮಾಂಸ ದನದ್ದು ಎಂದು ಆರೋಪಿಸಿ ವಯಸ್ಸಾದ ಗೃಹಸ್ಥರೊಬ್ಬರನ್ನು ಅವರ ಮನೆಯವರ ಎದುರೇ ಹೊಡೆದು ಕೊಲ್ಲುವುದು, ದೇವಾಲಯ ಪ್ರವೇಶಿಸಿದ ಕಾರಣಕ್ಕೆ ದಲಿತರೊಬ್ಬರನ್ನು ಸುಟ್ಟು ಕೊಲ್ಲುವುದು, ತಾವು ಒಲ್ಲದ ಅಭಿಪ್ರಾಯ ಹೊಂದಿದವರ ಮುಖಕ್ಕೆ ಎಲ್ಲರ ಎದುರೇ ಡಾಂಬರು ಬಳಿಯುವುದು ಮುಂತಾದ ಘಟನೆಗಳು ದೇಶದಲ್ಲಿ ಹೆಚ್ಚುತ್ತಿರುವ ಅಸಹನೆಗೆ ನಿದರ್ಶನ ಎಂದು ಪ್ರಶಸ್ತಿ ವಾಪಸು ಮಾಡಿದ ಸಾಹಿತಿಗಳು ಪ್ರತಿಪಾದಿಸಿದ್ದಾರೆ. ಈ ಘಟನೆಗಳ ಬಗ್ಗೆ ಪ್ರಧಾನ್ ಗುರುದತ್, ವೆಂಕಟಾಚಲ ಶಾಸ್ತ್ರಿ ಮತ್ತು ಇತರರಿಗೆ ಏನೂ ಹೇಳಲಿಕ್ಕೆ ಇಲ್ಲವೆ? ಅಥವಾ ಸಾಹಿತಿಗಳು, ಸದಾಕಾಲ 'ಲೋಕಾ ಸಮಸ್ತಾ ಸುಖಿನೋ ಭವಂತು', 'ವಸುದೈವ ಕುಟುಂಬಕಂ', 'ಸರ್ವಜನಾಂಗದ ಶಾಂತಿಯ ತೋಟ' ಇತ್ಯಾದಿ ಬೋಳೆ ಮಾತುಗಳನ್ನು ಮಾತ್ರ ಹೇಳಿಕೊಂಡಿರಬೇಕಾ?

ವೆಂಕಟಾಚಲ ಶಾಸ್ತ್ರಿಗಳು ಕಡಿಮೆ ಮೊತ್ತದ ಪ್ರಶಸ್ತಿಗಳನ್ನು ಮಾತ್ರ ವಾಪಸು ಮಾಡಲಾಗಿದೆ ಎಂದು ಲಘುವಾಗಿ ಮಾತಾಡಿದ್ದಾರೆ. ಸಾಹಿತ್ಯದ ಪ್ರಶಸ್ತಿಗಳಿಗೆ ಇರುವುದು ಕರೆನ್ಸಿ ನೋಟುಗಳ ಹಾಗೆ ಅದರ ಮುಖಬೆಲೆ ಮಾತ್ರವೋ? ಅವು ಏನನ್ನೂ ಸಂಕೇತಿಸುವುದಿಲ್ಲವೆ? ಡಾ।। ಶಿವರಾಮ ಕಾರಂತರು 1975ರಲ್ಲಿ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಹೇರಿದ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ತಮ್ಮ ಪದ್ಮಭೂಷಣ ಪ್ರಶಸ್ತಿಯನ್ನು ವಾಪಸು ಮಾಡಿದರು. ನನಗೆ ಗೊತ್ತಿರುವ ಮಟ್ಟಿಗೆ ಕೇಂದ್ರ ಸರಕಾರದ ಪದ್ಮಪ್ರಶಸ್ತಿಗಳು ನಗದು ಮೊತ್ತವನ್ನು ಒಳಗೊಂಡಿಲ್ಲ. ನಗದು ಇರಲಿ, ಇಲ್ಲದಿರಲಿ, ಪದ್ಮಪ್ರಶಸ್ತಿಗಳ ಜೊತೆ ಪದಕವನ್ನಂತೂ ನೀಡಲಾಗುತ್ತದೆ. ದೇಶದ ಅತ್ಯುನ್ನತ ಪ್ರಶಸ್ತಿ ಎಂಬ ಪ್ರತಿಷ್ಠೆ ಇದ್ದರೆ ಅದು ಪದಕ; ಇಲ್ಲವಾದರೆ ಅದು ಒಂದು ತಗಡಿನ ಚೂರು. ಸಾಹಿತಿಗಳು ಪ್ರಶಸ್ತಿಗಳನ್ನು ವಾಪಸು ಮಾಡುವುದರ ಮೂಲಕ ನಾಡಿನ ಕರಾಳ ವಿದ್ಯಮಾನವೊಂದನ್ನು ಪ್ರತಿಭಟಿಸುತ್ತಿರುವುದನ್ನು ಕಡೆಗಣಿಸಿ ಅವರು ವಾಪಸು ಮಾಡಿದ ಹಣದ ಮೊತ್ತ ಕಡಿಮೆಯಲ್ಲವೆ ಎಂದು ವೆಂಕಟಾಚಲಶಾಸ್ತ್ರಿಗಳು ಆ ಸಾಹಿತಿಗಳನ್ನೇ ಹಂಗಿಸುತ್ತಿದ್ದಾರೆ. ನಮ್ಮ ಕಾಲದ ರಾಜಕೀಯ, ಸಾಹಿತಿಗಳ ಕ್ರಿಯಾಶೀಲತೆಯ ಈ ಸೂಕ್ಷ್ಮಗಳನ್ನೆಲ್ಲ ಒರೆಸಿ ಹಾಕುವಷ್ಟು ರೂಕ್ಷವೆ?

ಪ್ರಧಾನ್ ಗುರುದತ್ ಅವರ ಪ್ರಕಾರ ದೇಶದ ಒಟ್ಟು 1640 ಮಂದಿ ಪ್ರಶಸ್ತಿ ಪುರಸ್ಕೃತರ ಪೈಕಿ ಕೇವಲ 42 ಮಂದಿ ಪ್ರಶಸ್ತಿ ಮರಳಿಸಿದ್ದಾರೆ. ಅಂದರೆ ಪ್ರಶಸ್ತಿಯನ್ನು ವಾಪಸು ಮಾಡದಿರುವ 1398 ಪುರಸ್ಕೃತರು ಈ 42 ಜನರ ಅಭಿಪ್ರಾಯವನ್ನು ಬಿಲ್‌ಕುಲ್ ಒಪ್ಪಿಕೊಳ್ಳುವವರಲ್ಲ, ಅವರೆಲ್ಲರೂ ಸಂತುಷ್ಟರು; ದೇಶದ ಇತ್ತೀಚಿನ ಬೆಳವಣಿಗೆಗಳಿಂದ ಅವರಿಗೆ ಆತಂಕವೇ ಆಗಿಲ್ಲ. ಪ್ರಧಾನ್ ಗುರುದತ್ ತಮ್ಮ ಭಾಷಣದಲ್ಲಿ ಈ ಅಂಕಿಸಂಖ್ಯೆಯನ್ನು ನೀಡಿ ಏನನ್ನು ಸಾಬೀತು ಮಾಡಹೊರಟಿದ್ದಾರೆ? ಅವರ ಮಾತು, ಕುವೆಂಪು ವಿಶ್ವವಿದ್ಯಾಲಯದ ಕೆಲವು ಅಧ್ಯಾಪಕರು "ಶಿವಶರಣರ ಅದೆಷ್ಟೋ ಸಾವಿರ ವಚನಗಳ ಪೈಕಿ ಕೆಲವೇ ಕೆಲವು ವಚನಗಳಲ್ಲಿ ಮಾತ್ರ ಜಾತಿಯ ಉಲ್ಲೇಖವಿದ್ದು ಜಾತಿ ಸಮಾನತೆ ವಚನಕಾರರ ಮುಖ್ಯ ಕಾಳಜಿ ಆಗಿರಲೇ ಇಲ್ಲ" ಎಂದು ವಾದಿಸಿದ್ದನ್ನು ನೆನಪಿಸುತ್ತದೆ. ಪ್ರಧಾನ್ ಗುರುದತ್‌ರ ಮಾತಿನ ಸರಣಿಯನ್ನೇ ಹಿಡಿದುಕೊಂಡು ದೇಶದ ಕೋಟ್ಯಾಂತರ ದಲಿತರಲ್ಲಿ ಎಷ್ಟು ಜನ ಕೊಲೆಯಾಗಿದ್ದಾರೆ; ಎಷ್ಟು ದಲಿತ ಮಹಿಳೆಯರ ಮೇಲೆ ಅತ್ಯಾಚಾರ ನಡೆದಿದೆ? ಮುಸ್ಲಿಮರಲ್ಲಿ ಕೋಮು ಹಿಂಸೆಗೆ ಬಲಿಯಾದ ಮುಸ್ಲಿಮರೆಷ್ಟು? ಆ ಸಂಖ್ಯೆ ನಗಣ್ಯ ಎನ್ನಿಸುವಷ್ಟು ಕಡಿಮೆ ಅಲ್ಲವೇ? ಎಂದು ವಾದಿಸಬಹುದು. ಊರಿನಲ್ಲಿ ಮಾರಣಾಂತಿಕವಾದ ಸಾಂಕ್ರಾಮಿಕ ರೋಗವೊಂದು ಹರಡುತ್ತಿದ್ದರೆ ಅದನ್ನು ಮನಗಾಣಲು ಊರಿನ ಎಲ್ಲರೂ ಸಾಯಬೇಕೆ? ಪ್ರಶಸ್ತಿ ವಾಪಸು ಮಾಡಿದವರ ಸಂಖ್ಯೆ ಎಷ್ಟೇ ಇರಲಿ, ಅವರ ಈ ಕ್ರಮ ನಾಡಿಗೆ ತಗುಲಿಕೊಂಡಿರುವ ದ್ವೇಷ ಹಿಂಸೆಗಳ ಸಾಂಕ್ರಾಮಿಕ ರೋಗದ ಬಗ್ಗೆ ಒಂದು ಎಚ್ಚರಿಕೆಯ ಕರೆಗಂಟೆ.

ಪ್ರಧಾನ್ ಗುರುದತ್ ಧರ್ಮಸ್ಥಳದ ತಮ್ಮ ಭಾಷಣದಲ್ಲಿ ಪ್ರಶಸ್ತಿ ಪುರಸ್ಕೃತ ಸಾಹಿತಿಗಳು ತಮಗೆ ಕೊಟ್ಟ ಫಲಕಗಳನ್ನು ಮಾತ್ರ ವಾಪಸು ಮಾಡಿದ್ದಾರೆ, ನಗದು ವಾಪಸು ಮಾಡಿಲ್ಲ ಎಂದು ಹೇಳಿದ್ದಾರೆ. ಪ್ರಶಸ್ತಿ ವಾಪಸು ಮಾಡಿದ ಸಾಹಿತಿಗಳಲ್ಲಿ ಅನೇಕರು ತಾವು ಪ್ರಶಸ್ತಿ ಫಲಕದ ಜೊತೆ ಶಾಲು ಮತ್ತು ಹಣ ಹಿಂದಿರುಗಿಸಿರುವುದಾಗಿ ಪ್ರಕಟಿಸಿದ್ದಾರೆ. ಚಂದ್ರಶೇಖರ ಪಾಟೀಲರು ರಾಜ್ಯ ಸರಕಾರ ತಮಗೆ 2009ರಲ್ಲಿ ನೀಡಿರುವ ಪಂಪ ಪ್ರಶಸ್ತಿ, ಫಲಕ, ಶಾಲು ಮತ್ತು ನಗದು 1 ಲಕ್ಷ ರೂಪಾಯಿಗಳನ್ನು ಹಿಂದಿರುಗಿಸಿರುವುದಾಗಿ ಪತ್ರಿಕಾಗೋಷ್ಠಿ ಕರೆದು ತಿಳಿಸಿದ್ದಾರೆ. ಅಷ್ಟಕ್ಕೆ ಸುಮ್ಮನಾಗದೆ ಅವರು ಪ್ರಶಸ್ತಿಯ ಜೊತೆ ಕೊರಳಿಗೆ ಹಾಕಿದ ಹೂವಿನ ಹಾರವನ್ನು ಮಾತ್ರ ಹಿಂದಿರುಗಿಸಲು ಆಗಲಿಲ್ಲ ಎಂದು ಅಲವತ್ತು ಕೊಂಡಿದ್ದಾರೆ. ಪ್ರಶಸ್ತಿ ವಾಪಸು ಮಾಡಿದ ಕನ್ನಡ ಸಾಹಿತಿಗಳಲ್ಲಿ ಚಂಪಾ ಅವರು ಮೊತ್ತ ಮೊದಲಿಗರಾದರೆ ಬಹುಶಃ ಕೊನೆಯವರು ದೇವನೂರ ಮಹದೇವ; ಅವರು ತಣ್ಣೀರನ್ನು ತಣಿಸಿ ಕುಡಿಯುವ ಸಾವಧಾನಿ. ಅವರ ಸಿಟ್ಟು ಸಾಗರದ ಒಡಲಿನ ಕಿಚ್ಚಿನಂತೆ. ಪ್ರಶಸ್ತಿ ಹಿಂತಿರುಗಿಸುತ್ತ ಮಹದೇವ ಹೇಳಿದ ಮಾತುಗಳಲ್ಲಿ ಅದಕ್ಕೆ ಕಾರಣವಾದ ವಿದ್ಯಮಾನಗಳ ಬಗ್ಗೆ ಅವರ ವಿಷಾದ ಮಡುಗಟ್ಟಿದೆ. ಪ್ರಧಾನ್ ಗುರುದತ್, ವೆಂಕಟಾಚಲ ಶಾಸ್ತ್ರಿಗಳಂತಹ ಹಿರಿಯರು ಮಹದೇವರ ಮಾತುಗಳನ್ನು ವ್ಯವಧಾನದಿಂದ ಕೇಳಿಸಿಕೊಳ್ಳಬೇಕು. ಪ್ರಚಾರದ ಹಂಬಲ, ರಾಜಕೀಯ ಹುನ್ನಾರ ಯಾವುದೂ ಅವರ ಮಾತುಗಳಲ್ಲಿ ಕಾಣುವುದಿಲ್ಲ. ಪ್ರಶಸ್ತಿ ಹಿಂದಿರುಗಿಸುವುದು ತನ್ನ ಒಳಜೀವದ ಆರೋಗ್ಯಕ್ಕೆ ಅಗತ್ಯವಾದ ಕಹಿ ಕಷಾಯದಂತಹ ಪಥ್ಯ ಎಂಬ ಭಾವ ಮಹದೇವ ಅವರ ಮಾತುಗಳಲ್ಲಿ ಒಡಮೂಡಿದೆ. ಪ್ರಶಸ್ತಿ ವಾಪಸು



42 ಲೇಖಕರಲ್ಲಿ ನಗದು ಮಾತ್ರ ತಮ್ಮಲ್ಲಿ
ಕೊಂಡಿರುವವರ ಸಂಖ್ಯೆಯನ್ನು ಪ್ರಧಾನ್ ಗುರುದತ್
ಆದರೆ ಪ್ರಶಸ್ತಿ ಮತ್ತು ಅದರ ಜೊತೆ ಬರುವ
ಹಿಂತಿರುಗಿಸಿದ ಚಂಪಾ ಮತ್ತು ದೇವನೂರ ಮಹದ
ಇನ್ನೂ ಇಬ್ಬರು ಲೇಖಕರು ನನಗೆ ಗೊತ್ತು.

ಅವರಲ್ಲಿ ಒಬ್ಬರು ನನ್ನ ಗೆಳೆಯ ರಘುಪತಿ
ಅಥವ ನಾವೆಲ್ಲ ಕರೆಯುವ ಹಾಗೆ ಆರ್ಕೆ
ಅವರು ಮಣಿಪಾಲದಲ್ಲಿ ಮೂರು ದಶಕಗಳಿಗ
ಕನ್ನಡ ಪ್ರಾಧ್ಯಾಪಕರಾಗಿದ್ದು ಈಗ ನಿವೃತ್ತರಾಗಿ
ಸ್ಥಳ ನಾಮ ಸಂಶೋಧನೆ ಅವರ ವಿಶೇಷ
ವಿಷಯವಾಗಿದ್ದು ಅದರಲ್ಲಿ ಅವರಿಗೆ ಡ
ಪದವಿಯೂ ಸಂದಿದೆ. ನಮ್ಮ ನಾಡಿನ ಊರು
ಹೆಸರು ಜನರ ಲೌಕಿಕ ಬದುಕಿನ ದುಡಿಮೆ, ಕೃಷಿ
ವಲಸೆ ಹಾಗು ಭೌಗೋಳಿಕ, ಪ್ರಾಕೃತಿಕ
ಉತ್ಪನ್ನಗಳಾಗಿವೆ. ಸ್ಥಳನಾಮಗಳ ಸಂಸ್ಕೃತ ರ
ಚಾರಿತ್ರಿಕ ವ್ಯಕ್ತಿಗಳ ಹೆಸರನ್ನು ಊರಿನ ಹಾಲಿ ಹ
ಬದಲಿಯಾಗಿ ಬಳಸುವುದು, ಅವೈದಿಕ ಶ್ರದ್ಧೆಯ
ಬ್ರಾಹ್ಮಣೀಕರಣಗೊಳಿಸುವುದು ಮುಂತಾದ
ಪ್ರತಿಷ್ಠಿತ ವರ್ಗಗಳ ಯಜಮಾನಿಕೆ ಹಾಗು ದ
ಸಾಂಸ್ಕೃತಿಕ ರಾಜಕಾರಣ ಎಂದು ಆರ್ಕೆ ತಮ್ಮ ಸಂ
ಮೂಲಕ ವಿದ್ವತ್ಪೂರ್ಣವಾಗಿ ನಿರೂಪಿಸಿ ದ್ದಾರೆ.
ಸ್ಥಳಪುರಾಣ, ಐತಿಹ್ಯಗಳೇ ಚರಿತ್ರೆ ಎಂದು ಹಠ
ಗೊಡ್ಡು ಪಂಡಿತರ ವಿರೋಧ ವನ್ನೂ
ಕಟ್ಟಿಕೊಂಡಿದ್ದಾರೆ. ಆರ್ಕೆ ಬಂಡಾಯ ಚಳವಳಿ,
ಹಾಗು ಎಡ ರಾಜಕೀಯ ಚಟುವಟಿಕೆಗಳಲ್ಲಿ
ಭಾಗವಹಿಸಿದವರು. ಸಂಶೋಧಕನ ಜಿಗುಟು
ಎಡ ಪಂಥೀಯರಿಗೆ ಆರೋಪಿಸಲಾಗುವ ಹ
ಎರಡೂ ಅವರಲ್ಲಿ ಧಾರಾಳವಾಗಿ ಇದೆ
ವಿಮರ್ಶಕರೂ ಆಗಿರುವ ಆರ್ಕೆ ಅವರ '

ಅಸಹಿಷ್ಣುತೆ-ಅವಾರ್ಡ್ ವಾಪ

ದೇಶದಲ್ಲಿ ಹೆಚ್ಚುತ್ತಿರುವ ಅಸಹಿಷ್ಣುತೆಯನ್ನು ಪ್ರತಿಭಟಿಸಿ ಹಲವರು ಲೇಖಕರು ತಮ್ಮ ಪ್ರಶಸ್ತಿಗಳನ್ನು ಹಿಂದಿರುಗಿಸುವುದು ದೊಡ್ಡ ಮಟ್ಟದ ಚರ್ಚೆಯನ್ನು ಹುಟ್ಟು ಹಾಕಿದೆ. ಪರ, ವಿರೋಧಿ ನಿಲುವುಗಳು ವ್ಯಕ್ತವಾಗಿವೆ. ಹೀಗೆ ಪ್ರಶಸ್ತಿಗಳನ್ನು ವಾಪಸು ಮಾಡುವುದು ಒಂದು ತಕ್ಷಣದ, ಭಾವನಾತ್ಮಕ ಪ್ರತಿಕ್ರಿಯೆ. ಅದರ ಹಿಂದಿನ ಆಶಯಗಳನ್ನು ಅವರ ಪ್ರಾಮಾಣಿಕತೆಯನ್ನು ಪ್ರಶ್ನಿಸುವುದು ಕುಚೋದ್ಯವೇ ಸರಿ. ಆದರೆ ಈ ಕೃತ್ಯದ ಪ್ರಯೋಜನ ಮತ್ತು ಪರಿಣಾಮಗಳ ಬಗ್ಗೆ ನನ್ನನ್ನು ಕಾಡುತ್ತಿದ್ದ ಅನುಮಾನಗಳು ಈಗ ನಿಜವಾಗುತ್ತಿವೆ ಎಂದೆನಿಸುತ್ತಿದೆ.

ಈ ದೇಶದಲ್ಲಿ ಬೇರೆ ಎಲ್ಲೆಡೆಯಲ್ಲಿನ ಹಾಗೆ, ಅಸಹನೆಗೆ ದೊಡ್ಡ ಇತಿಹಾಸವೇ ಇದೆ. ಆಳುವವರು ತಮ್ಮ ಅಧಿಕಾರವನ್ನು ಭದ್ರಪಡಿಸಿಕೊಳ್ಳಲು ತಮ್ಮನ್ನು ಪ್ರಶ್ನಿಸುವವರ ಮೇಲೆ ನೇರವಾಗಿ ಅಥವಾ ತಮ್ಮ ಹಿಂಬಾಲಕರ ಮೂಲಕ ಮುಗಿಬೀಳುವುದು ನಡೆದೇ ಇದೆ. ಭಾರತದಲ್ಲಿ ಧಾರ್ಮಿಕ ಅಸಹಿಷ್ಣುತೆಯೇ ಅಲ್ಲದೆ ಜಾತಿಯಾಧಾರಿತ ಅಸಹನೆ ಮತ್ತು ಕ್ರೌರ್ಯ ಜನಜೀವನದ ಭಾಗವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಧಾರ್ಮಿಕ ಅಸಹಿಷ್ಣುತೆಯ ಮಾತೇ ಮುನ್ನೆಲೆಗೆ ಬಂದು ಜಾತಿಯ ಹೆಸರಿನಲ್ಲಿ ನಡೆಯುವ, ನಡೆಯುತ್ತಲೇ ಇರುವ ದೌರ್ಜನ್ಯಗಳು ಜನರ ಗಮನಕ್ಕೆ ಬಾರದೇ ಹೋಗುತ್ತಿವೆ. ಪ್ರಶಸ್ತಿ ವಾಪಸಿ ಒಂದು ಚಳವಳಿಯ ರೂಪ ಪಡೆದುಕೊಂಡಿದ್ದು ಇಂದಿನ ಚರ್ಚೆ ಎಲ್ಲವೂ ಕೇವಲ ವೈಯಕ್ತಿಕ ನೆಲೆಗಳಿಗೆ ಸೀಮಿತವಾಗಿದ್ದು, ಸಮಸ್ಯೆಗಳ ಮೂಲಗಳನ್ನು ಶೋಧಿಸುವ ಕೆಲಸವಾಗುತ್ತಿಲ್ಲ. ಹೀಗೆ ಪ್ರಶಸ್ತಿಗಳನ್ನು ವಾಪಸು ಮಾಡುವವರ ಪ್ರಾಮಾಣಿಕತೆಯನ್ನು ಪ್ರಶ್ನಿಸುವ ಅವರ ರಾಜಕೀಯ ನಿಲುವುಗಳನ್ನು ಅನುಮಾನಿಸುವ ಪ್ರಯತ್ನಗಳಿಗೆ ಉತ್ತರ ನೀಡುವುದೇ ಪ್ರಾಮುಖ್ಯತೆಯನ್ನು ಪಡೆದು, ಅವರ ಕೃತ್ಯಗಳ ಹಿಂದಿನ ಕಾರಣಗಳ ವಿಶ್ಲೇಷಣೆ ಹಿಂದಕ್ಕೆ ಸರಿದಿದೆ.



ಸಂಘ ಪರಿವಾರದ ಜನಕ್ಕೆ ಬೇಕಾಗಿರುವುದೂ ಅದೇ. ತಮ್ಮನ್ನು ವಿರೋಧಿಸುವ ಬರಹಗಾರರನ್ನು ಗುರಿಯಾಗಿಸಿ ವೈಯಕ್ತಿಕವಾಗಿ, ಭೌತಿಕವಾಗಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ದಾಳಿ ನಡೆಸುವ ಅವಕಾಶವನ್ನು ಅವರು ಚೆನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. 'ಪ್ರಶಸ್ತಿ ವಾಪಸಿ'ಯಾಗದಿದ್ದರೂ ಅವರು ಆ ಕೆಲಸಗಳನ್ನು ಮಾಡುತ್ತಲೇ ಇದ್ದರು ಎಂಬುವುದರಲ್ಲಿ ಅನುಮಾನವಿಲ್ಲ. ಆದರೆ ಈಗ ಮುಖ್ಯ

ಸಮಸ್ಯೆಯಿಂದ ಗಮನವನ್ನು ಬೇರೆಡೆಗೆ ಸೆ
ಅವರುಗಳಿಗೆ ನೆಪವೊಂದು ಸಿಕ್ಕ ಹಾಗಾಯಿ
ಕೆಲವರು ಪ್ರಸಿದ್ಧ ವ್ಯಕ್ತಿಗಳು, ಯಾವುದೋ
ತೇಲಿ ಬಿಡುವ ಕೆಲವು ಮಾತುಗಳೂ ಅವರ
ಬಾಣಗಳನ್ನು ತುಂಬುತ್ತವೆ. ರೋಚಕತೆಯ
ನರಳುವ ದೃಶ್ಯ ಮಾಧ್ಯಮಕ್ಕೆ ಹಬ್ಬದೂಟ.

ಈ ಗಲಾಟೆಯಲ್ಲಿ ಇತರ ಸಾಮಾಜಿಕ, ಆರ್ಥಿ
ಹಿನ್ನೆಲೆಗೆ ಸರಿದಿವೆ. ದಾದ್ರಿ ಘಟನೆಯ ಸಂದ
ಉತ್ತರ ಪ್ರದೇಶದ ಹಳ್ಳಿಯೊಂದರಲ್ಲಿ ದೇವ
ಪ್ರವೇಶ ಮಾಡಲು ಯತ್ನಿಸಿದ ದಲಿತ, ವೃದ್ಧ ದ
ಕೊಲೆಯ ಬಗ್ಗೆ ಎಲ್ಲರಿಗೂ ತಿಳಿದಿದೆ. ಆದರೂ
ಹೆಚ್ಚಿಗೆ ಚರ್ಚೆಯ ಭಾಗವಾಗುತ್ತಿಲ್ಲ. ಬಾ
ಧ್ವಂಸ, ಗುಜರಾತ್ ನರಮೇಧ, ಇತರ
ದ್ವೇಷಪೂರಿತ ದಾಳಿಗಳು ಧಾರ್ಮಿಕ
ನಿದರ್ಶನಗಳಾಗಿದ್ದಂತೆ, ಬೆಲ್ಚಿ ಲಕ್ಷ್ಮಣಪು
ಕಂಬಾಲಪಲ್ಲಿ, ಚುಂಡೂರು, ಕಾರಂಚೇಡು,
ಮತ್ತು ಇತ್ತೀಚಿನ ಚಾಮರಾಜನಗರ ಜಿಲ್ಲೆ
ದಲಿತರ ಕೊಲೆಗಳ ಸರಣಿ ಜಾತಿ ದೌರ್ಜನ್ಯಗ
ಸಂಕೇತಗಳು. ವಿಪರ್ಯಾಸವೆಂದರೆ ಇವು
ಚರ್ಚೆ ಮೂಲೆಗೆ ಬಿದ್ದಿದೆ.

ಈ ಎಲ್ಲ ಬೆಳವಣಿಗೆಗಳ ನಡುವೆ ಕೋ
ನಾಯಕ ಜಗತ್ತಿನ ಕಾರ್ಪೊರೇಟ್ ಶಕ್ತಿ
ಕಂದನಾಗಲು ಹೊರಟು ಸ್ವಪ್ರತಿಷ್ಠೆಯನ್ನು
ತನ್ನ ಅನುಯಾಯಿಗಳಲ್ಲಿ ಹೊಸ

ಎಂಬ ಕೃತಿಗೆ 2008ರ ಸಾಲಿನ ರಾಜ್ಯ ಸಾಹಿತ್ಯ ...ಪ್ರಶಸ್ತಿ ದೊರೆತಿದ್ದು ಆರ್ಕೆ ಅವರು ಈ ಪ್ರಶಸ್ತಿ ...ಗೂ ನಗದು 5000 ರೂಪಾಯಿಗಳನ್ನು ಇದೇ ...ರ್ 30ರಂದು ವಾಪಸು ಮಾಡಿದರು. ಆ ...ಲೇ ಕೆಲವು ಕೇಸರಿ ಕಟ್ಟಾಳುಗಳು ಪ್ರಶಸ್ತಿ ...ಸಿದವರು ಅದರ ಮೊತ್ತವನ್ನು ಮಾತ್ರ ತಾವೇ ...ದಿದ್ದಾರೆ ಎಂದು ಪುಕಾರು ಮಾಡಿದ್ದರಿಂದ ಆರ್ಕೆ ...ಪಸು ಮಾಡಿದ ಹಣಕ್ಕೆ ತಮಗೆ ಅಗತ್ಯವಾಗಿ ...ಕು ಎಂದು ಒತ್ತಾಯಿಸಿ ಅಕಾಡೆಮಿಗೆ ಒಂದು ... ರವಾನಿಸಿದರು. ಇವರು ಪ್ರಶಸ್ತಿಯನ್ನು ...ಸಿದ್ದು ಎಲ್ಲೂ ಸುದ್ದಿಯಾಗಲಿಲ್ಲ. ಆರ್ಕೆ ಆ ಬಗ್ಗೆ ...ಕೊಳ್ಳದೆ ತಮ್ಮ ಪಾಡಿಗೆ ತಾವಿದ್ದರು. ಆದಾಗಿ ...ಂಗಳನಂತರ ಉಡುಪಿಯ ಪತ್ರಕರ್ತರೊಬ್ಬರಿಗೆ ...ಮಾಳಿವು ಸಿಕ್ಕ ನಂತರ ಆ ಸುದ್ದಿ ಎಲ್ಲೆಡೆ ಬಿತ್ತರ ... ಈ ನಡುವೆ ಆರ್ಕೆ ರಾಜ್ಯ ಸಾಹಿತ್ಯ ...ಯಿಂದ ರಶೀದಿಯನ್ನು ಪಡೆದಿದ್ದಾರೆ. 'ಪ್ರಶಸ್ತಿಯ ... ಏನಾಯಿತು?' ಎಂದು ತನಿಖೆ ಮಾಡುತ್ತಿರುವ ... ಪುರುಷೋತ್ತಮರೆಲ್ಲ ಇದನ್ನು ಗಮನಿಸಬೇಕು.

... ಹೇಳಬಯಸುವ ಪ್ರಶಸ್ತಿ ವಾಪಸಾತಿಯ ... ನಿದರ್ಶನ, ಪ್ರಶಸ್ತಿಯ ಹಣದ ಜೊತೆ ಸ್ವಂತದ ... ಕಳೆದುಕೊಂಡು, ಅದೂ ಸಾಲದ್ದಕ್ಕೆ ಕೋಲು ...ಕೊಡೆಸಿಕೊಂಡ ಇನ್ನೊಬ್ಬ ಗೆಳೆಯರದ್ದು. ಹಂಪಿ ...ವಿದ್ಯಾಲಯದ ಪ್ರಾಧ್ಯಾಪಕ ಹಾಗೂ ಸುಪ್ರಸಿದ್ಧ ...ರಹಮತ್ ತರೀಕೆರೆ ಅವರ 'ಕತ್ತಿ ಅಂಚಿನ ...ತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ 2010ರ ಪ್ರಶಸ್ತಿ ನೀಡಿತ್ತು. ರಹಮತ್ ಈ ಪ್ರಶಸ್ತಿಯ ... 1 ಲಕ್ಷ ರೂಪಾಯಿಗಳಲ್ಲಿ 50 ಸಾವಿರ ...ಗಳನ್ನು ಕರ್ನಾಟಕ ಕೋಮು ಸೌಹಾರ್ದ ...ವೇದಿಕೆಗೆ ನೀಡಿದ್ದರು. ಆದರೆ ಅಕಾಡೆಮಿಗೆ ಪ್ರಶಸ್ತಿ ...ಕೊಡುವಾಗ ಅವರು ಫಲಕ ಇತ್ಯಾದಿಗಳ ಜೊತೆ ...ರೂಪಾಯಿಗಳನ್ನು ಪೂರ್ತಿ ಕೊಟ್ಟುಬಿಟ್ಟರು.

ಕೋಮು ಸೌಹಾರ್ದ ವೇದಿಕೆ ಅವರಿಂದ ...ಪಡೆದ ಹಣವನ್ನು ವಾಪಸು ಮಾಡಲಿಲ್ಲ; ವಾಪಸು ...ಯೋಚನೆಯಲ್ಲೂ ಇಲ್ಲ. ವೆಂಕಟಾಚಲ ಶಾಸ್ತ್ರಿಗಳಿಗೆ ...ಪಾಯಿ ಸಹ ಸಣ್ಣ ಮೊತ್ತವೇ ಆಗಿರಬಹುದು. ...ಮ್ಮಂತಹವರಿಗೆ ಅದು ಒಟ್ಟಿಗೇ ಸಿಗುವುದು ...ಮಾತ್ರ. ಅಂತಹದ್ದರಲ್ಲಿ ಪ್ರಶಸ್ತಿ ವಾಪಸು ಮಾಡಿ ...ಗೆ ಅಸಲಿಗೇ ಸಂಚಕಾರ ಬಂದಿತು; ಜೊತೆಗೆ ... ಏಜಂಟ್, ಅಸಹಿಷ್ಣುತೆಯ ಬೊಬ್ಬೆ ...ವವರು, ವಿಚಾರವಂತಿಕೆಯ ವೇಷ ಹಾಕಿಕೊಂಡ ... ಇವೇ ಮುಂತಾದ ಪ್ರಶಸ್ತಿಗಳೂ ಹೆಚ್ಚುವರಿ ...ವರಿಗೆ ಪ್ರಧಾನ್ ಗುರುದತ್ ಅವರ ಕೃಪೆಯಿಂದ ...ತು. ರಹಮತ್ ಅವರಿಗೆ ಇದೆಲ್ಲ ಬೇಕಿತ್ತಾ?


■ ಜಿ. ರಾಜಶೇಖರ

ಪೇಜಾವರರ ರಿವರ್ಸ್ 'ಅಟ್ರಾಸಿಟಿ' ಮತ್ತು ಆರ್ಯ ದ್ರಾವಿಡ ಸಿದ್ಧಾಂತ

ಸನಾತನವಾದಿಗಳ ಕಣ್ಮಣಿ ಪೇಜಾವರರು ಐದನೇ ಬಾರಿಗೆ ಪರ್ಯಾಯ ಪೀಠವನ್ನೇರುವ ಸಂಭ್ರಮದಲ್ಲಿದ್ದಾರೆ. ಬದುಕಿನ ಮುಸ್ಸಂಜೆ ಕಾಲದಲ್ಲಿರುವ (ಅವರ ಹುಟ್ಟೂರು ರಾಮಕುಂಜದಲ್ಲಿ ಸಮಾಧಿ ಅರ್ಥಾತ್ ಪೇಜಾವರ ಬೃಂದಾವನ ಸಿದ್ಧಗೊಳ್ಳುತ್ತಿರುವ ಸುದ್ದಿಯೂ ಇದೆ) ಪೇಜಾವರರಿಗೆ ವಿಸ್ಮೃತಿಗೊಳಪಡಿಸಿದ ಶೂದ್ರಶಕ್ತಿಯನ್ನು ಬಳಸಿಕೊಂಡು ಭಾರತವನ್ನು ಮರಳಿ ವೈದಿಕ ಗುಲಾಮಗಿರಿಗೆ ಸಂಪೂರ್ಣವಾಗಿ ತಳ್ಳುವ ತವಕ ಮಾತ್ರ ಇನ್ನೂ ನಿಂತಂತಿಲ್ಲ. ಕಳೆದ ಸಂಚಿಕೆಯಲ್ಲಿನ (16-12-2015) "ಬಾಬ್ರಿ ಮಸೀದಿ ಧ್ವಂಸ- ಬೆಚ್ಚಿ ಬೀಳಿಸುವ ಮಾಹಿತಿಗಳು" ಲೇಖನದಲ್ಲಿ ಸುರೇಶ್ ಭಟ್ ಬಾಕ್ರಬೈಲ್ ಅವರು ಇಂತಹ ವಿಚಾರದ ಕುರಿತಾಗಿ ಪೇಜಾವರ ಶ್ರೀಗಳ ಉತ್ಸುಕತೆಯ ಸಹಭಾಗಿತ್ವದ 'ಬೆಚ್ಚಿಬೀಳಿಸುವಂತಹ ಸಂಗತಿ'ಗಳ ಬಗ್ಗೆ ವಿಸ್ತೃತವಾಗಿ ಬರೆದಿದ್ದರು. ತನ್ನ ಕಾರ್ಯಸಾಧನೆಗಾಗಿ ಪಕ್ಕಾ ಕೌಟಿಲ್ಯನಂತೆ ಯೋಚಿಸಿ ಕಾರ್ಯವನ್ನು ನಡೆಸುವ ಪೇಜಾವರ ಸ್ವಾಮಿಗಳು ಈಗಲೂ ಜೀವಂತವಿರುವ ಐತಿಹಾಸಿಕ ಸತ್ಯವೊಂದರ ವಿರುದ್ಧವಾಗಿ ತನ್ನ ಹೊಸ ಸಿದ್ಧಾಂತವನ್ನು ಹಬ್ಬಿಸಲು ಶ್ರಮಪಡುತ್ತಿದ್ದಾರೆ. ಅದು ಅಸ್ಪೃಶ್ಯತೆಗೆ ದ್ರಾವಿಡರೇ ಕಾರಣ ವಿನಃ ಆರ್ಯರಲ್ಲ ಎಂಬ ಹೊಸ ಪೇಜಾವರ ಸಿದ್ಧಾಂತ. ಕೋತಿ ತಾನು ತಿಂದು ಮೇಕೆ ಮೂತಿಗೆ ಒರೆಸುವ ವೈದಿಕರ ಹಳೆಯ ತಂತ್ರವಿದು. ಉದಾ: ಒಡೆದು ಆಳುವ ನೀತಿ ವೈದಿಕರ ಕೊಡುಗೆಯೆನ್ನುವುದಕ್ಕೆ ಐತಿಹಾಸಿಕ ದಾಖಲೆಗಳಿದ್ದರೂ ಅದು ಬ್ರಿಟಿಷರ ತಂತ್ರವೆಂದು ಜನಮಾನಸದಲ್ಲಿ ಯಶಸ್ವಿಯಾಗಿ ಹಬ್ಬಿಸಿದ್ದು. ಅಷ್ಟೇ ಯಾಕೆ ಜಾತಿಯತೆ, ದೇವದಾಸಿ, ಬಾಲ್ಯವಿವಾಹ, ಸತಿ ಪದ್ಧತಿಗಳೆಲ್ಲವೂ ಮೊಗಲರು ಬ್ರಿಟಿಷರ ಕಾರಣದಿಂದಾಗಿಯೇ ಹುಟ್ಟಿಕೊಂಡಂತವುಗಳೆ ವಿನಃ ಇದರಲ್ಲಿ ಬ್ರಾಹ್ಮಣರ ಪಾತ್ರ ಕಿಂಚಿತ್ತೂ ಇಲ್ಲ ಎಂಬ ಸಿದ್ಧಾಂತಗಳೂ ಚಾಲ್ತಿಯಲ್ಲಿವೆ.

ಉಡುಪಿಯ ಪೇಜಾವರ ಮಠದಲ್ಲಿ ಅನುಮಾನಾಸ್ಪದವಾಗಿ ಸತ್ತ ಸ್ವಾಮಿಯೊಬ್ಬನ ಉತ್ತರಾಧಿಕಾರಿಯಾಗಿ ಸಮೀಪ ಸಂಬಂಧಿಯೊಬ್ಬರ ದೂ(ದು)ರಾಲೋಚನೆಗನುಗುಣವಾಗಿ ಸ್ವಾಮೀಜಿಯಾದ ಆರು ವರ್ಷದ ವೆಂಕಟರಮಣ ಅರ್ಥಾತ್ ಪೇಜಾವರರು ಈ 80ರ ಪ್ರಾಯದಲ್ಲೂ ನಮ್ಮ ಕಣ್ಮುಂದೆ ಇರುವುದು ಅಸ್ಪೃಶ್ಯನೊಬ್ಬನ ಮಾನವೀಯತೆಯಿಂದಾಗಿ. ವಿಚಿತ್ರವೆಂದರೆ ಬಾಲ್ಯದಲ್ಲಿ ಬಾವಿಗೆ ಬಿದ್ದಂತಹ ಬಾಲಕ ಪೇಜಾವರರನ್ನು ಮೇಲೆತ್ತಿದ್ದು ಮಾತ್ರ ಆ ಅಸ್ಪೃಶ್ಯನಲ್ಲ. ಮುಕ್ಕಾಲು ಶತಮಾನದ ಹಿಂದೆ ದಲಿತರ ನೆರಳೂ ಬ್ರಾಹ್ಮಣರ ಮೇಲೆ ಬೀಳಬಾರದಂತಹ ಅಸ್ಪೃಶ್ಯತೆಯ ಕಾಲದಲ್ಲಿ ನಿರ್ಜನ ಪ್ರದೇಶದ ಬಾವಿಯಲ್ಲಿ ಸಾವುಬದುಕಿನ ನಡುವೆ ಒದ್ದಾಡುತ್ತಿದ್ದ ಈ ಪರಿಚಿತ ಬ್ರಾಹ್ಮಣರ ಹುಡುಗನನ್ನ ಇಳಿದು ಮುಟ್ಟಿ ಎತ್ತಲೂ ಭಯ ಪಟ್ಟ ದಲಿತ ನಂತರ ದೂರದಲ್ಲಿದ್ದ ಮೇಲ್ಜಾತಿಯವರನ್ನು ಕೂಗಿ ಕರೆತಂದು ಪೇಜಾವರರನ್ನು ಬದುಕಿಸಿದ್ದ. ಒಂದು ವರ್ಗದ ಮೇಲರಿಮೆಯ ದುರಹಂಕಾರೀ ಮನೋಭಾವವನ್ನೂ ಮರೆತು ಜೀವ ಕಾಪಾಡಿದ ದಲಿತನೆಲ್ಲಿ? ಇಂತಹ ಜೀವನಾನುಭವಗಳಿದ್ದೂ ಕೂಡ ಅಸ್ಪೃಶ್ಯತೆಗೆ ನಾವಲ್ಲ ನೀವುಗಳೇ ಕಾರಣ ಎಂದು ತಿಪ್ಪೆ ಸಾರಿಸುವ ಕೃತಘ್ನ ಸುಳ್ಳುಗಾರ ಪೇಜಾವರರಂತವರೆಲ್ಲಿ?

ರಾಹುಲ್ ದ್ರಾವಿಡನೋ, ತೆಂಡೂಲ್ಕರನೋ ಕ್ರಿಕೆಟ್



ಚೆಂಡನ್ನು ಎಸೆಯುವಾಗ ಗುರಿ ತಪ್ಪಬಹುದು ಆದರೆ ದೇವಾಲಯದಲ್ಲಿ ಕಾಣಿಕೆಗೆ ಪ್ರತಿಯಾಗಿ ಪ್ರಸಾದ ಎಸೆಯುವ ಅರ್ಚಕರ ಗುರಿ ಮಾತ್ರ ಒಂದಿನಿತೂ ಮಿಸ್ಸಾಗದಂತೆ ಇರುತ್ತದೆ. ಕೆಲ ವರ್ಷಗಳ ಹಿಂದೆ ಬಂಟ ಜನಾಂಗದ ಸ್ವಾಮಿಯೊಬ್ಬರಿಗೆ ಅರ್ಚಕನೊಬ್ಬ ಈ ರೀತಿ ಪ್ರಸಾದ ಎಸೆದದ್ದಕ್ಕೆ ಆ ಸ್ವಾಮಿ ಶ್ಯಾನೆ ಬೇಸರ ಮಾಡಿಕೊಂಡ ಬಗ್ಗೆ ಕರಾವಳಿಯಲ್ಲಿ ಸಣ್ಣ (ಆ ಸ್ವಾಮಿ ಹಿಂದೂತ್ವದ ವಕ್ತಾರನೇ ಆಗಿರುವ ಕಾರಣ ರಾದ್ಧಾಂತವಾಗಲಿಲ್ಲ) ಸುದ್ದಿಯಾಗಿತ್ತು.

ಲಕ್ಷಾಂತರ ವರ್ಷಗಳ ಹಿಂದೆ ಮಾನವನು ಒಂದೇ ಮೂಲದಿಂದ ಬೇರೆ ಬೇರೆ ಬಗೆಗಳಲ್ಲಿ ಹಂಚಿಹೋಗಿದ್ದರೂ ವರ್ಷಾನುಗಟ್ಟಲೆ ಬೇರೆ ಬೇರೆ ಪ್ರದೇಶಗಳಲ್ಲಿ ವಲಸೆಗಳ ಮೂಲಕ ನೆಲೆ ನಿಂತು ವಿಭಿನ್ನವಾದಂತಹ ಪ್ರತ್ಯೇಕ ಅಸ್ತಿತ್ವಗಳನ್ನು ರೂಪಿಸಿಕೊಂಡಿದ್ದುಂಟು. ಇಂತಹ ವಿಭಿನ್ನವಾಗಿ ರೂಪುಗೊಂಡ ಸಂಪ್ರದಾಯ, ಭಾಷೆ, ಚಹರೆಯೇ ಮೊದಲಾದ ಮೂಲಗಳನ್ನಾಧರಿಸಿದ ಸಮಾಜ ಶಾಸ್ತ್ರೀಯ ಅಧ್ಯಯನಗಳು ಈ ಆರ್ಯ-ದ್ರಾವಿಡ ವಿಭಿನ್ನತೆಯನ್ನು ಪ್ರತ್ಯೇಕವಾಗಿಯೇ ಗುರುತಿಸಿವೆ. ಭಾರತ ಉಪಖಂಡದಲ್ಲಿ ಪ್ರತ್ಯೇಕ ಪ್ರತ್ಯೇಕ ಕಾಲಮಾನಗಳಲ್ಲಿ ನೆಲೆಯೂರಿದ ಈ ಎರಡು ಜನಾಂಗಗಳಲ್ಲಿ ಮೊದಲಿಗೆ ತಳವೂರಿದ್ದು ದ್ರಾವಿಡರು ಎಂಬುವುದಕ್ಕೆ ಅನೇಕ ಪುರಾತತ್ವ ಉತ್ಖನನಗಳು ಹಾಗು ಇನ್ನಿತರ ಸಂಶೋಧನೆಗಳು ಸಾಬೀತುಪಡಿಸಿವೆ. (ಉದಾ- ವಿಶ್ವವಿಖ್ಯಾತ ಜೆನೆಟಿಕ್ ವಿಜ್ಞಾನಿ ಡಾ. ಸ್ಪೆನ್ಸರ್ ವೆಲ್ಸ್ ರ 'The journey of Man - A Genetic Odyssey' ಸಂಶೋಧನಾ ಗ್ರಂಥದಲ್ಲಿ ಈ ಬಗೆಯ ವೈಜ್ಞಾನಿಕ ವಿವರಗಳಿವೆ.) ಈ ರೀತಿಯಾಗಿ ನಂತರ ಉಪಖಂಡಕ್ಕೆ ಕಾಲಿಟ್ಟ ಆರ್ಯ ಜನಾಂಗ ಸಮಾಜದ ಮೇಲೆ ಮೇಲುಗೈ ಸಾಧಿಸಿದೆ ಎಂದಮಾತ್ರಕ್ಕೆ ಎಲ್ಲವೂ ಅವರದ್ದೇ ಎಂದಾಗದು ತಾನೆ? ಬಿಳಿ ಚರ್ಮದ ಈಸ್ಟ್ ಇಂಡಿಯಾ ಕಂಪನಿ ಸ್ಥಾಪಿಸಿಬಂದ ಬ್ರಿಟಿಷರು 1947 ರವರೆಗೆ ಎಲ್ಲದಕ್ಕೂ ಅವರದ್ದೇ ಅಧಿಕಾರ ಇತ್ತು ಎಂದಮಾತ್ರಕ್ಕೆ ಆ ಕಾಲದಲ್ಲಿ ಬ್ರಿಟಿಷರೇ ಇಲ್ಲಿನ ನಿಜ ನಿವಾಸಿಗಳು ಎಂದಿದ್ದರೆ ಅದು ಐತಿಹಾಸಿಕ ಸತ್ಯವಾದೀತೇ? ಅಮೆರಿಕ ಕಂಡುಹಿಡಿದವನು ಕೊಲಂಬಸ್, ಅಮೆರಿಕ ಹೆಸರಿಗೆ ಕಾರಣನಾದವನು ಅಮೆರಿಗೋ ವೆಸ್ಪುಸಿ ಹಾಗು ನಾವೆಲ್ಲ ಅಮೆರಿಕನ್ನರು ಅದು ಇದು ಎಂದು ಈಗಿನ ಅಮೆರಿಕನ್ನರು ಏನೇ ಹೇಳಿಕೊಂಡರೂ ಕೊಲಂಬಸ್ ಹೋಗುವುದಕ್ಕೂ ಮೊದಲು ಅಲ್ಲಿ ಅಲ್ಲಿನದ್ದೇ ಆದ ಮೂಲನಿವಾಸಿ ಜನರಿದ್ದರು ತಾನೇ? ಮಾಯನ್ನರು- ಅಜ್‌ಟೆಕ್ ಜನಾಂಗದವರಂತೆ ಮುಂದುವರೆದವರೂ ಅವರಾಗಿದ್ದರು ಎಂಬ ಐತಿಹಾಸಿಕ ಸತ್ಯವನ್ನು ಮುಚ್ಚಿಡಲಾದೀತೇ? ಕಾಲ ಪ್ರಭಾವಗಳ ಅಧಿಕಾರ ಹಿಡಿತಗಳು ಬೇರೆ. ವಾಸ್ತವಗಳು ಬೇರೆ.

ಮೊನ್ನೆ ಕೆಲ ಸಂಘಟನೆಗಳು ಅಮೀರ್ ಖಾನ್‌ಗೆ ಪಾಕ್ ಟಿಕೆಟನ್ನು ಖರೀದಿಸಿದ್ದವು. (ಜೈನರ ಪರ್ಯೂಷಣಾ ವ್ರತದ ಬಗ್ಗೆ ಸಾಮ್ನಾದಲ್ಲಿ ಕಿಡಿ ಕಾರುತ್ತಾ ಸಾಬರಿಗೆ ಪಾಕಿಸ್ತಾನವಿದೆ ನಿಮಗೆ ಅದೂ ಇಲ್ಲ ಜಾಗೃತೆ ಎಂದು ಶಿವಸೇನೆಯಂತಹ ಸಂಘಟನೆ ಮೂರ್ಖತನದ ಎಚ್ಚರ ನೀಡಿತ್ತು.) ಕನ್ನಡಿಗ ದಿವಂಗತ ಯು.ಆರ್.ಅನಂತಮೂರ್ತಿಯವರೂ ಈ ಪಾಕ್ ಟಿಕೆಟ್ ಪ್ರಾಯೋಜನೆಗೊಳಗಾಗಿದ್ದರು. ಹಿಂದೂತ್ವದ ಬಗ್ಗೆ ಮಾತನಾಡಿದಾಕ್ಷಣ ದೇಶ ಬಿಟ್ಟು ಪಾಕಿಸ್ತಾನಕ್ಕೆ ಹೋಗಿ ಎನ್ನುವ ಈ ಅಂಧರಿಗೆ ಮೊನ್ನೆ ನಮ್ಮ ಕನ್ನಡಿಗ ನಾಯಕ ಖರ್ಗೆಯವರು ಅಧಿವೇಶನದಲ್ಲಿ ಈ ಬಗ್ಗೆ ಸರಿಯಾಗೇ ಝಾಡಿಸಿದ್ದರು. ಅದು ಎಂಥಾ 'ಬ್ರೂಸ್ ಲೀ' ಹೊಡೆತ ಆಗಿತ್ತೆಂದರೆ ಅಲ್ಲಿದ್ದ ಯಾವೊಬ್ಬನೂ ಖರ್ಗೆಯವರ "ನೀವೇ ಹೊರಗಿನಿಂದ ಬಂದು ಇಲ್ಲಿನ ಸೌಹಾರ್ದವನ್ನು ಹಾಳುಮಾಡಹೊರಟಂತವರು" ಎಂಬ ಮಾತಿಗೆ ತುಟಿಪಿಟಿಕ್ ಎನ್ನಹೋಗದೇ ಬಾಯಿಮುಚ್ಚಿಕೊಂಡು ತೆಪ್ಪಗೆ ಕುಳಿತಿದ್ದರು.

ವಸ್ತುಸ್ಥಿತಿ ಏನೆಂದರೆ, ಈ ಆರ್ಯ-ದ್ರಾವಿಡ ಸಿದ್ಧಾಂತ ವೈದಿಕರಿಗೆ ನುಂಗಲೂ ಆಗದ ಉಗುಳಲೂ ಆಗದ ಬಿಸಿ ತುಪ್ಪದಂತೆ ಪರಿಣಮಿಸಿದೆ. ಅದು ಹೇಗೆಂದರೆ, ಇದನ್ನು ಒಪ್ಪಿಕೊಂಡ ಪಕ್ಷದಲ್ಲಿ ದ್ರಾವಿಡರೆಂಬ ಒಂದು ಜನಸಮುದಾಯವು ಇಲ್ಲಿ ತಳವೂರಿ ನೆಲೆನಿಂತ ಮೇಲೆ ಹೊರಗಿನಿಂದ ತಾವು ಬಂದವರೆಂದಾದಲ್ಲಿ ಇವತ್ತಿನ ಕಾಲದಲ್ಲಿ ಸಾಬರ ಹಾಗು ಕಿರಿಸ್ತಾನರ ವಿರುದ್ಧ ಮಾತನಾಡುವ (ಜನರನ್ನ ಎತ್ತಿಕಟ್ಟುವ) ಅಧಿಕಾರವನ್ನೇ ಈ ಆರ್ಯರು ಬಿಟ್ಟುಕೊಟ್ಟಂತಾಗುವುದಿಲ್ಲವೇ? ಅದೇರೀತಿ ಸಾವಿರಾರು ವರ್ಷಗಳಿಂದ ಪ್ರಭುತ್ವದ ಮೇಲಿನ ಹಿಡಿತದ ಮೂಲಕ ತಮಗೆ ಬಳುವಳಿಯಾಗಿ ಸಿಕ್ಕಿರುವ ಸಾಮಾಜಿಕ ಅಧಿಕಾರಗಳೆಲ್ಲ ಆರ್ಯ ದ್ರಾವಿಡ ಭಿನ್ನತೆಯನ್ನು ಅಥವ ದ್ರಾವಿಡರೇ ಇಲ್ಲಿನ ಮೂಲವಾಸಿಗಳೆಂದು ಒಪ್ಪಿಕೊಂಡಲ್ಲಿ ಕೈತಪ್ಪಬಹುದೆಂಬ ಭಯ ಇವರಿಗಿದ್ದೇ ಇದೆ. ಒಂದು ವೇಳೆ ಮಧ್ಯ ಏಷ್ಯಾದ ಆರ್ಯ ಜನಾಂಗಕ್ಕೆ ಇನ್ನಿಲ್ಲದ ವಿಶ್ವ ಮಾನ್ಯತೆ ಬಂದು ಭಾರತವೊಂದು ಶ್ರೀಲಂಕಾದಂತಹ ಸಾಧಾರಣ ದೇಶವಾಗಿದ್ದರೆ ತಮ್ಮ ಮೇಲರಿಮೆ (Superiority complex) ಯ ಕಾರಣಕ್ಕೆ ಇವರು ತಮ್ಮ ಆರ್ಯ ಮೂಲವನ್ನು ಖಂಡಿತಾ ಕೊಚ್ಚಿಕೊಳ್ಳುತ್ತಿದ್ದರು. ಇವೇನೇ ಇದ್ದರೂ ಹಿಟ್ಲರ್‌ನಂತೆ ತಮ್ಮದು ಆರ್ಯ ಜನಾಂಗ ಎಂಬ ಸುಪ್ತ ಮೇಲರಿಮೆ ವೈದಿಕರಲ್ಲಿ ಇದ್ದೇ ಇದೆ. ಅದು ಆವಾಗಾವಾಗ ಪೇಜಾವರರಂತವರಿಂದ ಈ ರೀತಿಯಲ್ಲಿ ವ್ಯಕ್ತಗೊಳ್ಳುತ್ತಲೇ ಇರುತ್ತದೆ. ಅದರ ಪರಿಣಾಮವೇ ಪೇಜಾವರರ ಮೇಲಿನ ಮಾತು.

■ ಆರ್.ಎಸ್.ಪಿ, ಮಂಗಳೂರು

...ದರಲ್ಲಿ ಯಶಸ್ವಿಯಾಗಿದ್ದಾನೆ. ಶ್ರಮ ವಿಭಜನೆ ...ಡ ರೀತಿಯಲ್ಲಿ ಕೋಮುವಾದಿ ಅಜೆಂಡಾವನ್ನು ...ಗಲಿಗೇರಿಸಿ ತನ್ನ ನವ ಉದಾರವಾದಿ ಆರ್ಥಿಕ ... ಜಾರಿಗೆ ದಾರಿಯನ್ನು ಸುಗಮಗೊಳಿಸಿ ...ದ್ದಾನೆ. ಬೆಲೆ ಏರಿಕೆ, ರೂಪಾಯಿ ಮೌಲ್ಯದ ...ಥಾ ಮೂಲಸಮಸ್ಯೆಗಳು, ಜಾತಿ ದೌರ್ಜನ್ಯಗಳು ...ಕನಿಗೆ ನಡೆಯುವ ಪ್ರಾಯೋಜಿತ ಸನ್ಮಾನ ...ಗಳ ಥಳುಕು, ಬೆಳಕಿನ ಹಿಂದೆ ಬೆಚ್ಚಗೆ ಕುಳಿತಿವೆ.


...ಾಗಿ ಜನರನ್ನು ಕಾಡುವ ಸಮಸ್ಯೆಗಳ ಕಡೆ ದೃಷ್ಟಿ ...ವುದು ಇಂದಿನ ತುರ್ತು, ಪ್ರಶಸ್ತಿಗಳ ಸುತ್ತಲಿನ ...ದಗಳು ಜನರ ಚಿಂತನೆಯ ಹಾದಿ ತಪ್ಪಿಸಿ ...! ನೆರವಿಗೆ ನಿಲ್ಲುತ್ತಿವೆ. ಕೋಮುವಾದವನ್ನು ...ಯನ್ನು ಪ್ರತ್ಯೇಕವಾಗಿ ನೋಡದೆ ಜಾತಿ ಅಹಂಕಾರ ... ಉದಾರವಾದಿ ಆರ್ಥಿಕ ನೀತಿಗಳ ಜತೆಯಲ್ಲಿ ...ಗ ಮಾತ್ರ ಈ ಎಲ್ಲ ಸಮಸ್ಯೆಗಳಿಗೆ ಪರಿಹಾರವನ್ನು ...ಯುವುದು ಸಾಧ್ಯ.

...ಗಳನ್ನು ಹಿಂದಿರುಗಿಸಿದ್ದು ತಪ್ಪಲ್ಲ, ಆದರೆ ಅದು, ... ಹೇಳಿರುವಂತೆ, ವೈಯಕ್ತಿಕ ನೆಲೆಯ ಪ್ರತಿಕ್ರಿಯೆ ... ಲೇಖಕರ ಪ್ರಾಮಾಣಿಕತೆಯ ಬಗ್ಗೆ ಗೌರವವನ್ನು ...ದೇ ಈ ಮಾತನ್ನು ಹೇಳುತ್ತಿದ್ದೇನೆ. ವೈಯಕ್ತಿಕ ...ಸಾಂಕೇತಿಕ ಪ್ರತಿಭಟನೆಗಳ ಜಾಗದಲ್ಲಿ ಇಂದು ...ಗಿರುವುದು ಸಾಮೂಹಿಕವಾಗಿ ಜನಸಾಮಾನ್ಯರನ್ನು ... ನಡೆಸುವ ರಾಜಕೀಯ ಹೋರಾಟ. ಲೇಖಕರು ...ತಕರು ಈ ಜರೂರನ್ನು ಮನಗಂಡು ತಮ್ಮ ...ವನ್ನು ಸಾಮಾಜಿಕ ನೆಲೆಯಲ್ಲಿ ವಿಸ್ತರಿಸುತ್ತಾರೆ, ... ಇಲ್ಲಿನ ಕೋಮುವಾದಿಗಳಿಗೆ ತಕ್ಕ ಉತ್ತರವನ್ನು ... ಎಂಬ ನಂಬಿಕೆ ನನ್ನದು.

■ ನಗರಗೆರೆ ರಮೇಶ್

ವಿಶಾಲ ಎದೆಯವನ ಮೌನ!

ಅಪ್ಪು ಚಿಂದದ ಬಿಳಿಬಿಳಿ ಬಟ್ಟೆಯಲಿ
ಅಷ್ಟೆತ್ತರದ ಸಿಂಹಾಸನದಲ್ಲಿ
ಕೂತ ಮೌನಿ ಚಕ್ರವರ್ತಿಯ
ಮುಖದಲ್ಲಿ ಮಾಸದ ಮಂದಹಾಸ
ಮಾತಾಡದ ಪ್ರಭುವಿನ ಭಟ್ಟಂಗಿಗಳು
ರಾಜಮುದ್ರೆಯ ಹಿಡಿದು ಹೆದರಿಸುತ್ತಿದ್ದಾರೆ:
ರಾಜಾಜ್ಞೆಯ ಪಾಲಿಸದವರ ತಲೆದಂಡ ಕತಸಿದ್ಧ!
ಜನರೀಗ ಹೆದರುತ್ತಿದ್ದಾರೆ:
ತಮಗೆ ಬೇಕಾದ್ದನ್ನು
ಉಣ್ಣಲು ಉಡಲು
ನಡೆಯಲು ನುಡಿಯಲು
ಮತಾಂಧಪಡೆಯ ಕಾಲಾಳುಗಳಿಗೀಗ ಹೊಸ ಉನ್ಮಾದ
ಪ್ರಭುವ ಮೆಚ್ಚಿಸುವ ಸಲುವಾಗಿ ಸಾರುತ್ತಿದ್ದಾರೆ:
ಕತೆ ಬರೆದವನ ಕತೆ ಮುಗಿಸಿ
ಕವಿತೆ ಬರೆದವನುಗದರರ್ಥ ಹೇಳಲು ತಿಳಿಸಿ.
ಚಕ್ರವರ್ತಿಯ ಮೌನಕ್ಕೆ
ನೂರು ಅರ್ಥಗಳಿವೆ!





ಸ್ವಾರ್ಥ


ಇತಿಹಾಸವೇ ಶ್ರೇಷ್ಠವೆಂದು ಭ್ರಮಿಸುವ
ದೇಶಭಕ್ತರಿಗೆ
ಪುರಾಣಗಳ ಮಿಥ್ಯೆಯೇ ಸತ್ಯವೆಂದು ಸಾಧಿಸುವ
ಸನಾತನಿಗಳಿಗೆ
ವರ್ತಮಾನ
ಬೇಕಾಗುವುದು
ತಮ್ಮ ಗದ್ದುಗೆ ಉಳಿಸಿಕೊಳ್ಳಲು
ಮತ್ತು
ಬಾವುಟಿಯ ತಮ್ಮ ಕೈಲೇ ಉಳಿಸಿಕೊಳ್ಳಲು
ಮಾತ್ರವೇ!

■ ಕು.ಸ.ಮಧುಸೂದನ್

ಮೋದಿ ಸರ್ಕಾರ ಎನ್ನಾರೈಗಳನ್ನು ಅತಿಯಾಗಿ ಓಲೈಸುತ್ತಿರುವುದರ ಮರ್ಮವೇನ

ನಮ್ಮ ಮೋದಿ ಸರ್ಕಾರ ದೇಶವಾಸಿಗಳನ್ನು ಕಡೆಗಣಿಸಿ ಅನಿವಾಸಿಗಳನ್ನ ಅತಿಯಾಗಿ ಓಲೈಸುತ್ತಿರುವ ಈ ವಿಲಕ್ಷಣ ವಿದ್ಯಮಾನವನ್ನು ಬಹುಶಃ ನೀವೆಲ್ಲರೂ ಗಮನಿಸಿಯೇ ಇರುತ್ತೀರಿ. ಪ್ರಜಾತಾಂತ್ರಿಕ ಭಾರತದಲ್ಲಿ ಇದುವರೆಗೆ ಆಗಿ ಹೋಗಿರುವ ಸರಕಾರಗಳ ಪೈಕಿ ಅನಿವಾಸಿ ಭಾರತೀಯರು ಅಥವಾ ಎನ್ನಾರೈಗಳ ಮೇಲೆ ಇಷ್ಟೊಂದು ವ್ಯಾಮೋಹ ಇಟ್ಟುಕೊಂಡಿರುವಂಥಾ ಸರಕಾರ ಇನ್ನೊಂದಿರದು. ಆಗೆಲ್ಲ ವಿದೇಶಗಳಿಗೆ ವಲಸೆ ಹೋಗುವುದನ್ನು 'ಪ್ರತಿಭಾ ಪಲಾಯನ' ಎಂದೇ ಪರಿಗಣಿಸಲಾಗುತ್ತಿತ್ತು. ಅವರು ಕೂಡ ತಾವು 'ತಾಯ್ನಾಡನ್ನು ತೊರೆದವರು' ಎಂಬ ಒಂದು ವಿಧದ ಅಪರಾಧಿ ಮನೋಭಾವದಲ್ಲೆ ಬದುಕುತ್ತ ಬಂದವರು. ಆದರೆ ಮೋದಿ ಸರ್ಕಾರ ದಿಲ್ಲಿ ಗದ್ದುಗೆ ಏರಿದ ತರುವಾಯದಲ್ಲಿ ಅನೇಕ ಸಂಘಸಂಸ್ಥೆಗಳು ಕೇಸರೀಕರಣಕ್ಕೊಳಗಾಗಿ ರೀತಿರಿವಾಜುಗಳು ಬದಲಾಗಿರುವಂತೆ ಭಾರತದ ವಿದೇಶಾಂಗ ನೀತಿಯೂ 'ಅನಿವಾಸೀಕರಣ'ಕ್ಕೆ ತುತ್ತಾಗಿದೆ. ಅದಿಂದು 'ಅನಿವಾಸಿವ್ಯಾಮೋಹಿ'ಯಾಗಿ ಮಾರ್ಪಟ್ಟಿದೆ. ಯಾವುದನ್ನು 'ಪ್ರತಿಭಾ ಪಲಾಯನ' ಎನ್ನಲಾಗುತ್ತಿತ್ತೊ ಅದೀಗ 'ಪ್ರತಿಭಾ ಆದಾಯ' ಎಂದಾಗಿದೆ. ಮೋದಿ ಸರ್ಕಾರದಡಿ ಎನ್ನಾರೈಗಳೆಂದರೆ ವಿದೇಶೀ ನೆಲದಲ್ಲಿದ್ದುಕೊಂಡು ಬಡ್ಡಿ ಗಳಿಸುತ್ತಾ ಇರುವ, ವಾಪಾಸು ಪಡೆಯಬಲ್ಲ ಠೇವಣಿಯ ಥರ. ವಾಸ್ತವದಲ್ಲಿ ಈ ಅನಿವಾಸಿ ಭಾರತೀಯರು ತಮ್ಮ ಭಾರತೀಯ ಪೌರತ್ವವನ್ನು ಎಂದೋ ತ್ಯಜಿಸಿದವರು. ಭಾರತದಲ್ಲಿ ಯಾವುದೇ ರಾಜಕೀಯ ಮತ್ತು ಮತದಾನದ ಹಕ್ಕುಗಳನ್ನು ಹೊಂದಿರದ ಇವರ ಸಂಖ್ಯೆ ಬರೀ 1.71 ಕೋಟಿ. ಇನ್ನುಳಿದ 1.14 ಕೋಟಿ ಮಂದಿಯಲ್ಲಿಯೂ ಹೆಚ್ಚಿನವರು ಅಮೆರಿಕದ ಪೌರತ್ವ ಪಡೆಯಲು ಸರದಿಯ ಸಾಲಿನಲ್ಲಿ ನಿಂತಿರಬಹುದು! ಹೇಳಿಕೇಳಿ ಉಗ್ರ ರಾಷ್ಟ್ರೀಯತಾವಾದಿ ಸಿದ್ಧಾಂತದ ತಳಹದಿಯ ಮೇಲೆ ನಿಂತಿರುವಂಥಾ ಪಕ್ಷದ ಸರ್ಕಾರವೊಂದು ತನ್ನ ಸಿದ್ಧಾಂತಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುವುದಕ್ಕಿಂತ ದೊಡ್ಡ ವ್ಯಂಗ್ಯ ಯಾವುದಿದೆ ಹೇಳಿ! ಹೀಗಿರುತ್ತಾ ಮೋದಿ ಸರ್ಕಾರ ಯಾತಕ್ಕೋಸ್ಕರ ಅನಿವಾಸಿಗಳನ್ನು ಇಷ್ಟೊಂದು ಬೃಹತ್ತಾದ ಮಟ್ಟದಲ್ಲಿ ಓಲೈಸುತ್ತಿದೆ ಎಂಬ ಕುತೂಹಲ ಸಹಜವೆ ಆಗಿದೆ. ಮೇಲ್ನೋಟಕ್ಕೆ ಇದೊಂದು ಹುಚ್ಚುತನದ ನಡವಳಿಕೆಯೆಂದು ಅನಿಸಬಹುದಾದರೂ ಅದರ ಹಿಂದೆ ಒಂದು ವ್ಯವಸ್ಥಿತ ಯೋಜನೆ ಇದೆ. ಅದೇನೆಂದು ನೋಡೋಣ.

ಹಿಂದಾದರೆ ಭಾರತದ ಪ್ರಧಾನಮಂತ್ರಿಗಳ ವಿದೇಶ ಭೇಟಿಗಳು ಕೇವಲ ಕಾರ್ಯನೀತಿಗಳಿಗೆ ಸಂಬಂಧಪಟ್ಟ ಚರ್ಚೆಗಳಿಗೆ ಸೀಮಿತವಾಗಿರುತ್ತಿದ್ದವು. ಆದರೆ ಮೋದಿ ಯುಗದಲ್ಲಿ ಪ್ರಾಶಸ್ತ್ಯಗಳು ಬದಲಾಗಿವೆ. ಇದೀಗ ಬಾಲಿವುಡ್ ಶೈಲಿಯ ವಿಶೇಷ ಧ್ವನಿಬೆಳಕಿನ ವೈಭವೋಪೇತ (ಶಕ್ತಿ) ಪ್ರದರ್ಶನಗಳ ಕಾಲ. ಅಲ್ಲೆಲ್ಲಾ ಮಂತ್ರಕ್ಕಿಂತ ಉಗುಳೇ ಜಾಸ್ತಿ ಇರುವ ವಿಷಯ ಈಗಾಗಲೆ ಜನರ ಗಮನಕ್ಕೆ ಬಂದಿರಬೇಕು. ಏನಾಗಿದೆಯೆಂದರೆ ಇವತ್ತು ಹೊಸ ವೈಮಾನಿಕ ಮಾರ್ಗವೊಂದರ ಘೋಷಣೆಯಂತಹ ಸರಳ ಸಂಗತಿಗಳಿಗೆ ಕೂಡ ಸಿನಿಮೀಯ ಶೈಲಿಯೆ ಬೇಕು ಎಂದಾಗಿದೆ! ಈಗ ಮೋದಿಯ ನ್ಯೂಯಾರ್ಕ್, ದುಬೈ, ಸಿಡ್ನಿ, ಟೊರೊಂಟೊ, ಸಿಂಗಾಪುರ ಮೊದಲಾದೆಡೆಗಳ ಆಡಂಬರಯುತ ಕಾರ್ಯಕ್ರಮಗಳನ್ನು ಆಯೋಜಿಸಿದವರು ಯಾರು? ಸ್ಥಳೀಯ ಸರಕಾರಗಳಲ್ಲ, ಅಲ್ಲಿನ ಅನಿವಾಸಿ ಭಾರತೀಯರು. ವಿಶೇಷವೆಂದರೆ ಮೋದಿಯ ಸಾನ್ ಜೋಸ್ 'ಪ್ರದರ್ಶನ' ಕಾರ್ಯಕ್ರಮಕ್ಕೆ ಕಿಕ್ಕಿರಿದು ನೆರೆದಿದ್ದ ಸಭಿಕರಲ್ಲಿ ಎನ್ನಾರೈಗಳಷ್ಟೆ ಅಲ್ಲ 'ಅಮೆರಿಕದ ಯಹೂದ್ಯ ರಾಷ್ಟ್ರೀಯತಾವಾದಿ ಸಂಸ್ಥೆ'ಯ (ZIONIST ORGANISATION of AMERICA) ಹಲವಾರು ಸದಸ್ಯರು ಸಹ ಇದ್ದರು! ಅತ್ತ ಭಾರತೀಯರೂ ಅಲ್ಲದ, ಇತ್ತ ಹಿಂದೂಗಳೂ ಅಲ್ಲದ, ಭಾರತದ 'ಅಭಿವೃದ್ಧಿ'ಯೊಂದಿಗೆ ಯಾವುದೇ ಸಂಬಂಧವೂ ಇರದ ಇವರೇಕೆ ಅಲ್ಲಿ ಉಪಸ್ಥಿತರಿದ್ದರೆಂದರೆ ಇವರೆಲ್ಲ ಈ ಕಾರ್ಯಕ್ರಮದ ಆಯೋಜಕರಾದ 'ಪಶ್ಚಿಮ ಕರಾವಳಿಯ ಇಂಡೊ-ಅಮೆರಿಕನ್ ಸಮುದಾಯ'ದ (INDO-AMERICAN COMMUNITY of the WEST COAST) ಜೊತೆ ವೇದಿಕೆ ಮತ್ತಿತರ ವ್ಯವಸ್ಥೆಗಳನ್ನು ಸಿದ್ಧಗೊಳಿಸಲು ಸಕ್ರಿಯವಾಗಿ ದುಡಿದವರು. ಅಮೆರಿಕದ ಅನಿವಾಸಿ ಹಿಂದೂ ರಾಷ್ಟ್ರೀಯತಾವಾದಿಗಳು ಮತ್ತು ಯಹೂದ್ಯ ರಾಷ್ಟ್ರೀಯತಾವಾದಿಗಳು (ಜಯೊನಿಸ್ಟ್) ಕೆಲಕಾಲದಿಂದ ಪರಸ್ಪರರಿಗೆ ಹತ್ತಿರವಾಗಿದ್ದಾರೆ. ಇವೆರಡರ ಸಮಾನ ಇಸ್ಲಾಂ ವಿರೋಧಿ ಧೋರಣೆಯೆ ಇವರ ಅನ್ಯೋನ್ಯತೆಯ ಗುಟ್ಟು. ಅಮೆರಿಕದ ಜಯೊನಿಸ್ಟರ ಸಮುದಾಯ ಅಲ್ಲಿನ ಸರಕಾರದ ಮೇಲೆ ಭಾರಿ ಪ್ರಭಾವ ಹೊಂದಿರುವುದನ್ನು ಗಮನಿಸಬೇಕು. ಮೋದಿ ಸರ್ಕಾರದ



ಎನ್ನಾರೈ ಓಲೈಕೆಗೆ ಇದೊಂದು ಪ್ರಮುಖ ಕಾರಣವಾಗಿದೆ.

ಮೋದಿ ಸರ್ಕಾರ ಎನ್ನಾರೈಗಳಿಗೆ ವಿಶೇಷ ಮಣೆಹಾಕುತ್ತಿರುವುದರ ಹಿಂದೆ ಮತ್ತೊಂದು ಕಾರಣವೂ ಇದೆ. ಅದು ಯಹೂದ್ಯ ರಾಷ್ಟ್ರೀಯತಾವಾದದ (ಜಯೊನಿಸಂ) ಇತಿಹಾಸಕ್ಕೆ ಸಂಬಂಧಿಸಿದೆ. 19ನೆ ಶತಮಾನದಲ್ಲಿ ಹುಟ್ಟಿಕೊಂಡ ಜಯೊನಿಸಂ ಒಂದು ಸಂಕುಚಿತ ಹಾಗೂ ಕದನಶೀಲ ದೇಶಭಕ್ತಿಯ ರಾಜಕೀಯ ಚಳವಳಿಯಾಗಿದೆ. ಒಂದು ಕಾಲದಲ್ಲಿ ಹತ್ತು ಹಲವು ರಾಷ್ಟ್ರಗಳಲ್ಲಿ ಹಂಚಿಹೋಗಿದ್ದ ಯಹೂದಿಗಳಲ್ಲಿ ಪ್ರತ್ಯೇಕ ತಾಯಿನಾಡಿನ ಕಲ್ಪನೆಯೊಂದನ್ನು ಬಿತ್ತಿ ಬೆಳೆಸುವಲ್ಲಿ ಯಶಸ್ವಿಯಾಗಿದ್ದ ಜಯೊನಿಸಂನಿಂದ ಪ್ರೇರಿತರಾದ ಇದೇ ಅನಿವಾಸಿ ಯಹೂದಿಗಳು ನಂತರ 1948ರಲ್ಲಿ ಪ್ಯಾಲೆಸ್ಟೇನಿಯರ ನೆಲದಲ್ಲಿ ಇಸ್ರೇಲ್ ರಾಷ್ಟ್ರವನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಜಯೊನಿಸಂ ಅನ್ನು ಈಗಲೂ ಬೆಂಬಲಿಸುತ್ತ ಬೆಳೆಸುತ್ತ ಬರುತ್ತಿರುವವರೂ ಇದೇ ಅನಿವಾಸಿ ಯಹೂದಿಗಳು ಮತ್ತು ಅವರ ಅನೇಕ ಪ್ರಭಾವಿ ಲಾಬಿಗಳು.

ಯಹೂದ್ಯ ರಾಷ್ಟ್ರೀಯತಾವಾದ ಮತ್ತು ಸಂಘಪರಿವಾರದ ಹಿಂದೂತ್ವ ಸಿದ್ಧಾಂತ ಇವೆರಡರ ಗುರಿಗಳೂ ಸಮಾನವಾಗಿವೆ. ರಾಷ್ಟ್ರೀಯತಾವಾದದ ತೀರ ಸಂಕುಚಿತ ಹಾಗೂ ಅಸಹಿಷ್ಣು ಆವೃತ್ತಿಯಾಗಿರುವ ಹಿಂದೂತ್ವ ಸಿದ್ಧಾಂತ ಅನಿವಾಸಿ ಭಾರತೀಯರನ್ನು ತನ್ನೆಡೆಗೆ ಆಕರ್ಷಿಸುವ ಪ್ರಯತ್ನವನ್ನು ಬಹಳ ಹಿಂದಿನಿಂದಲೂ ಮಾಡುತ್ತಿದೆ. ಅದರ ಈ ಪ್ರಯತ್ನಕ್ಕೆ ಸ್ಫೂರ್ತಿಯಾಗಿರುವುದೆ ಯಹೂದ್ಯ ರಾಷ್ಟ್ರೀಯತಾವಾದ. ಜಯೊನಿಸಂನ ಕಲ್ಪನೆಗಳಾದ 'ಸೋಲು, ಇಸ್ಲಾಂನ ಅಪಾಯ, ಪವಿತ್ರಭೂಮಿ ಮತ್ತು ಕಳೆದುಹೋಗಿದೆ ಎನ್ನಲಾಗುವ ಸಾಂಸ್ಕೃತಿಕ ಶ್ರೇಷ್ಠತೆಯ ಪುನರ್‌ಪ್ರತಿಷ್ಠಾಪನೆ'ಗಳನ್ನು ಇವರೂ ಅಳವಡಿಸಿಕೊಂಡಿದ್ದಾರೆ. ಪೌರತ್ವ ಬದಲಾದರೂ ಹಳೆ ತಾಯ್ನಾಡಿನ ಪ್ರಜೆಯಾಗಿ ಗುರುತಿಸಿಕೊಳ್ಳುವ ಹಂಬಲ ಅಥವಾ ತಾನೀಗ ಬೇರೊಂದು ದೇಶದ ಪೌರನಾಗಿದ್ದರೂ ಮನದಲ್ಲಿ ತಾನಿನ್ನೂ ಭಾರತೀಯ ಎಂಬ ಕಲ್ಪನೆ ಅನಿವಾಸಿ ಭಾರತೀಯರಲ್ಲಿ ಜನಿಸಿರುವುದೆ ಜಯೊನಿಸಂನ ಪ್ರಭಾವದಿಂದ.

ಮೋದಿಯ ವಿದೇಶ ಭೇಟಿಗಳ ಹಿಂದೆ ಎನ್ನಾರೈಗಳಲ್ಲಿ ದೂರದ ಕದನಶೀಲ ಹುಸಿ ದೇಶಭಕ್ತಿಯನ್ನು ಉದ್ದೀಪಿಸುವ ಸೈದ್ಧಾಂತಿಕ ಉದ್ದೇಶ ಅಡಗಿರುವುದು ನಿಚ್ಚಳವಾಗಿ ಗೋಚರಿಸುತ್ತದೆ. ಪೌರನೆಂದರೆ ಪ್ರಜಾಸತ್ತಾತ್ಮಕ ಗಣತಂತ್ರದ ಅತ್ಯುಚ್ಚ ಆದರ್ಶಗಳನ್ನು ಎತ್ತಿಹಿಡಿಯುವ, ರಾಜಕೀಯವಾಗಿ ಸಕ್ರಿಯನಾಗಿರುವ ಪ್ರಜೆ ಎಂಬ ನೈಜ ಪೌರತ್ವದ ಕಲ್ಪನೆ ಹಿಂದೂತ್ವವಾದದಲ್ಲಿ ತೀವ್ರ ಮಟ್ಟದ ಪರಿವರ್ತನೆಗೆ ಒಳಗಾಗುತ್ತದೆ. ಹಿಂದೂತ್ವದ ಕಲ್ಪನೆಯಲ್ಲಿ ಅನಿವಾಸಿ ಭಾರತೀಯ ಒಂದು ಸಾಮ್ರಾಜ್ಯದ ಪ್ರಜೆ; ಗಣತಂತ್ರವೊಂದರ ಪೌರನಲ್ಲ. ರಾಜಕಾರಣವೆಂಬುದು ಬಾಲಿವುಡ್ ಶೈಲಿಯ ಪ್ರದರ್ಶನಗಳಾಗಿ ಬದಲಾದಾಗ ಎನ್ನಾರೈಗಳ ಪೌರತ್ವ ಕೆಳಮಟ್ಟಕ್ಕಿಳಿಯುತ್ತದೆ. ಅವರೆಲ್ಲರನ್ನು 'ಪ್ರತಿಭಾ ಆದಾಯ' ತರುವವರು ಮತ್ತು ಚುನಾವಣಾ ಪ್ರಚಾರಕ್ಕೆ ದುಡ್ಡು ಒದಗಿಸುವವರೆಂದು ಪರಿಗಣಿಸಲಾಗುತ್ತದೆ. ಪೌರತ್ವ ಎಂಬುದು ಸಾಂಸ್ಕೃತಿಕ ಗುರುತಿನೊಂದಿಗೆ ಒಂದು ವಾಣಿಜ್ಯ ವ್ಯವಹಾರವೂ ಆಗಿಬಿಡುತ್ತದೆ: ಆದರ್ಶ ಎನ್ನಾರೈ ಎಂದರೆ ಭಾರತದ ಶ್ರೇಷ್ಠತೆಯನ್ನು ಸಂಭ್ರಮಿಸುತ್ತ ಭಾರತದಲ್ಲಿ ಮಾಡುವ ಹೂಡಿಕೆಗೆ ಅತ್ಯಧಿಕ ಲಾಭವನ್ನಷ್ಟೆ ನಿರೀಕ್ಷಿಸುವವನು ಎಂದಾಗುತ್ತದೆ. ಅವನು ರಾಜಪ್ರಭುತ್ವ ಶೈಲಿಯ ರಾಜಕೀಯವನ್ನು ವೀಕ್ಷಿಸುತ್ತ ತಲೆದೂಗುವವನಾಗಬೇಕು, ಕೇವಲ ಕೇಳುಗನಾಗಬೇಕು, ಚಪ್ಪಾಳೆ ತಟ್ಟುವವನಾಗಬೇಕು, ದುಡ್ಡು ಚೆಲ್ಲುವವನಾಗಬೇಕು; ಆದರೆ ಬಾಯಿ ಮುಚ್ಚಿಕೊಂಡಿರಬೇಕು ಎಂದು ನಿರೀಕ್ಷಿಸಲಾಗುತ್ತದೆ. (ಮೋದಿ ಭೇಟಿಗೆ ವಿರೋಧ ವ್ಯಕ್ತಪಡಿಸುವವರು ಇದ್ದರೂ ಅವೆಲ್ಲ ಬರೀ-ಸಣ್ಣಮಟ್ಟ ಅಪವಾದಗಳು!). ಎನ್ನಾರೈಗಳಿಗೆ ಯಾವ ರಾಜಕೀಯ ಜವಾಬ್ದಾರಿಯೂ ಇಲ್ಲದುದರಿಂದ ಕೆಟ್ಟ ರಾಜಕೀಯ ಆಯ್ಕೆ ಮಾಡುವ ಭಾರತೀಯ ಪ್ರಜೆಗಳು ಎದುರಿಸಬೇಕಾಗಿ ಬರುವುದನ್ನು ಇವರು ಎದುರಿಸಬೇಕಾಗಿಲ್ಲ. ಆದುದರಿಂದಲೆ ಎನ್ನಾರೈಗಳನ್ನು ಇಷ್ಟೊಂದು ಓಲೈಕೆ ಮಾಡಲಾಗುತ್ತಿದೆ. ಇವರೆಲ್ಲ ಈಗ ಹಿಂದೂತ್ವದ ವಿನೂತನ ಕಲ್ಪನೆಯಾದ ನೆಲೆ ಇಲ್ಲದ, ರಾಜಕೀಯದಿಂದ ದೂರವಾದ, ಉಗ್ರ ದೇಶಭಕ್ತ ರಾಷ್ಟ್ರೀಯತಾವಾದಿಗಳಿಂದ ಕೂಡಿದ 'ಪ್ರತಿಭಾ ಬ್ಯಾಂಕ್'ಗೆ ತೀವ್ರಗಾಮಿ ಸ್ವರೂಪವನ್ನು ನೀಡುವರೆಂದು ನಿರೀಕ್ಷಿಸಲಾಗುತ್ತಿದೆ.



ತಮಾಷೆ ಎಂದರೆ ಇಲ್ಲೂ ಭೇದಭಾವ ಇದೆ. ಗಲ್ಫ್ ರಾಷ್ಟ್ರಗಳಲ್ಲಿ ದುಡಿಯುತ್ತಿರುವ ಲಕ್ಷಾಂತರ ಕ... ಮೋದಿ ಸರ್ಕಾರದ ತೀವ್ರ ಓಲೈಕೆಗೆ ಅರ್ಹರಾ... ಉದಾ: ಮೋದಿಯ ಯುಎಇ ಭೇಟಿಯ ಬ... ಎನ್ನಾರೈಗಳಿಗೆ ಸಿಕ್ಕಿದ್ದು ಮಂದಿರಕ್ಕಾಗಿ ಒಂದಿಷ್ಟು... ಅಷ್ಟೆ. ಮತ್ತೂ ಒಂದು ಅತಿಮುಖ್ಯ ವಿಷಯ... ಇವರಲ್ಲಿ ಬಹುತೇಕ ಮಂದಿ ಮುಸ್ಲಿಮರು ಮತ್ತು... ಖಂಡಿತಾ ಇವರೆಲ್ಲ 'ಬಿಜೆಪಿಯ ಅನಿವಾಸಿ ... (OVERSEAS FRIENDS of BJP... 'ಹಿಂದೂ ಸ್ವಯಂಸೇವಕ ಸಂಘ'ಗಳಿಗೆ (ಆರೆಸ್ಸೆಸ್... ಅವತಾರ) ಸೇರಲು ಲಾಯಕ್ಕಲ್ಲ. ಅವುಗಳ ಸದ... ಅರ್ಹತೆಯುಳ್ಳಂಥಾ ವಿಶೇಷ ಎನ್ನಾರೈಗಳೆಂದರೆ ... ಬ್ರಿಟನ್, ಕೆನಡಾ, ಆಸ್ಟ್ರೇಲಿಯ, ಸಿಂಗಾಪುರಗ... ಮಾಡುವವರು (ಉದಾಹರಣೆಗೆ 2012ರಲ್ಲಿ ... ಒಂದರಿಂದಲೆ 63,42,032 ಡಾಲರ್‌ಗಳ... ಪರಿವಾರಕ್ಕೆ ಹರಿದುಬಂದಿರುವುದಾಗಿ ಅಮೆರಿಕದ... ತೆರಿಗೆ ದಾಖಲೆಗಳು ಹೇಳುತ್ತವೆ).

ಹಿಂದೂತ್ವವಾದಿಗಳು ಅನಿವಾಸಿ ಭಾರತ... ಜಯೊನಿಸ್ಟರ ಹಾದಿಯಲ್ಲಿ ಕೊಂಡೊಯ್ಯಲು ಯ...ವುದು ಸ್ಪಷ್ಟವಿದೆ. ಈ ಮೂಲಕ ಅವರನ್ನು ಅ...ಯಾದ ರಾಜಕೀಯ, ಸಾಂಸ್ಕೃತಿಕ ವಲ...ದೂಡಲಾಗುತ್ತಿದೆ. ವೈರುಧ್ಯಗಳಿಂದ ಕೂಡಿರುವ ... ಮನದಲ್ಲಿ ದಿಗಿಲು ಹುಟ್ಟಿಸುವಷ್ಟು ಆಳವಾದ ... ಭಾವನೆ ಇದೆ. ಅನೇಕರನ್ನು ತಾಯ್ನಾಡಿನ ನೆನ... ಕಾಡುತ್ತಿರುತ್ತದೆ. ಆದರೂ ಅವರು ಭಾರತಕ್ಕೆ ... ಬಗ್ಗೆ ಯೋಚಿಸಲೂ ಅಸಹ್ಯಪಟ್ಟುಕೊಳ್ಳುತ್ತಾರೆ. ... ವಾದಿಗಳು ಹಿಡಿಯುವುದು ಇಂಥವರನ್ನೆ. ... ಇವರೆಲ್ಲ ತಾವಿರುವ ನಾಡುಗಳಲ್ಲಿ ಅ... ಹುಡುಕಾಟದ ಲಕ್ಷಾಂತರ ಕತೆಗಳ ಭಾಗವಾಗಬ... ಬಹುಸಂಸ್ಕೃತಿಯ ತತ್ವವನ್ನು ಅಳವಡಿಸಿಕೊಳ್ಳಬ... ವಿಶ್ವಮಾನವರಾಗುವ ಸದವಕಾಶವನ್ನು ತಮ್ಮದಾಗಿ...ಹುದಾಗಿದೆ. ಇದನ್ನೆಲ್ಲ ಬಿಟ್ಟುಕೊಟ್ಟು ದೂರದ ... ರಾಷ್ಟ್ರೀಯವಾದಿಗಳಾಗಹೊರಟರೆ ಇನ್ನಷ್ಟು ... ಗೊಳಗಾಗಿ ಪ್ರತ್ಯೇಕ ಕೇರಿಗಳಲ್ಲಿ ವಾಸಿಸುವ ಅನ... ಸರಿಯುತ್ತಾರೆ ಅಷ್ಟೆ.

(ಕೃಪೆ: 11.12.2015ರ 'ದ ಹಿಂದೂ' ನಲ್ಲಿ... ಡಿಸೋಜ ಮತ್ತು ನಿಸ್ಸಿಮ್ ಮನ್ನತ್ತುಕರೆನ್‌ರವ... The nationalist in the NRI)

ಲಿಂಗವಂತರ ಪ್ರತಿಜ್ಞೆ

ಬಸವಣ್ಣನವರ ಅವೈದಿಕ ದರ್ಶನ ಇಂದು ಲಿಂಗಾಯತರ ಮಧ್ಯೆ ಅದೃಶ್ಯವಾಗಿದೆ. ಅವರಲ್ಲಿ ಬಹುಪಾಲು ಮಂದಿ ಕೋಮುವಾದಿ ಪಕ್ಷದ ವಕ್ತಾರರಾಗುತ್ತಿದ್ದಾರೆ. ಕಾರಣ ಅವರ ಬಹಳಷ್ಟು ಸ್ವಾಮಿಗಳು, ಹಿರಿಯರು ಮತ್ತು ರಾಜಕಾರಣಿಗಳನೇಕರು ಕೋಮುವಾದಿಗಳ ಜೊತೆಗೂಡಿದ್ದಾರೆ. ಇದು ಬಹಳ ಗಂಡಾಂತರಕಾರಿ ಅವಸ್ಥೆಯಾಗಿದೆ. ಲಿಂಗಾಯತ ಸಮಾಜ ತನ್ನ ಯುವಜನರನ್ನೇ ಕಳೆದುಕೊಳ್ಳುತ್ತಿದೆ. ಆದ್ದರಿಂದ ಇಲ್ಲಿ ನಿಜವಾದ ಲಿಂಗವಂತರ ಜೀವನ ಮೌಲ್ಯ ಏನಾಗಿರಬೇಕೆಂದು ತಿಳಿಸುವ ಪ್ರತಿಜ್ಞೆಗಳನ್ನು ಪಟ್ಟಿ ಮಾಡಲಾಗಿದೆ.

1. ಏಕದೇವೋಪಾಸಕನಾದ ನನಗೆ 33 ಕೋಟಿ ದೇವತೆಗಳಲ್ಲಿ ನಂಬಿಕೆ ಇಲ್ಲ.
2. ದೇಹವೇ ದೇವಾಲಯ ಎಂಬುದನ್ನು ನಂಬಿದ ನಾನು ಗುಡಿ ಸಂಸ್ಕೃತಿಯವನಲ್ಲ.
3. ವಿವಿಧ ವಚನಾಂಕಿತಗಳಿಂದ ಕರೆಯಲಾಗುವ ಲಿಂಗದೇವನೊಬ್ಬನೇ ದೇವ ಎಂಬುದರಲ್ಲಿ ನನಗೆ ನಂಬಿಕೆ ಇದೆ.
4. ಇಷ್ಟಲಿಂಗವು ಲಿಂಗದೇವನ ಕುರುಹು ಎಂಬುದನ್ನು ನಾನು ಒಪ್ಪುತ್ತೇನೆ. ವಚನಾಂಕಿತ ತಿದ್ದುವುದನ್ನು ವಿರೋಧಿಸುತ್ತೇನೆ.
5. ದೇವರನ್ನು ಯಾವುದೇ ಹೆಸರಿನಿಂದ ಕರೆದರೂ ದೇವನೊಬ್ಬನೇ ಎಂದು ನಾನು ಪ್ರತಿಪಾದಿಸುತ್ತೇನೆ.
6. ಬಸವಣ್ಣನವರೇ ಲಿಂಗವಂತರ ಧರ್ಮಗುರು; ಇಷ್ಟಲಿಂಗ ಮಾತ್ರ ಪೂಜಾ ಸಾಧನ, ಬಸವಾದಿ ಶರಣರ ವಚನಗಳೇ ಧರ್ಮಗ್ರಂಥ ಮತ್ತು ಸಕಲ ಜೀವಾತ್ಮರಿಂದ ಕೂಡಿದ ವಿಶ್ವವೇ ಜಂಗಮಲಿಂಗ ಎಂಬುದು ನನ್ನ ದೃಢನಿರ್ಧಾರ.
7. ರೂಢಿಗತವಾದ ಪಾದಪೂಜೆ ಲಿಂಗವಂತ ಧರ್ಮಸಮ್ಮತವಲ್ಲ ಎಂದು ನಾನು ವಾದಿಸುತ್ತೇನೆ.
8. ಪಾದ ಎಂದರೆ ಜ್ಞಾನ. ಪಾದಪೂಜೆ ಎಂದರೆ ಜ್ಞಾನಪೂಜೆ. ಜ್ಞಾನಪೂಜೆ ಎಂದರೆ ಅರಿವಿನ ಸಾಕ್ಷಾತ್ಕಾರ. ಇಷ್ಟಲಿಂಗಪೂಜೆ ಇರುವುದು ಅರಿವಿನ ಸಾಕ್ಷಾತ್ಕಾರಕ್ಕಾಗಿ ಎಂಬುದನ್ನು ನಾನು ಒತ್ತಿಹೇಳುತ್ತೇನೆ.
9. ಲಿಂಗವಂತ ಧರ್ಮದಲ್ಲಿ ಪೂಜೆ ಎಂದರೆ, ನಾವು ಅರಿವಿನ ಸಾಕ್ಷಾತ್ಕಾರದೊಂದಿಗೆ ನಮ್ಮೊಳಗಿನ ಮಹಾಘನದ ಜೊತೆ ಒಂದಾಗುವುದು. ಇದುವೆ ಲಿಂಗಾಂಗಸಾಮರಸ್ಯ ಎಂಬ ಭಾವ ನನ್ನಲ್ಲಿ ಅಚಲವಾಗಿದೆ.
10. ಸರ್ವರೂ ಶಿವಸ್ವರೂಪಿಗಳಾಗಿರುವುದರಿಂದ ಮನುಷ್ಯರ ಮಧ್ಯೆ ಭೇದಭಾವ ಮಾಡುವುದನ್ನು ನಾನು ವಿರೋಧಿಸುತ್ತೇನೆ.
11. ಮಾನಸಿಕ ಗುಲಾಮಗಿರಿಗೆ ಕಾರಣವಾಗುವ ಕರ್ಮಸಿದ್ಧಾಂತದಲ್ಲಿ ನನಗೆ ನಂಬಿಕೆ ಇಲ್ಲ.
12. ಬಸವಾದಿ ಶರಣರ ಕಾಯಕ-ಪ್ರಸಾದ-ದಾಸೋಹ ಸಿದ್ಧಾಂತದಲ್ಲಿ ನನಗೆ ನಂಬಿಕೆ ಇದೆ.
13. ಶರಣರ ಸರ್ವಸಮತ್ವ ನೀತಿಗೆ ಧಕ್ಕೆ ತರುವಂಥ ಕಾರ್ಯಗಳನ್ನು ನಾನು ಮಾಡುವುದಿಲ್ಲ.
14. ನಾನು ಯಾವುದೇ ಶುಭಕಾರ್ಯವನ್ನು ಬಸವಾದಿ ಶರಣರ ನೆನೆಯದೆ ಆರಂಭಿಸುವುದಿಲ್ಲ.
15. ಸಕಲ ಜೀವಾತ್ಮರಿಗೆ ಲೇಸನ್ನು ಬಯಸುತ್ತ ಕ್ರಿಯಾಶೀಲವಾಗುವುದನ್ನು ನಾನು ಪ್ರತಿಪಾದಿಸುತ್ತೇನೆ.
16. ನಾನು ಕಳವು ಮಾಡುವುದಿಲ್ಲ; ಕೊಲ್ಲುವುದಿಲ್ಲ; ಸುಳ್ಳು ಹೇಳುವುದಿಲ್ಲ; ಸಿಟ್ಟಿಗೆ ಬರುವುದಿಲ್ಲ; ಹೊಗಳಿಕೊಳ್ಳುವುದಿಲ್ಲ; ಅಸಹ್ಯ ... ಅನ್ಯರು ಹಳಿದಾಗ ಅರ್ಥಮಾಡಿಕೊಳ್ಳಲು ಯತ್ನಿಸುತ್ತೇನೆ.
17. ನನ್ನದು ಭ್ರಷ್ಟಾಚಾರ ಮುಕ್ತಜೀವನ ಎಂದು ಸಾರುತ್ತೇನೆ.
18. ಲಿಂಗಸಾರಾಯನಾದ ನಾನು ಮಾದಕವಸ್ತುಗಳ ಗುಲಾಮನ...
19. ವಾರ, ತಿಥಿ, ಶುಮುಹೂರ್ತ ಹಾಗೂ ಪಂಚಸೂತಕಗಳ... ಮರಣ, ಜಾತಿ, ಎಂಜಲು, ರಜಸ್ಸೂತಕದಂಥ, ಮೂಢನ... ತಿರಸ್ಕರಿಸುತ್ತೇನೆ.
20. ನಾನು ಪುನರ್ಜನ್ಮವನ್ನು ನಂಬುವುದಿಲ್ಲ, ಆದರೆ ಇಷ್ಟಲಿಂ... ಮೇಲೆ ಲಿಂಗತತ್ತ್ವದ ಅರಿವನ್ನು ಆಚರಣೆಗೆ ತರುವುದ... ಉಂಟಾಗುವ ವ್ಯಕ್ತಿತ್ವ ವಿಕಸನವೇ ಪುನರ್ಜನ್ಮ ಎಂದು ...
21. ಸ್ವರ್ಗ ನರಕಗಳು ಇಲ್ಲ ಎಂದು ನಾನು ಸಾರುತ್ತೇನೆ. ಆಚಾ... ಅನಾಚಾರವೇ ನರಕ ಎಂಬುದನ್ನು ಒಪ್ಪುತ್ತೇನೆ.
22. ಕಾಯಕದ ಅನುಭವದ ಮೂಲಕವೇ ಅನುಭಾವಿಯಾ... ಎಂಬುದನ್ನು ಪ್ರತಿಪಾದಿಸುತ್ತೇನೆ.
23. ದಯೆಯಿಂದ ಮಾತ್ರ ಮಾನವೀಯ ಜಗತ್ತಿನ ನಿರ್ಮಾಣ ಸಾಧ್ಯ... ನನ್ನ ಅಚಲ ನಿರ್ಧಾರವಾಗಿದೆ.
24. ಭವರೋಗದಿಂದ ರಕ್ಷಿಸುವ ಅಷ್ಟಾವರಣ, ವ್ಯಕ್ತಿತ್ವ ವಿಕಸನ... ಮತ್ತು ಸಕಲಜೀವಾತ್ಮರಿಗೆ ಲೇಸನೇ ಬಯಸುವ ಅರಿವ... ತರುವ ಪಂಚಾಚಾರಗಳನ್ನು ಪಾಲಿಸುತ್ತೇನೆ.
25. ಶರಣರ ತತ್ತ್ವಾದರ್ಶಕ್ಕೆ ತಕ್ಕಂತೆ ಬದುಕುತ್ತೇನೆ ಮತ್ತು ಜೀ... ಕ್ಷಣವೂ ಮಹತ್ವದ್ದು ಎಂದು ಸಾರುತ್ತೇನೆ.

■ ರಂಜಾನ್

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಪ್ರಜ್ಞಾಗೇಡಿ ಅಧ್ಯಾತ್ಮ ಚಿಂತಕರು

ವಿ ಎಂಬುದನ್ನು ಮೂರ್ಖರ ಪೆಟ್ಟಿಗೆ ಎಂದು ಮಾಡುತ್ತಿದ್ದುದ್ದನ್ನು ಕೇಳಿದ್ದೇವೆ. ಅದನ್ನು ನಾನು ಸುತ್ತಿದ್ದೆ. ಯಾವುದೇ ವೈಜ್ಞಾನಿಕ ಸಂಶೋಧನೆ ಆವಿಷ್ಕಾರಗಳು ಉಪಯೋಗಿಸುವ ಮಾನಸಿಕ ಸ್ಥಿತಿಯ ಅವಲಂಬಿತವಾಗಿರುತ್ತವೆಯೇ ಹೊರತು ವಸ್ತುಗಳನ್ನು ಪ್ರಯೋಜನವಿಲ್ಲ. ಹಾಗೆಯೇ ಅದರ ಆವಿಷ್ಕಾರ ವರ ಶ್ರಮ ಮತ್ತು ಸಾಧನೆಯನ್ನು ಲಘುವಾಗಿ ಳ್ಳುವುದು ಸರಿಯಲ್ಲ. ದೀಪ ಹಚ್ಚುವಾಗ ದೇವರನ್ನು ಜನರನ್ನು ನಾವು ಈಗಲೂ ನೋಡುತ್ತೇವೆ. ನಮ್ಮ ಅಜ್ಜಿ ಪಾರ್ವತಮ್ಮ ಲೈಟ್ ಹಾಕುವಾಗ ಳ್ಳುತ್ತಿದ್ದದ್ದು ಬಲ್ಬ್ ಕಂಡುಹಿಡಿದ ವಿಜ್ಞಾನಿಯನ್ನು. ಆ ವಿಜ್ಞಾನಿ ಯಾರೆಂದು ತಿಳಿದಿರಲಿಲ್ಲ. ಆದರೆ ತ್ರಿ ಮತ್ತು ಎಲೆಕ್ಟ್ರಿಕ್ ಬಲ್ಬ್ ಕಂಡುಹಿಡಿದ ಆ ಗಳು ಎಂಥಾ ಕೊಡುಗೆ ಕೊಟ್ಟದ್ದಾರೆಂದು ಕೆಂದು ಹೇಳುತ್ತಿದ್ದರು. ಅವರು ಹಾಗೆ ಹೇಳುತ್ತಿದ್ದ ನನಗೆ ಈಗಲೂ ಬಲ್ಬ್ ಹಾಕುವಾಗಲೆಲ್ಲಾ ಸರೂ ದೇವರನ್ನು ಸ್ಮರಿಸುವುದು, ನಮಸ್ಕರಿಸುವುದು ನನ್ನ ಅಜ್ಜಿ ನೆನಪಿಗೆ ಬಂದು, ಹಿಂದೆಯೇ ವಿದ್ಯುತ್ 1879ರಲ್ಲಿ ಕಂಡುಹಿಡಿದ ಥಾಮಸ್ ಎಡಿಸನ್ ಬರುತ್ತಾರೆ. ಜೊತೆಜೊತೆಗೆ ಅವರಿಗಿಂತಲೂ 1800ರಲ್ಲಿ ಇದೇ ನಿಟ್ಟಿನಲ್ಲಿ ಪ್ರಾರಂಭಿಕ ಗಗಳನ್ನು ಮಾಡಿದ ಇಟಲಿಯ ಸಂಶೋಧಕ ಡ್ರೋ ವೋಲ್ಟಾ ಕೂಡ ಸ್ಮರಣೆಗೆ ಬರುತ್ತಾರೆ. ಮ್ಮಜ್ಜಿಗೆ ಎಡಿಸನ್ ಅಥವಾ ವೋಲ್ಟಾ ಗೊತ್ತಿರಲಿಲ್ಲ. ದಕ್ಕೆಲ್ಲಾ ಕಾರಣರಾದ ಯಾರೋ ಸಂಶೋಧಕರು, ಗ ವಿಜ್ಞಾನಿಗಳು ಎಂಬುದಷ್ಟು ಮಾತ್ರ ಗೊತ್ತಿತ್ತು. ಎಂದು ವಿಡಿಯೋ ಎಂಬುದನ್ನು ಏನು ತ್ತೇವೆಯೋ ಅದು ಪ್ರಾಯೋಗಿಕವಾಗಿ ಬೇರು ಫಿಲೋ ಟಿ ಫಾರ್ನ್ಸ್‌ವರ್ಥ್ ಎಂಬ ಹದಿನಾಲ್ಕು ಬಾಲಕನಲ್ಲಿ. ಅವನೇ ಮೊಟ್ಟಮೊದಲ ಬಾರಿಗೆ ಯಾಗಿ ವಿಡಿಯೋದ ಸೂತ್ರವನ್ನು ಸ್ಯಾನ್ ಸ್ಕೋದ ತನ್ನ ಪ್ರಯೋಗಾಲಯದಲ್ಲಿ ಪ್ರದರ್ಶಿಸಿದ. 7 ಸೆಪ್ಟೆಂಬರ್, 1927. ಟೆಲಿವಿಷನ್‌ನ ಶಬ್ದದ ದಿನಾಂಕವನ್ನು ಆಚರಿಸಬೇಕೆಂದರೆ ನೀವು ಬರ್ ಏಳನೇ ತಾರೀಖನ್ನು ಗಣನೆಗೆ ಕೊಳ್ಳಬಹುದು. ಅದಕ್ಕೂ ಮುಂಚೆ ಮತ್ತು ನಂತರ ತ ಪ್ರಯೋಗಗಳು ನಡೆದು ಇಂದು ನಾವು ವರಿದ ಟಿವಿಗಳನ್ನು ನೋಡುತ್ತಿದ್ದೇವೆ.

ಯಾವುದೇ ಸಂಶೋಧನೆಗಳು, ಆವಿಷ್ಕಾರಗಳು ತ್ತಿದ್ದರೂ ಅದನ್ನು ಮುಂದುವರಿಸಿಕೊಂಡು ಪರಸ್ಪರ ಪರಿಚಯ ಸಂಬಂಧಗಳು ಇಲ್ಲದಿದ್ದರೂ ಲ್ಲಿರುವ ನಿಷ್ಠೆಯಿಂದ ಮತ್ತು ಪ್ರಯೋಗ ವಿಜ್ಞಾನದ ಶೀಲತೆಯಿಂದ ಎಷ್ಟೋ ಸಂಶೋಧಕರು ತರಾಗಿರುತ್ತಾರೆ. ಹೀಗೆ ವಿಜ್ಞಾನ ಎನ್ನುವುದು ತನ್ನ ಯಲ್ಲಿ (ಪ್ರಕೃತಿ ಮತ್ತು ವಿಶ್ವದ ಅನಂತತೆಯೊಂದಿಗೆ ಲಾಗುವುದಿಲ್ಲ) ಅತ್ಯಂತ ಯಶಸ್ವಿಯಾಗಿ ಮುಖಿಯಾಗಿ ಬೆಳೆಯುತ್ತಲೇ ಇದೆ. ಆದರೆ ಇಂಥಾ ಫಲಿತಗಳನ್ನು, ಉತ್ಪನ್ನಗಳನ್ನು ಮೌಢ್ಯ ಮುಸುಕಲು, ರಿಕತೆಯನ್ನು ವಿಜೃಂಭಿಸಲು ಉಪಯೋಗಿಸುವ ಗಳು ಜನರನ್ನು ಮೂರ್ಖರನ್ನಾಗಿಸುವ ನ್ನಾಗಿ ಮಾರ್ಪಡಿಸುತ್ತಿವೆ. ಮೂರ್ಖರ, ಮುಗ್ಧರ ಮತ್ತು ಆಸೆಗಳನ್ನು ಬಂಡವಾಳ ಮಾಡಿಕೊಂಡಿರುವ ತರು, ಜ್ಯೋತಿಷಿಗಳು ಚಾನೆಲ್‌ಗಳಲ್ಲಿ ಮಾಡುವ ಗಳ ಜೊತೆಗೆ ಈಗ ಟಿವಿ ಚಾನೆಲ್‌ಗಳಿಂದ ಚಿಂತಕ'ರೆಂದು ಬಿರುದಾಂಕಿತರಾಗಿರುವವರೂ ಂಡಿದ್ದಾರೆ. ಚಾನೆಲ್‌ನವರಿಂದಾಗಿ ಗುರೂಜಿ, ಜಿ, ಮಾತಾಜಿ, ಅಮ್ಮಾಜಿ, ಚಿಂತಕ, ವಿಚಾರವಾದಿ ಪದಗಳನ್ನೆಲ್ಲಾ ಅರ್ಹರಿಗೆ ಉಪಯೋಗಿಸಲೂ ಂಜರಿಯುವಂತಾಗಿ ಅಸಹ್ಯ ಹುಟ್ಟಿಸಿಬಿಟ್ಟಿವೆ.

ಢ್ಯದ ಪರಂಪರೆಯ ಪ್ರತಿಪಾದಕರು

ಜ್ಞಾನ ಮತ್ತು ಆವಿಷ್ಕಾರಗಳನ್ನು ಕ್ರಿಯಾಶೀಲವಾಗಿರಿಸಿ ವಂತಹ ವಿಜ್ಞಾನಿಗಳ ಪರಂಪರೆ ಇರುವಂತೆ ಪರಂಪರೆಯನ್ನು ಮುಂದುವರಿಸಿಕೊಂಡು ವಂತಹ ಭ್ರಮೆಗೆ ಹಚ್ಚುವ ಸಿದ್ಧಾಂತಗಳ ರಿದ್ದಾರೆ. ಚಾನೆಲ್‌ನವರು ಅವರನ್ನೇ ಅಧ್ಯಾತ್ಮ ಂದು ಕರೆಯುವುದು. ಅವರು ಎಂತಹ ಕಾರಿ ವ್ಯಕ್ತಿಗಳೆಂದರೆ, ಧರ್ಮದ ಉನ್ಮತ್ತತೆ, ಗಳ ಮುಂದುವರಿಕೆ, ದೇವರು ದಿಂದಿರುಗಳ ಸಿಕ ಪ್ರತಿಪಾದನೆ, ಅಶಾಸ್ತ್ರೀಯವಾಗಿ ಸ್ತ್ರಗಳನ್ನು, ತಿರುಚುವಿಕೆ, ಇತಿಹಾಸ ಪುಚ್ಛೆಯೇ

ನಾಶವಾಗುವಂತೆ ಪುರಾಣಗಳ ಮಂಡನೆ, ಪ್ರಾಕೃತಿಕವಾಗಿರುವಂತಹ ವಿದ್ಯಮಾನಗಳನ್ನು ಅತಿಭೌತಿಕ ಎಂಬಂತೆ ಮಂಡನೆ, ಸ್ವಸಾಮರ್ಥ್ಯ, ಆತ್ಮವಿಶ್ವಾಸ ಮತ್ತು ಮನೋಶಕ್ತಿಗಳನ್ನು ನಾಶಮಾಡುವಂತಹ ಗ್ರಹತಾರೆಗಳ ಪ್ರಭಾವಗಳ ನೆಚ್ಚುವ ಗೀಳು, ಮ್ಯಾಗ್ನೆಟ್ಟು, ಸಂಖ್ಯೆ, ಕಲ್ಲು, ಹರಳು, ಕೂದಲು, ಹಲ್ಲು, ಉಗುರು, ಮರದ ತುಂಡು ಇತ್ಯಾದಿಗಳನ್ನು ನೆಚ್ಚಿಕೊಂಡು ಭಯಸ್ಥರಾಗಿರುವಂತಹ ಪರಿಸ್ಥಿತಿಗಳನ್ನು ಜನಸಾಮಾನ್ಯರಲ್ಲಿ ಉಂಟು ಮಾಡುತ್ತಾರೆ. ಅಧ್ಯಾತ್ಮ ಚಿಂತಕರೆಂದು ಅನಿಸಿಕೊಂಡವರು ಜನರ ಪ್ರಜ್ಞಾಹಂತಕರಾಗಿರುವುದಕ್ಕೆ ಅನೇಕ ಉದಾಹರಣೆಗಳಿವೆ. ಹೀಗೆ ಓರ್ವ ಅಧ್ಯಾತ್ಮ ಚಿಂತಕಿ ಎನಿಸಿಕೊಂಡಿರುವ ಒಂದು ಅಮ್ಮಾಜಿಯ ಬಗ್ಗೆ ನಾನಿಲ್ಲಿ ತಿಳಿಸದೇ ಹೋದರೆ ಈ ಲೇಖನ ಪೂರ್ಣವಾಗುವುದಿಲ್ಲ.

ಆಗ ಕೆ.ಎಸ್. ಭಗವಾನ್ ಹಿಂದೂ ದೇವತೆಗಳ ಕೈಯಲ್ಲಿ ಆಯುಧಗಳು ಇರುವುದನ್ನು ಪ್ರಶ್ನಿಸಿದ್ದರು. ಹಾಗೆ ಅವರು ಹಿಂಸೆಯನ್ನು ಪ್ರಚೋದಿಸುತ್ತಾರೆ ಎಂದೂ ಹೇಳಿದ್ದರು. ಇದರ ಪರ ವಿರೋಧಗಳ ಚರ್ಚೆಗಳು ಚಾನೆಲ್‌ಗಳಲ್ಲಿ ಆಗುತ್ತಿದ್ದವು. ಆಗ ನನ್ನನ್ನೂ ಈ ಚರ್ಚೆಯಲ್ಲಿ ಭಾಗವಹಿಸಲು ಕರೆದಿದ್ದರು. ನನ್ನ ಮನೆಯ ಬಳಿಯೇ ಓರ್ವ ಆಧ್ಯಾತ್ಮ ಚಿಂತಕಿ ಇದ್ದಾರೆಂದೂ ಅವರನ್ನೂ ಒಂದೇ ಕಾರಿನಲ್ಲಿ ಕರೆದೊಯ್ಯಬಹುದೇ ಎಂದು ಚಾನೆಲ್‌ನವರು ಕೇಳಿದ್ದರು. ನಾನು ಒಪ್ಪಿದೆ. ಕೆಲವೇ ನಿಮಿಷಗಳಲ್ಲಿ ಕಾಲ್ನಡಿಗೆಯಲ್ಲಿ ನಡೆಯಬಹುದಾದಷ್ಟು ದೂರವಿರುವ ಅವರನ್ನು ಕಾರಿನಲ್ಲಿ ಹತ್ತಿಸಿಕೊಂಡೆವು. ಅವರೇ ಚಂದಾಪಾಂಡೆ. ಈ ಅಮ್ಮಾಜಿ, ಮಾತಾಜಿ, ಅಪ್ಪಾಜಿ, ಗುರೂಜಿಗಳೆಂಬ ಸಫಿಕ್ಸ್‌ಗಳನ್ನು

ರಂಗೋಲೆಗಳು ಎಂದರೆ ಬರಿಯ ಚಿತ್ತಾರಗಳಲ್ಲ, ಮನೆಗೆ ದಿಗ್ಬಂಧನಗಳು.

5. ಅಮ್ಮಾಜಿಗೆ ಪರರ ಸೂಕ್ಷ್ಮ ಶರೀರವನ್ನು ಲಾಕ್ ಮಾಡುವ ತಂತ್ರ ಗೊತ್ತುಂಟು. ಚರಾಚರದಲ್ಲಿರುವ ಪ್ರೇತಾತ್ಮಗಳ ಚಲನವಲನಗಳಿಂದ ಸಾಮಾನ್ಯ ಜನರ ಮೈಮೇಲೆ ಬರುವ ಬಾಧೆಗಳನ್ನು, ಚೌಡೇಶ್ವರಿ ಆವಾಹನೆಗಳನ್ನು ಬಿಡಿಸುತ್ತಾರೆ. ಯಾರ ಮೇಲೆ ನಿಜವಾದ ದೆವ್ವ ಬಂದಿದೆ ಅಥವಾ ಇಲ್ಲ ಎಂಬುದನ್ನೂ ತಿಳಿಸುತ್ತಾರೆ.


ಇಂಥಾ ಹತ್ತೂ ಹಲವು ಮಾಟ, ಮಂತ್ರವೇ ಮೊದಲಾದ ತಾಂತ್ರಿಕಕ್ಕೆ ಸಂಬಂಧಪಟ್ಟಂತೆ ತನ್ನ ಸಾಮರ್ಥ್ಯಾಧಾರದ ವಿಷಯಗಳನ್ನು ಅದೆಷ್ಟು ಉತ್ಸಾಹದಿಂದ, ಉಬ್ಬುಬ್ಬುತ್ತಾ, ಕೇಳುಗರಲ್ಲಿ ಇದು ಎಂತಹ ಪ್ರತಿಕ್ರಿಯೆಯನ್ನು ಸೃಷ್ಟಿಸಬಹುದು ಎಂಬ ಪರಿಜ್ಞಾನವೂ ಇಲ್ಲದೇ, ಬಿಟ್ಟೂಬಿಡದಂತೆ ಚಂದಾ ಪಾಂಡೆ ಹೇಳುತ್ತಾ ಬಂದರು. ಅವರಿಗೆ ಅನೇಕ ಆವಾಹನಾ ಮಂತ್ರಗಳು ಗೊತ್ತಿವೆಯಂತೆ. ನನಗೆ ಆಕೆಯ ಮೆಂಟಲ್ ಏಜ್ ಬಗ್ಗೆಯೇ ಅನುಮಾನ ಮೂಡಿಬಿಟ್ಟಿತು.


ನನಗೆ ನೂರಾರು ವಾಚಾಳಿ ಮಕ್ಕಳು ಬಿಡುವ ರೀಲುಗಳನ್ನು ಸುತ್ತಿಕೊಳ್ಳುವ ಅಭ್ಯಾಸವಿದೆ. ಅದೊಂದು ಚೆಂದದ ಅನುಭವ. ನನ್ನ ಮಕ್ಕಳೂ ಸೇರಿದಂತೆ, ಅನೇಕ ವಾಚಾಳಿ ಮಕ್ಕಳು ತಮ್ಮ ಆಸೆಗಳನ್ನು, ಕಲ್ಪನೆಗಳನ್ನು ಇಷ್ಟ ಬಂದಂತೆ ಹರಿಯಬಿಡುತ್ತಾರೆ. ಅವರಿಗೆ ತಮ್ಮೆದುರುಗಿರುವ ವ್ಯಕ್ತಿಯು ಎಷ್ಟರಮಟ್ಟಿಗೆ ತಿಳಿವಳಿಕೆ ಉಳ್ಳವನು ಎಂಬ ಸಾಮಾನ್ಯ ಅಳತೆಯೂ ತಿಳಿಯದೇ ಊಹಾಪೋಹಗಳನ್ನು



ಅಮ್ಮಾಜಿಯಂತವರ ಗುಮ್ಮ

ಜನಕ್ಕೆ ಮಾಟಮಂತ್ರ ಮಾಡುವಂತಹ ತಾಂತ್ರಿಕ ಸಾಧಕರ ಬಗ್ಗೆ ಗಂಭೀರವಾದ ಭಯ. ಅವರು ಕೋಪಿಸಿಕೊಂಡು ನಮ್ಮ ಮೇಲೆ ಮಾಟಮಂತ್ರ ಪ್ರಯೋಗಿಸಿಬಿಟ್ಟರೆ ಏನು ಗತಿ ಎಂದು. ನಮ್ಮ ತೊಟ್ಟ ಬಟ್ಟೆಯ ಚೂರನ್ನೋ, ಕೂದಲನ್ನೋ, ಉಗುರನ್ನೋ, ತುಳಿದ ಮಣ್ಣನ್ನೋ ಎತ್ತಿಕೊಂಡು ಹೋಗಿ ಮಾಟ ಪ್ರಯೋಗ ಮಾಡುವರು. ಗೊಂಬೆ ಮಾಡಿ ಗೊಂಬೆಯ ಕೈ ಮುರಿದರೆ ನಮ್ಮ ಕೈ ಮುರಿಯುವುದು, ಹೃದಯದ ಭಾಗಕ್ಕೆ ಮೊಳೆ ಅಥವಾ ಸೂಜಿ ಚುಚ್ಚಿದರೆ ಎದೆ ನೋವು ಬಂದು ಸಾಯುತ್ತೇವೆ; ಇತ್ಯಾದಿಯಾಗಿ ಭಯಗ್ರಸ್ತರಾಗಿ ಅವರನ್ನು ಎದುರಾಕಿಕೊಳ್ಳದೇ ಇರುತ್ತಾರೆ. ವಿಶೇಷ ಅಂತರವನ್ನು ಕಾಯ್ದುಕೊಳ್ಳುತ್ತಾರೆ. ಸಾಧ್ಯವಾಗದಿದ್ದರೆ ಶರಣಾಗಿ ಹೇಳಿದಂತೆ ಕೇಳಿಕೊಂಡಿರುತ್ತಾರೆ. ಅವರ ಭಯವೇ ಅವರನ್ನು ಕಾಡಿಸುವುದು, ಅವರ ಮಾನಸಿಕ





ಕೊಡುವ ಅವರ ಅಭಿಮಾನಿಗಳ ಸಂಬಂಧದ ಆಧಾರಿತವಾದದು. ಅದು ಪಕ್ಕಕ್ಕೆ ಇರಲಿ. ಈ ಚಂದಾಪಾಂಡೆ ಎಂಬ ಮೌಢ್ಯತೆಯ ಸಾಕಾರಮೂರ್ತಿ ದಾರಿಯುದ್ದಕ್ಕೂ ತನ್ನ ಶಕ್ತಿ ಸಾಧನೆಗಳನ್ನು ನನಗೆ ಪರಿಚಯಿಸಿದರು. ನನಗೋ ನಗು ತಡೆಯಲಾಗುತ್ತಿಲ್ಲ, ಹಾಗೆ ಮುಜುಗರವಾಗುವಂತೆ ನಕ್ಕು ಪಾಪದ ಆಕೆಯ ಅಭಿವ್ಯಕ್ತಿಗೆ ಅಡ್ಡ ಬರಲು ಮನಸ್ಸಿಲ್ಲ.

ನೀವೂ ಚಂದಾಪಾಂಡೆಯ ಮಹಿಮೆಯನ್ನು ಓದಿ ಆನಂದಿಸಿ.

1. ಅಮ್ಮಾಜಿಯವರು ಎಲ್ಲಾ ಜೀವಿಗಳಲ್ಲೂ ಕರುಣೆಯುಳ್ಳವರು. ಎಲ್ಲಾ ಪ್ರಾಣಿಪಕ್ಷಿಗಳ ಕೂಡ ಮಾತನಾಡಬಲ್ಲವರು. ಹಾಗೆ ಅವರ ಮನೆಗೆ ಪ್ರತಿನಿತ್ಯವೂ ಹಲ್ಲಿಯೊಂದು ಬಂದು ತನಗೆ ಬೇಕಾದ ಆಹಾರವನ್ನು ಕೇಳಿ ಪಡೆದು ತಿಂದು ಹೋಗುತ್ತದೆ. ಈ ಅಮ್ಮಾಜಿಯವರ ಜೊತೆ ನಿರಂತರ ಸಂಪರ್ಕದಲ್ಲಿರುತ್ತದೆ.

2. ಈ ಅಮ್ಮಾಜಿಯವರ ಮೈಮೇಲೆ ದೇವಿಯ (ಕಾಳಿಯ) ಹಚ್ಚೆ ಇರುವುದು ಹಾಗಿರಲಿ, ಅವರ ಕಾರಿನ ಡಿಕ್ಕಿಯಲ್ಲಿ ಸದಾ ಕಾಳಿಕಾದೇವಿಯ ವಿಗ್ರಹವನ್ನು ಇರಿಸಿಕೊಂಡಿದ್ದು, ಅದು ಇವರಿಗೆ ದಾರಿ ತಪ್ಪದಂತೆ ಸದಾ ಮಾರ್ಗದರ್ಶನ ಮಾಡುತ್ತಾ, ಆಕ್ಸಿಡೆಂಟ್ ಏನೂ ಆಗದಂತೆ ನೋಡಿಕೊಳ್ಳುತ್ತಾ ಎಲ್ಲವನ್ನೂ ನಿಯಂತ್ರಣದಲ್ಲಿಟ್ಟುಕೊಳ್ಳುತ್ತಾಳೆ. ಇಷ್ಟಾದ ಮೇಲೆ ದೇವಿಯೂ ಮತ್ತು ಅಮ್ಮಾಜಿಯೂ ನಿತ್ಯ ಸಂಭಾಷಿಸುವುದು ಏನೂ ವಿಶೇಷವಿಲ್ಲವಷ್ಟೇ.

3. ಅಮ್ಮಾಜಿ ತಾಂತ್ರಿಕ ಸಾಧನೆಗೆಂದು ಕಾಡುಗಳಿಗೆ ಹೋಗುತ್ತಾರೆ. ಅಲ್ಲಿ ಹಾವುಗಳು, ಚೇಳುಗಳು ಇರುತ್ತವೆ. ಅವುಗಳು ಅಮ್ಮಾಜಿಗೆ ಏನೂ ಮಾಡುವುದಿಲ್ಲ. ಆದರೆ ಜೊತೆಗೆ ಸಹಸಾಧಕರು ಯಾರಾದರೂ ಹೋದರೆ ಅವರು ಕಾಲಿಗೆ ಗೆಜ್ಜೆಯನ್ನು ಕಟ್ಟಿಕೊಳ್ಳಬೇಕು. ಆ ಗೆಜ್ಜೆಯ ಸದ್ದನ್ನು ಕೇಳುವ ಹಾವು ಮತ್ತು ಚೇಳುಗಳು "ಓ ಅಮ್ಮಾಜಿ ನೇತೃತ್ವದ ಸಾಧಕರು ನಮ್ಮ ಕಾಡಿಗೆ ಬಂದಿದ್ದಾರೆ. ನಾವು ತೊಂದರೆ ಮಾಡಕೂಡದು" ಎಂದು ತಾವಾಗಿಯೇ ಪಕ್ಕಕ್ಕೆ ಸರಿದುಹೋಗುತ್ತವೆ.

4. ಅಮ್ಮಾಜಿಯವರು ರಂಗೋಲಿ ಮೊದಲಾದ ಮಂಡಲಗಳನ್ನು ಹಾಕಿ ತೊಂದರೆಗಳು ಉಂಟಾಗದಂತೆ ಬಂಧಗಳನ್ನು ಮಾಡಲು ಸಾಧ್ಯಗೊಳಿಸಿಕೊಂಡಿದ್ದಾರೆ.

ನಿಜವೆಂದೇ ಸಾಧಿಸುವಂತೆ ಹೇಳುತ್ತಾಹೋಗುತ್ತಾರೆ. 'ಹೇಯ್, ಕಳ್ಳೀ, ನಿನ್ನ ಸುಳ್ಳನ್ನು ನಾನು ಕಂಡುಹಿಡಿದುಬಿಟ್ಟೆ' ಎಂದು ಮಗುವಿಗೆ ಹೇಳಿದರೆ, ಅದು ಒಪ್ಪುವುದಿಲ್ಲ. ಅವಮಾನವಾದಂತೆ ಭಾವಿಸುತ್ತದೆ. ತಾನು ಹೇಳುವುದು ಸತ್ಯವೇ ಸತ್ಯ ಎಂದು ವಾದಿಸಲು, ಸಾಧಿಸಲು ಹಟ ತೊಡುತ್ತದೆ. ಆದರೆ ಅದನ್ನು ಅಪ್ರಜ್ಞಾವಸ್ಥೆಯಲ್ಲಿರುವಂತೆ ಸುಳ್ಳು ಹೇಳುವ ಮಕ್ಕಳನ್ನು ಸೂಕ್ತ ಸಮಾಲೋಚನೆಗಳ ಮೂಲಕ ಹೇಗೋ ತಹಬಂದಿಗೆ ತರಬಹುದೇನೋ. ಆದರೆ ಈಗಾಗಲೇ ಅಮ್ಮಾಜಿಯಾಗಿರುವಂತಹ ಚಂದಾಪಾಂಡೆಯ ಮೌಢ್ಯದ ಪರಮಾವಧಿಯ ಮಾತುಗಳನ್ನು ಗಂಭೀರವಾಗಿ ಕೇಳಿಸಿಕೊಳ್ಳುವಂತಹ ಜನರಿದ್ದಾರೆ. ನಿಮ್ಮ ಅಮ್ಮಾಜಿ ಮಹಾಸುಳ್ಳಿ ಎಂದೋ ಅಥವಾ ಭ್ರಮಾಧೀನಕ್ಕೆ ಒಳಗಾಗಿರುವ ವ್ಯಕ್ತಿಯೆಂದೋ ಹೇಳಿದರೆ ನೊಂದುಕೊಂಡು ನನ್ನ ವಿಲನ್ ಆಗಿಸಿ ನೋಡುವ ಭಕ್ತರಿದ್ದಾರೆ. ತಮ್ಮ ಅಮ್ಮಾಜಿಯನ್ನು ಮಾನಸಿಕ ತಜ್ಞರ ಬಳಿಗೆ ಸಮಾಲೋಚನೆಗೆ ಒಯ್ಯುವ ಒಂದು ಸಣ್ಣ ಯೋಚನೆಯಂತೂ ಅವರಿಗೆಂದೂ ಸುಳಿಯದು. ಆದರೆ ಇಲ್ಲಿರುವ ಒಂದು ದೊಡ್ಡ ಅನುಮಾನವೆಂದರೆ ಆಕೆ ತಾನೇ ಭ್ರಮಾಧೀನಳಾಗಿದ್ದು ಅಂತಹ ವಿಷಯಗಳ ಗೀಳಿಗೆ ಒಳಗಾಗಿರುವರೋ ಅಥವಾ ತಾನು ಪ್ರಜ್ಞೆಯಿಂದಲೇ ಕೂಡಿದ್ದು ಇತರರಿಗೆ ಈ ರೀತಿಯಾಗಿ ಬುರುಡೆ ಬಿಡುತ್ತಾ ಅವರನ್ನು ಭ್ರಮೆಗೆ ಒಳಪಡಿಸುವರೋ ತಿಳಿಯದು. ಒಟ್ಟಾರೆ ಚಂದಾಪಾಂಡೆ ಮಾನಸಿಕ ತಜ್ಞರಲ್ಲಿ ಸಮಾಲೋಚನೆಯನ್ನು ಅಗತ್ಯವಾದ ಕೇಸಂತೂ ಹೌದು. ಸಾಧಾರಣ ವಿಷಯಗಳಲ್ಲಿ ತೊಡಗಿರುವಂತ ಜನರೇ ತಮ್ಮ ಮಾನಸಿಕ, ಮಾನುಷ ಸಂಬಂಧಗಳ ಸ್ವಾಸ್ಥ್ಯಕ್ಕೆ ಮನೋವೈದ್ಯರನ್ನು ಕಾಣಬೇಕಾಗಿರುವ ಅಗತ್ಯತೆ ಇರುವಾಗ, ಇನ್ನು ಚಂದಾಪಾಂಡೆಯಂತಹ ಅತಿಭೌತಿಕ ವಿಷಯಗಳಲ್ಲಿ ವಿಚಾರ ಮಾಡುತ್ತಾ ಅವೈಜ್ಞಾನಿಕ ಮತ್ತು ಅವಾಸ್ತವವಾದಂತಹ ಕೃತಕ ವಿಚಾರಗಳನ್ನು ಜನಸಾಮಾನ್ಯರಲ್ಲಿ ಬಿತ್ತುವ ಇವರಂತವರಿಗೆ ಕನಿಷ್ಠಪಕ್ಷ ಇಂಥಾ ಮನುಷ್ಯರ ಮನೋಮಾದರಿಗಳು ಹೇಗಿರುತ್ತವೆ ಎಂಬುದನ್ನು ಅಧ್ಯಯನ ಮಾಡಲಾದರೂ ಸಮಾಲೋಚನೆ ಮತ್ತು ಸಂಶೋಧನೆಗಳು ನಡೆಯಬೇಕು.


ದೌರ್ಬಲ್ಯವೇ ಇಲ್ಲದ ತೊಂದರೆಗಳನ್ನು ಕಲ್ಪಿಸಿಕೊಂಡು ಭ್ರಮಾಧೀನಕ್ಕೆ ಒಳಗಾಗುವುದು.

ಗೊಂಬೆಗಳ ಮೇಲೆ ಮಾಟ ಪ್ರಯೋಗಗಳನ್ನು ಮಾಡುವುದು. ವಾಮಾಚಾರ ಪ್ರಯೋಗಗಳು ಇವು ಯಾವುವೂ ನಡೆಯುವುದಿಲ್ಲ. ಅಂತಹ ಕೇಡಿನ ಉದ್ದೇಶಗಳನ್ನು ಇರಿಸಿಕೊಂಡು ಪ್ರಯೋಗಗಳನ್ನು ಮಾಡುವವರು ಅಧ್ಯಾತ್ಮ ಸಾಧಕರಲ್ಲ. ಪ್ರಕೃತಿಯಲ್ಲಿ ಕೇಡಿನ ಉದ್ದೇಶದ ಪ್ರಯೋಗಗಳಿಗೆ ಸ್ಥಾನವಿಲ್ಲ. ಅಧ್ಯಾತ್ಮ, ದೈವ, ಧರ್ಮ ಎಂಬ ಯಾವುದೇ ಪರಿಕಲ್ಪನೆಯ ವ್ಯಾಪ್ತಿಯಲ್ಲಿಯೂ ಮನುಷ್ಯರ ಮೇಲೆ ಸೇಡು ತೀರಿಸಿಕೊಳ್ಳುವಂತಹ, ಹಟ ಸಾಧಿಸಿಕೊಳ್ಳುವಂತಹ ವಿಚಾರಗಳಿಗೆ ಮನ್ನಣೆಯೂ ಇಲ್ಲ, ಆಸ್ಪದವೂ ಇಲ್ಲ. ಆದರೆ ಅಂತಹ ಭಯದಿಂದಲೇ ಜನರು ವಶೀಕರಣಕ್ಕೆ ಒಳಗಾದಂತೆ ವರ್ತಿಸುತ್ತಾರೆ. ಶರಣಾಗುತ್ತಾರೆ. ವಾಮಾಚಾರ, ಮೋಡಿ ಇವುಗಳು ಪ್ರದರ್ಶಕ ಕಲೆಗಳಂತಹ ಇಂದ್ರಜಾಲಗಳೇ ಹೊರತು ಬೇರೇನಲ್ಲ. ಅವು ಟೆಕ್ನಿಕಲ್ ಆಗಿ ತಂತ್ರವೇ ಹೊರತು, ಅತಿ ಭೌತಿಕ ಶಕ್ತಿ ಏನೂ ಅಲ್ಲ. ಅಂತಹ ಮಾಟ ಮಂತ್ರ ವಾಮಾಚಾರಗಳೇನಾದರೂ ಇದ್ದಿದ್ದರೆ ರಾಜಕೀಯ, ಸಿನಿಮಾ, ವ್ಯಾಪಾರ, ಉದ್ಯಮಗಳಲ್ಲಿನ ಸ್ಟಾರ್ ವಾರ್‌ಗಳಲ್ಲಿ ಎಂತೆಂತಹ ಪಲ್ಲಟಗಳು ಆಗಿರುತ್ತಿದ್ದವೋ.

ಈ ಮಾಟಮಂತ್ರ ಮತ್ತು ವಾಮಾಚಾರಗಳನ್ನು ಮಾಡಿಸುವವರನ್ನಾಗಲಿ, ನಂಬುವವರನ್ನಾಗಲಿ ಗಮನಿಸಿ ನೋಡಿ. ಅವರಲ್ಲಿ ಕಾಣುವುದು ಒಂದು ಬಗೆಯ ಮಾನಸಿಕ ಅಸಹಜತೆ. ಕಾರಿನಲ್ಲಿ ನಿಂಬೆಹಣ್ಣು, ಸೊಂಟದಲ್ಲಿ ತಾಯಿತ, ಪರ್ಸಿನಲ್ಲಿ ಬೂದಿ ಅಥವಾ ಕುಂಕುಮದ ಪ್ಯಾಕೆಟ್ಟು, ಮನೆಯ ಬಾಗಿಲಲ್ಲಿ ಬಟ್ಟೆ ಸುತ್ತಿರುವ ತೆಂಗಿನಕಾಯಿ- ಹೀಗೆ ಕ್ಷಣಕ್ಷಣಕ್ಕೂ, ಸ್ಥಳಸ್ಥಳಕ್ಕೂ ರಕ್ಷಣೆಯನ್ನು ಬಯಸಿಕೊಂಡು ಅಭದ್ರತೆಯ ಭಾವದಲ್ಲೇ ಬದುಕುವ ಮಂದಿಗೆ ನಿಜಕ್ಕೂ ಧೈರ್ಯ ಸ್ಥೈರ್ಯ ತುಂಬುವ ಚಳವಳಿಗಳು ನಡೆಯಬೇಕು. ಇವೆಲ್ಲಾ ಏನೂ ಇಲ್ಲ ಎಂಬ ಸಮಾಧಾನವೇ ಅತ್ಯಂತ ಧೈರ್ಯ ನೀಡುವ ಒಂದು ರಿಲೀಫ್. ಅವರ ಮನಸ್ಸಿನಾಳದಲ್ಲಿ ಬೇರುಬಿಟ್ಟಿರುವ ಅವುಗಳನ್ನು ಗುರುತಿಸಿ ತೋರಬಹುದೇ ವಿನಃ, ಅವರೇ ಅದನ್ನು ಚಿಕಿತ್ಸೆಯದೇ ಬೇರೆ ದಾರಿಯೇ ಇಲ್ಲ.

ಹೊಗಳಿಕೆ ತೆಗಳಿಕೆ

ಕೊನೆಗೂ ಜಾಗ ಖಾಲಿ ಮಾಡಿದ ಭಾಸ್ಕರ್ ರಾ



"ಇಡೀ ರಾಜ್ಯದ ಜನರೇ ಲೋಕಾಯುಕ್ತ ಭಾಸ್ಕರ್ ರಾಯರಿಗೆ 'ಭಾಗ್ ಕರೊ ಭಾಗ್ ಕರೋ' ಎಂದು ಹೇಳಿದರೂ ರಾಯರು ರಾಜೀನಾಮೆ ಕೊಡುವುದೇ ಇಲ್ಲ ಎಂದು ಹಠ ಹಿಡಿದಿದ್ದರು. ಆದರೆ ಕಡೆಗೂ ನಾಲ್ಕೂವರೆ ತಿಂಗಳ ರಜೆಯ ನಾಟಕದ ನಂತರ ಕಳಂಕಿತ ಲೋಕಾಯುಕ್ತರು ರಾಜೀನಾಮೆ ಕೊಡುವ ಅನಿವಾರ್ಯ ಸ್ಥಿತಿ ಉಂಟಾಯಿತು. ಈ ತೆಲುಗು ಬಿದ್ದನ ಹಠಮಾರಿತನ ಮೆಚ್ಚಲೇ ಬೇಕು. ಮೊದಲಿನಿಂದಲೂ ಎಲ್ಲರೂ ಭಾಸ್ಕರ್ ರಾವ್ ರಾಜೀನಾಮೆ ಕೊಡಬೇಕೆಂದು ಕೇಳುತ್ತಿದ್ದರೂ ನಮ್ಮ ಉಡುಪಿಯ ಪೇಜಾವರ ಶ್ರೀಗಳು ಮಾತ್ರ "ಭಾಸ್ಕರ್ ರಾವ್ ರಾಜೀನಾಮೆ ಕೊಡುವ ಅಗತ್ಯವಿಲ್ಲ, ಅವರ ಮಗ ಮಾಡಿದ ತಪ್ಪಿಗೆ ತಂದೆಗೆ ಶಿಕ್ಷೆ ಕೊಡುವುದು ತರವಲ್ಲ" ಎಂದು ನಾಲ್ಕು ತಿಂಗಳ ಹಿಂದೆ ಫರ್ಮಾನ್ ಹೊರಡಿಸಿದ್ದರು. ಯಾರೂ ಕೇಳದಿದ್ದರೂ ಎಲ್ಲಾ ವಿಷಯಗಳ ಬಗ್ಗೆಯೂ ತಮ್ಮ 'ತಜ್ಞ' ಅಭಿಪ್ರಾಯ ಹೇಳಿ ಪ್ರಚಾರ ಗಿಟ್ಟಿಸುವುದು ಪೇಜಾವರ ಶ್ರೀಗಳ ಹಳೇ ಚಾಳಿ. ಶ್ರೀಕೃಷ್ಣ ತನ್ನ ತೊಂಬತ್ತನೇಯ ಇಳಿವಯಸ್ಸಿನಲ್ಲಿ ಭಗವದ್ಗೀತೆ ಭೋದಿಸಿದ್ದಂತೆ. ಆದರೆ ನಮ್ಮ ಪೇಜಾವರ ಸ್ವಾಮೀಜಿಗಳು 83ನೇ ಇಳಿವಯಸ್ಸಿನಲ್ಲಿ ಸರಕಾರಕ್ಕೇನೇ ಕಾನೂನಿನ ಪಾಠ ಬೋಧಿಸಿದ್ದರು.

ಅನಗತ್ಯವಾಗಿ ಸ್ವಾಮೀಜಿಗಳು ಭಾರಿ ದೊಡ್ಡ ಕಾನೂನು ಪಂಡಿತನಂತೆ ತಜ್ಞ ಅಭಿಪ್ರಾಯ ಕೊಡುವುದಕ್ಕೆ ಕಾರಣವೇನೆಂದು ಹುಡುಕಿದರೆ ಗೊತ್ತಾಗಿದ್ದು ಭಾಸ್ಕರ್ ರಾವ್ (ತೆಲುಗು) ಬ್ರಾಹ್ಮಣರೆನ್ನುವ ಜಾತಿಪ್ರೇಮ. ಜತೆಗೆ ಭಾಸ್ಕರ್ ರಾಯರನ್ನು ನೇಮಿಸಿದ್ದು ಹಿಂದಿನ ಬಿಜೆಪಿ ಸರಕಾರವೆಂಬ ಕುರುಡು ಅಭಿಮಾನ ಸಹ ಇತ್ತು. ಕಾನೂನಿನ ಸಂಪೂರ್ಣ ಜ್ಞಾನವುಳ್ಳ ವಕೀಲರ ಸಂಘದ ಮುಖಂಡರೇ ಬೀದಿಗಿಳಿದು ಭಾಸ್ಕರ್ ರಾಯರ ರಾಜೀನಾಮೆ ಕೇಳುತ್ತಿದ್ದರೆ ಸ್ವಾಮೀಜಿಗಳು ಘನ ವಕೀಲರುಗಳಿಗಿಂತಲೂ ಹೆಚ್ಚು ಕಾನೂನು ಜ್ಞಾನ ಇರುವವರಂತೆ ಭಾಸ್ಕರ ರಾಯರು ರಾಜೀನಾಮೆ ಕೊಡಬಾರದು ಎಂದು ಕಾನೂನು ಸಲಹೆ ಕೊಡಲು ಇನ್ನೊಂದು ದೊಡ್ಡ ಕಾರಣವೆಂದರೆ ಲೋಕಾಯುಕ್ತರ ಮಗ ಅಶ್ವಿನ್ ಕಳೆದ ವರ್ಷ ಉಡುಪಿಗೆ ಬಂದು ಸ್ವಾಮಿಗಳ ದರ್ಶನ ಪಡೆದು ಉಡುಪಿ ಮಠಕ್ಕೆ ದೊಡ್ಡ ಕಾಣಿಕೆ ಕೊಡುವ ವಾಗ್ದಾನ ಮಾಡಿದ್ದೇ ಆಗಿತ್ತು ಎನ್ನುತ್ತಾರೆ ಸ್ವಾಮೀಜಿಗಳ ಧನದಾಹ ಬಲ್ಲವರು. ಕೆಲವರು ತ್ಯಾಗದ ಸಂಕೇತವಾದ ಕಾವಿ ಉಟ್ಟರೂ ಎಲ್ಲದರಲ್ಲೂ ತಮ್ಮ ಸ್ವಾರ್ಥ ಹುಡುಕುತ್ತಾರೆ ಎನ್ನುವುದು ನಿಜ.

ನಾನು ವಿಜಯವಾಡದಲ್ಲಿ ಉದ್ಯೋಗ ನಿಮಿತ್ತ ಐದು ವರ್ಷವಿದ್ದಾಗ ಅಲ್ಲಿಯ ತೆಲುಗರೇ 'ಪಾಕಿಸ್ತಾನಿಗಳನ್ನು ಬೇಕಾದರೆ ನಾಲ್ಕು ಹೆಜ್ಜೆಗಾದರೂ ನಂಬಬಹುದು ಆದರೆ ತೆಲುಗು ಬ್ರಾಹ್ಮಣರನ್ನು ಒಂದು ಹೆಜ್ಜೆಗೂ ನಂಬಲಾಗದು' ಎಂದು ನನಗೆ ಹೇಳುತ್ತಿದ್ದರು. ಈ ಮಾತು ಪೂರ್ಣ ಸತ್ಯವೆಂದು ಅಲ್ಲಿಯ ನನ್ನ ಆಫೀಸಿನ ವ್ಯವಹಾರದಲ್ಲಿ ಸ್ವಂತ ಅನುಭವದಿಂದ ನನಗೆ ಮನದಟ್ಟಾಗಿತ್ತು. 1992 ಡಿಸೆಂಬರ್ 6 ರಂದು ಬಾಬರಿ ಮಸೀದಿ ಬೀಳಿಸುವಲ್ಲಿ ಆಗಿನ ಕಾಂಗ್ರೆಸ್ ಪ್ರಧಾನಿ ಪಕ್ಕಾ ತೆಲುಗು ಬ್ರಾಹ್ಮಣ ನರಸಿಂಹ ರಾವ್ ನೇರ ಆಸಕ್ತಿ ವಹಿಸಿದ್ದರು ಎಂಬುದು ಲೈಬರ್‌ಹಾನ್ ಆಯೋಗಕ್ಕೆ ಸ್ವತಃ ಬಿಜೆಪಿ ಸಂಸದ ರಾಮವಿಲಾಸ್ ವೇದಾಂತಿ ಕೊಟ್ಟ ಹೇಳಿಕೆಯಲ್ಲಿ ದಾಖಲಾಗಿದೆ (ತಮ್ಮ ಪತ್ರಿಕೆಯ ಮೂಲಕ ಈ ಮಾಹಿತಿ ಕೊಟ್ಟದ್ದಕ್ಕಾಗಿ ಸುರೇಶ್ ಭಟ್ ಬಾಕ್ರಬೈಲ್ ಇವರಿಗೆ ಧನ್ಯವಾದಗಳು). ಪಕ್ಷ ಯಾವುದಾದರೇನು ಮೂಲ ಜಾತಿಗುಣ ಮಾತ್ರ ಬದಲಾಗುವುದಿಲ್ಲ.

ಮಂಗಳೂರಲ್ಲಿ ಒಬ್ಬ ತೆಲುಗು ಬ್ರಾಹ್ಮಣ ಕರ್ನಾಟಕ ಸರಕಾರವನ್ನೇ ಕೆಲವು ವರ್ಷಗಳ ಹಿಂದೆ ವಿನೂತನ ರೀತಿಯಲ್ಲಿ ವಂಚಿಸಿ ಕೋಟ್ಯಾಂತರ ಕಮಾಯಿಸಿ ಮಾಯವಾಗಿದ್ದಾನೆ. ರಾಜ್ಯದಲ್ಲಿ ಯಡಿಯೂರಪ್ಪ ಸರಕಾರವಿದ್ದಾಗ ಸೋಮಯಾಜಲು ಎಂಬ ತೆಲುಗು ಬ್ರಾಹ್ಮಣ ಆಂಧ್ರದಿಂದ ಬಂದು ತಾನು ಆಂಧ್ರದ ದೊಡ್ಡ ಉದ್ಯಮಿಯಾಗಿದ್ದು ತನ್ನ ದೊಡ್ಡ ಚಾರಿಟೇಬಲ್ ಸಂಸ್ಥೆಯಿದೆ ಹಾಗೂ ಅದರ ಮೂಲಕ ಮಂಗಳೂರು ನಗರದಲ್ಲಿ ಬ್ರಿಟಿಷರು ಇಸ್ವಿ 1848 ರಲ್ಲಿ ಕಟ್ಟಿರುವ 167 ವರ್ಷ ಹಳೆಯ ಲೇಡಿ ಗೋಶಾನ್ ಎಂಬ ದೊಡ್ಡ ಸರಕಾರಿ ಆಸ್ಪತ್ರೆಯನ್ನು ತನ್ನದೇ ಸ್ವಂತ ಹಣದಿಂದ 15 ಕೋಟಿ ವೆಚ್ಚದಲ್ಲಿ ಹೊಸದಾಗಿ ಕಟ್ಟಿಕೊಡುತ್ತೇನೆ ಎಂದು ಸ್ಥಳೀಯ ಬಿಜೆಪಿ ಶಾಸಕರನ್ನು ಮತ್ತು ಮುಖ್ಯಮಂತ್ರಿಗಳನ್ನು ನಂಬಿಸಿ ಹಳೆಯ ಕಟ್ಟಡವನ್ನು ಬೀಳಿಸಲು ಸರಕಾರದಿಂದ ಅನುಮತಿ ಪಡೆದನು. ಅವನ ಹಿನ್ನೆಲೆಯನ್ನು ಪರಿಶೀಲಿಸದೇ ಯಡ್ಡಿ ಸರಕಾರ ಲೇಡಿ ಗೋಶಾನ್ ಆಸ್ಪತ್ರೆಯ ಮರು ನಿರ್ಮಾಣಕ್ಕೆ ಒಪ್ಪಿಗೆ ನೀಡಿಯೇ ಬಿಟ್ಟಿತು. ನಂತರ ಸೋಮಯಾಜಲು ಆ ಕೆಡವಿದ ಆಸ್ಪತ್ರೆ ಕಟ್ಟಡದ ಬೆಲೆಬಾಳುವ ಶುದ್ಧ ಸಾಗುವಾನಿಯ ಕಲಾತ್ಮಕ ತೊಲೆ ಕಂಬ ಕಿಟಕಿ ಬಾಗಿಲು ಹಾಗೂ ಲಂಡನ್ನಿನಲ್ಲಿ ಎರಕ ಹೊಯ್ದ ಕಲಾತ್ಮಕ ಲೋಹದ ಕಂಬಗಳನ್ನು ಆಂಧ್ರಕ್ಕೆ ಸಾಗಿಸಿ ಎರಡು ಕೋಟಿ ರೂಪಾಯಿಗೆ ಮಾರಿ ಮಾಯವಾದನು. ಆದರೆ ಆಗಿನ ಸರಕಾರ ಅವನನ್ನು ಹುಡುಕುವ ಪ್ರಯತ್ನವನ್ನೇ ಮಾಡಲಿಲ್ಲ. ನಂತರ ಕೇಂದ್ರ ಸರಕಾರದ ಒಂದು ಪೆಟ್ರೋಲಿಯಂ ಕಂಪನಿ ಕೊಟ್ಟ ಇಪ್ಪತ್ತು ಕೋಟಿ ರೂಪಾಯಿ ಧನಸಹಾಯದಿಂದ ಆ ಆಸ್ಪತ್ರೆಯನ್ನು ಇತ್ತೀಚೆಗೆ ಪುನರ್ ನಿರ್ಮಿಸಲಾಯಿತು. ಇಡೀ ಜಗತ್ತಿನಲ್ಲಿ ಇಂತಹ ವಿಲಕ್ಷಣ ಮೋಸ ಎಲ್ಲಿಯೂ ನಡೆದಿರಲಿಕ್ಕಿಲ್ಲ. ನಾವೇ ಮಹಾ ಬುದ್ಧಿವಂತರು ಎಂದು ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುವ ಕರಾವಳಿ ಜಿಲ್ಲೆಯವರನ್ನೇ ಒಬ್ಬ ತೆಲುಗು ಬ್ರಾಹ್ಮಣ ಎಷ್ಟೊಂದು ಸುಲಭವಾಗಿ ಮೋಸ ಮಾಡಿ ಮಾಯವಾದನು ನೋಡಿ. ಬೆಂಗಳೂರಿನ ಮಹಾ ವಂಚಕ ವಿನಿವಿಂಕ್ ಶಾಸ್ತ್ರೀಯದೂ ಸೋಮಯಾಜಲು ಗೋತ್ರವಂತೆ.

-ಅಭಿಷೇಕ್ ಪಡಿವಾಲ್, ಸುಳ್ಯ

ಹಫ್ತಾ ಸಿಕ್ಕರೆ ಮಾತ್ರ ಹಿಂದೂಗಳೆಲ್ಲ ಒಂದು!

ಪ್ರತಿವರ್ಷ ಮೂಡಬಿದ್ರಿಯಲ್ಲಿ ನಡೆಯುವ ಆಳ್ವಾಸ್ ನುಡಿಸಿರಿ ಎಂಬ ಕನ್ನಡ ಜಾತ್ರೆ ಆಯೋಜಿಸುವ ಮೋಹನ್ ಆಳ್ವ ಹಿಂದೂತ್ವವಾದಿ ಆಗಿದ್ದರೂ ಅವರಿಂದ ಕಲ್ಲಡ್ಕ ಹೆಡ್ ಆಫೀಸಿಗೆ ಹಫ್ತಾ ಮುಟ್ಟುತ್ತಿಲ್ಲ. ಅದಕ್ಕಾಗಿ ಅವರನ್ನು ಸರಿದಾರಿಗೆ ತರಲು ಕಲ್ಲಡ್ಕ ಹೆಡ್ ಆಫೀಸಿನವರು ತಂತ್ರ ಹೂಡುತ್ತಲೇ ಇರುತ್ತಾರೆ. ಈ ತಿಂಗಳ ಮೊದಲ ವಾರದಲ್ಲಿ ನಡೆದ ನುಡಿಸಿರಿಗೆ ಬಂದಿದ್ದ ಸಾಹಿತಿ ಕುಂ.ವೀರಭದ್ರಪ್ಪ ನಮ್ಮ ದೇಶದಲ್ಲಿ ಹೆಚ್ಚುತ್ತಿರುವ ಅಸಹಿಷ್ಣುತೆಯನ್ನು ವಿರೋಧಿಸಿ ಕಪ್ಪು ಶಾಲು ತೊಟ್ಟಿದ್ದರು. ಜತೆಗೆ ಕುದುರೆಮುಖ ನಿಸರ್ಗಧಾಮದಲ್ಲಿ ಆಳ್ವಾಸ್ ಸಂಸ್ಥೆಯವರು ರೆಸಾರ್ಟ್ ನಡೆಸುವುದನ್ನು ಕೂಡ ಅವರು ಆಕ್ಷೇಪಿಸಿದರು. ಆದರಿಂದಾಗಿ ನುಡಿಸಿರಿಯ ವೇದಿಕೆಯಲ್ಲಿಯೇ ಮೋಹನ್ ಆಳ್ವರು ಮುದುಗರಪಡುತ್ತಾ ತಾನು ಕುದುರೆಮುಖದಲ್ಲಿ ಯಾವುದೇ ಲಗ್ಜರಿ ರೆಸಾರ್ಟ್ ಮಾಡುತ್ತಿಲ್ಲ ಹಾಗೂ ತಾನು ವಿಲಾಸಿ ಜೀವನ ಇಷ್ಟಪಡುವುದಿಲ್ಲ ಎಂದು ಬಹಿರಂಗ ಹೇಳಿಕೆ ಕೊಡಬೇಕಾಯಿತು. ಆದರೆ ಈ ರೆಸಾರ್ಟಿನ ತಪ್ಪು ಮಾಹಿತಿ ಕುಂವಿ ತಲೆಗೆ ತಿಕ್ಕಿದವರು ಕಲ್ಲಡ್ಕದ ಕಡೆಯ ಕೇಸರಿ ಕ್ರಿಮಿಗಳು. ಇದಕ್ಕೆ ಕೆಲವು ಸುಪ್ತ ಕಾರಣಗಳಿವೆ. ಆಳ್ವರಿಂದ ಹಫ್ತಾ ಸಿಗದ ಕಾರಣ ಮೊದಲದ್ದಾದರೆ, ಎರಡನೆಯ ಕಾರಣ ಮೋಹನ್ ಆಳ್ವರು ಧರ್ಮಸ್ಥಳ ವೀರೇಂದ್ರ ಹೆಗ್ಗಡೆಯವರ ಆತ್ಮೀಯ ಮಿತ್ರರು ಹಾಗೂ ಗಟ್ಟಿ ಬೆಂಬಲಿಗರು.

ಧರ್ಮಸ್ಥಳದ ಹೆಗ್ಗಡೆಗೂ ಕಲ್ಲಡ್ಕ ಡಾನ್‌ಗೂ ಸಂಬಂಧ ತೀರಾ ಹಳಸಿದೆ. ಅದಕ್ಕಾಗಿ ಮಹೇಶ್ ತಿಮರೋಡಿ ಎಂಬ ಕೇಸರಿ ಬಂಟನನ್ನು ಮುಂದೆ ಬಿಟ್ಟು ಮೃತ ಸೌಜನ್ಯಳಿಗೆ ನ್ಯಾಯ ಕೊಡಿಸುವ ನೆಪದಲ್ಲಿ ಹೆಗ್ಗಡೆಯವರನ್ನು ಹಣಿಯಲು ಕಲ್ಲಡ್ಕ ಪ್ರಯತ್ನಿಸಿದ್ದು. (ಸೌಜನ್ಯಳಿಗೆ ಘೋರ ಅನ್ಯಾಯವಾಗಿದ್ದು ನಿಜ ಮತ್ತು ಅವಳ ಕುಟುಂಬಕ್ಕೆ ಖಂಡಿತಾ ನ್ಯಾಯ ಸಿಗಲೇಬೇಕು ಎಂದು ನನ್ನದೂ ಅಭಿಪ್ರಾಯ). ಧರ್ಮಸ್ಥಳ ಹಾಗೂ ಕಲ್ಲಡ್ಕದ ನಡುವೆ ನಡೆಯುತ್ತಿರುವ ಮುಸುಕಿನ ಗುದ್ದಾಟದಲ್ಲಿ ಈಗ ಕಾಂಗ್ರೆಸ್ಸಿನೊಳಗಿರುವ ಮೃದು ಹಿಂದೂತ್ವವಾದಿಗಳನ್ನು ಉಪಯೋಗಿಸಿ ಧರ್ಮಸ್ಥಳ ಕ್ಷೇತ್ರವನ್ನು ಸರಕಾರದ ಸುಪರ್ದಿಗೆ ತೆಗೆದುಗೊಳ್ಳುವ ಪ್ರಸ್ತಾಪ ಸಹ ಕಲ್ಲಡ್ಕರಿಂದ ಪರೋಕ್ಷವಾಗಿ ಕಾನೂನು ಮಂತ್ರಿ ಜಯಚಂದ್ರರಿಗೆ ತಲುಪಿದೆಯಂತೆ.

ಹಿಂದೂ ದೇವಸ್ಥಾನಗಳನ್ನು ಭಾರಿ ವ್ಯಾಪಾರಿ ಕೇಂದ್ರಗಳನ್ನಾಗಿ ಪರಿವರ್ತಿಸಿ ಕೋಟಿ ಕೋಟಿ ಬಾಚುವುದರಲ್ಲಿ ನಮ್ಮ ಕರಾವಳಿಯ ವೈದಿಕರನ್ನು ಭಾರತದಲ್ಲಿ ಬೇರೆ ಯಾರೂ ಸರಿಗಟ್ಟಲಾರರು. ಮೇಲಾಗಿ ಕರಾವಳಿಯ ವಿದ್ಯಾವಂತ ಶೂದ್ರರೂ ಇಡೀ ಭಾರತದಲ್ಲಿಯೇ ಅತಿಹೆಚ್ಚು ಮೂಢ ನಂಬಿಕೆಯುಳ್ಳವರಾಗಿರುವುದು ವೈದಿಕರಿಗೆ ತುಂಬಾ ಸಹಾಯಕವಾಗಿದೆ. ಹಾಗಾಗಿ ಕರಾವಳಿಯ ಎಲ್ಲಾ ದೊಡ್ಡ ಹಿಂದೂ ಕ್ಷೇತ್ರಗಳು ಈಗಾಗಲೇ ಪರೋಕ್ಷವಾಗಿ ವೈದಿಕರ ಕಪಿಮುಷ್ಟಿಯಲ್ಲಿದ್ದು ಸರಕಾರದ ಆಡಳಿತಾಧಿಕಾರಿ ಕೇವಲ ಅಲಂಕಾರಕ್ಕೆ ಮಾತ್ರ ಸೀಮಿತ.

ಕಟೀಲು ದುರ್ಗಾಪರಮೇಶ್ವರಿ ಕ್ಷೇತ್ರ ಸಹಿತ ಮೊದಲು ಶೂದ್ರರ ಆಡಳಿತದಲ್ಲಿದ್ದ ದೇವಸ್ಥಾನ. ಈಗ ಎಲ್ಲಾ ಶ್ರೀಮಂತ ಹಿಂದೂ ಕ್ಷೇತ್ರಗಳನ್ನು ವೈದಿಕರು ಕ್ರಮೇಣ ಕೈವಶ ಮಾಡಿಕೊಂಡಾಗಿದೆ. ಶೂದ್ರರು ಬರೆದಿದ್ದ ಕ್ಷೇತ್ರ ಮಹಾತ್ಮೆ ಎಂಬ ಕನ್ನಡ ಯಕ್ಷಗಾನ ಪ್ರಸಂಗಗಳ ಮೇಲೆ ಹಾಗೂ ಆ ಕ್ಷೇತ್ರದ ದೇವರ ಫೋಟೋಗಳ ಮೇಲೂ ಅರ್ಚಕರು ತಮ್ಮ ಕಾಪಿರೈಟ್ ರಿಜಿಸ್ಟರ್ ಮಾಡಿಸಿ ಹಣ ಬಾಚುತ್ತಿದ್ದಾರೆ. ವೈದಿಕ ಸ್ವಾಮಿಗಳು ಮತ್ತು ಪುರೋಹಿತರ ಈ ಅಟ್ಟಹಾಸದ ಮುಂದೆ ಸರಕಾರಿ ಆಡಳಿತಾಧಿಕಾರಿಯೂ ನಿಸ್ಸಹಾಯಕನಾಗಿ ಕಣ್ಣು ಮುಚ್ಚಿ ಕೂತಿದ್ದಾರೆ.

ಕೆಲವರ್ಷಗಳ ಹಿಂದೆ ಕೊಲ್ಲೂರು ಮೂಕಾಂಬಿಕಾ ಕ್ಷೇತ್ರದ ವಿಷಯದಲ್ಲಿ ಹಾಲಾಡಿ ಶ್ರೀನಿವಾಸ್ ಶೆಟ್ಟಿಯನ್ನು ಕೆಣಕಿ ಕಲ್ಲಡ್ಕ ಭಟ್ಟ ಸರಿಯಾಗಿ ಇಕ್ಕಿಸಿಕೊಂಡಿರುವುದರಿಂದ ಸ್ವಾಭಿಮಾನಿ ಬಂಟರನ್ನು ನೇರವಾಗಿ ಎದುರು ಹಾಕಿಕೊಳ್ಳಲು ಕಲ್ಲಡ್ಕನ ವೈದಿಕ ಗ್ಯಾಂಗಿಗೆ ಧೈರ್ಯವಿಲ್ಲ. ಅದಕ್ಕಾಗಿ ಕುಂವೀಯಂತಹ ಪ್ರಗತಿಪರ ಸಾಹಿತಿಗಳ ಬಾಯಿಂದ ಕುದುರೆಮುಖ ರೆಸಾರ್ಟಿಗೆ ವೇದಿಕೆಯಲ್ಲಿಯೇ ವಿರೋಧ ವ್ಯಕ್ತಪಡಿಸುವಂತೆ ನೋಡಿಕೊಂಡು ಮೋಹನ್ ಆಳ್ವಾರನ್ನು ಇಕ್ಕಟ್ಟಿಗೆ ಸಿಲುಕಿಸಿ ಕಲ್ಲಡ್ಕದವನು ತನ್ನ ಶಕ್ತಿ ತೋರಿಸಲು ಪ್ರಯತ್ನಿಸುತ್ತಿರುವುದು. ಸಂಘಪರಿವಾರದ ವೈದಿಕರು 'ನಾವೆಲ್ಲಾ ಹಿಂದೂ ನಾವೆಲ್ಲಾ ಒಂದು' ಎನ್ನುವುದು ಕೇವಲ ಹಫ್ತಾ ಸಿಕ್ಕಾಗ ಮಾತ್ರ.

-ಆರ್.ಬಿ.ಶೆಣಾವ, ಮಂಗಳೂರು

ಟಿಪ್ಪಾಸುರ ಮತ್ತು ತುಳುನಾಡಿನ ಊರುಗಳು

ಬಹಳ ಹಿಂದೆ ಒಂದು ಮಾಸಿಕದಲ್ಲಿ ಹಾಸ್ಯಲೇಖನವೊಂದನ್ನು ಓದಿದ್ದೆ. ಕಾಫಿಗೆ 'ಕಾಫಿ' ಎಂಬ ಹೆಸರು ಹೇಗೆ ಬಂತೆಂದು ಆ ಲೇಖನದಲ್ಲಿ ವಿವರವಿತ್ತು. ಸೀತೆಯನ್ನು ಹುಡುಕಲು ಮಹಾ ಶರಧಿಯನ್ನೇ ಜಿಗಿದು ಲಂಕೆಯನ್ನೆಲ್ಲ ಜಾಲಾಡಿದ ಹನುಮ ಆ ಬಳಿಕ ತನ್ನ ಸುಸ್ತನ್ನು ನಿವಾರಿಸಿಕೊಳ್ಳಲು ಅಲ್ಲಿ ಸಿಕ್ಕ ಮರವೊಂದರ ಹಣ್ಣನ್ನು ತಿಂದು ಎಲ್ಲಾ ಆಯಾಸವನ್ನು ಪರಿಹರಿಸಿಕೊಂಡನಂತೆ. ಬಳಿಕ ಬರುವಾಗ ಆ ಮರದ ಅದ್ಭುತ ಬೀಜವನ್ನು ಮರೆಯದೇ ಜತೆಗೆ ತಂದನಂತೆ. ಅದೇ ಕಪಿ ತಂದ ಬೀಜ 'ಕಾಫಿ' ಎಂದಾಯಿತಂತೆ. ಇದು ತಮಾಷೆಗಾಗಿ ಬರೆದಂತಹ ಕಥೆಯಾದರೆ ಮಾಯಾಜಿಂಕೆ ಪ್ರಕರಣದಲ್ಲಿ ರಾಮ ಕೊಂದ ಮಾರೀಚನ ಶವ ರಾಮಬಾಣದ ರಭಸಕ್ಕೆ ದೂರ ಹಾರಿ ಸಮುದ್ರದಲ್ಲಿ ಬಿತ್ತಂತೆ. ಅದೇ ಈಗಿನ ಮಾರಿಷಸ್ ದ್ವೀಪವಾಯಿತೆಂದು ನಂಬುವವರು ಈಗಲೂ ಇದ್ದಾರೆ. ಇಂತಹ ಕಲ್ಪನಾತ್ಮಕ ಕಥೆ ಹೆಣೆಯುವಲ್ಲಿ ನಮ್ಮವರನ್ನ ಮೀರಿಸುವವರು ಯಾರಾದರೂ ಇದ್ದಾರೆಯೇ? ತಾಜ್ ಮಹಲನ್ನು ತೇಜೋಮಹಲೆಂದು ತಿದ್ದಹೊರಟ ಸಂಘಿಗಳ ಮಂಗಾಟಕ್ಕೆ ಬಿಜೆಪಿ ಸರಕಾರವೇ ಮೊನ್ನೆ ಬ್ರೇಕ್ ಹಾಕಿದೆ. (ತಮ್ಮ ಮಂಗಾಟ–ಅತಿರೇಕಗಳು ಸಾಕೆನ್ನಿಸುವ ಮಟ್ಟಿಗೆ ತಿರುಗುಬಾಣವಾಗಿ ಇವರನ್ನು ಕಾಡಿರುವುದೇ ಇಂತಹ ಅಚ್ಚರಿದಾಯಕ ಬೆಳವಣಿಗೆಗಳಿಗೆ ಕಾರಣ. ಮೋದಿ ಮಾನವೀಯತೆ ಬಗ್ಗೆ, ಗಾಂಧಿಯ ಬಗ್ಗೆ ಮನುಧರ್ಮ ಬಿಟ್ಟು ಸಂವಿಧಾನದ ಬಗೆಗೆ ಮಾತನ್ನಾಡುವುದೆಲ್ಲ ಇಂತಹ ಬೆಳವಣಿಗೆಯ ಭಾಗಗಳೆ ಆಗಿವೆ.)

ಶಂಕರಾಚಾರ್ಯ ಶೃಂಗೇರಿಯಲ್ಲೇ ಪ್ರಮುಖ ಪೀಠ ಕಟ್ಟಲು ಬಲವಾದ ಕಾರಣವಿದೆಯಂತೆ. ತನ್ನ ಆಹಾರವಾದ ಕಪ್ಪೆಗೆ – ಅದೂ ತುಂಬು ಗರ್ಭಿಣಿ ಕಪ್ಪೆಗೆ – ಹಾವೊಂದು ಹೆಡೆಯೆತ್ತಿ ಆಶ್ರಯ ನೀಡಿದ್ದನ್ನು ಶೃಂಗೇರಿಯಲ್ಲಿ ಖುದ್ದು ಶಂಕರಾಚಾರ್ಯರೇ ಕಣ್ಣಾರೆ ಕಂಡು ಅದು ದೈವೀಕ್ಷೇತ್ರವೆಂದು ಪೀಠವನ್ನು ಅಲ್ಲೇ ಕಟ್ಟಿದರಂತೆ. ಆದರೆ ಕಪ್ಪೆಗಳು ಗರ್ಭ ಧರಿಸಲಾರವು. ಮಳೆಗಾಲದ ನೀರಲ್ಲಿ ವಟಗುಟ್ಟುತ್ತಾ ಮೊಟ್ಟೆಯನ್ನು ನೀರಲ್ಲಿ ಬಿಡುವ ಇವುಗಳದ್ದು ಬಾಹ್ಯ ಗರ್ಭಧಾರಣಾ ಪ್ರಕ್ರಿಯೆ. ಹಾಗಾದರೆ ಕಪ್ಪೆ ತುಂಬ ಆದದ್ದೆಲ್ಲಿ? ಕಥೆ ರಂಜನೀಯವಿದ್ದರೂ ಲೋಕ ಕಥೆಗಾರ ಇಲ್ಲಿ ಸ್ವಲ್ಪ ಎಡವಿದ್ದಾನಷ್ಟೆ.

ಒಂದು ಸಮಯದಲ್ಲಿ ದಕ ಜಿಲ್ಲೆ ಮಿಸ್ ಹಾಗು ಮಿಸ್ಟರ್ ವರ್ಲ್ಡ್ ಇಬ್ಬರೂ (ರೇಮಂಡ್ ಮತ್ತು ಐಶ್ವರ್ಯ ರೈ) ಇದ್ದಂತಹ ಹೆಗ್ ಹೊಂದಿತ್ತು. ಆದರೆ ಅದಕ್ಕೂ ಮೇಲ್ಪಟ್ಟದ ಯೆಂದರೆ ಇದೇ ದಕ (ಅವಿಭಜಿತ) ಜಿಲ್ಲೆ ಚಂದ್ರರಿಬ್ಬರೂ ಕಾಲಿಟ್ಟಂತಹ ಸ್ಥಳವಾಗಿದೆಯೆ ಉಡುಪಿಗೆ 'ಉಡುಪಿ' ಎಂಬ ಹೆಸರು ಬರಲು (ನಕ್ಷತ್ರಗಳ ಅಧಿಪತಿ) ಚಂದ್ರನಿಲ್ಲಿ ತಪ್ಪಸಿಗೆ ಕಾರಣವಂತೆ. ಉಡುಪಿಯ ಅಜ್ಜರಕಾಡಿನಲ್ಲಿ ಚಂ ಕುಳಿತು ತಪಸ್ಸು ಮಾಡಿದ್ದೇ ಉಡುಪಿ ಎಂಬ ಮೂಲವೆನ್ನುವುದು ವೈದಿಕರು ಕಟ್ಟಿದಂತ ವಾಸ್ತವವಾಗಿ ಅದು ತುಳುವಿನ "ಒಡಿಪು" ಎಂದ ಹಾಗು ದಿವಂಗತ ಹಿರಿಯ ಪತ್ರಕರ್ತ ವಡ್ಡರ್ಸೆ ಶೆಟ್ಟರ ಊರಾದ ವಡ್ಡರ್ಸೆಯಂತೆ ವಡ್ಡ ಜನ ಈ ಒಡಿಪು ಹೆಸರು ಬಂದಿರಬಹುದೆಂದು ಸ ಒಂದು ಅಂದಾಜು. ಇದಕ್ಕೆ ಪೂರಕವಾಗಿ ಕಲ್ಲುಕುಟಿಗ ದಕ್ಷಿಣದಲ್ಲಿ ಕಲ್ಕುಡ ಎಂದು ಕರೆ ಹಾಗು ಅವನ ತಂಗಿ ಕಲ್ಕುರ್ತಿ ಹೆಸರಿನ ಇಲ್ಲಿ



ದೈವಗಳು ಸ್ಥಳೀಯವಾಗಿ ಬಲು ಪ್ರಸಿದ್ಧ. ಅ ಕಲ್ಲು ಕೆಲಸಮಾಡುವ ವಡ್ಡ ಜನಾಂಗದ ಪ್ರಾಧಾನ್ಯತೆಯನ್ನೇ ತೋರಿಸುತ್ತದೆ.

ಅದೇರೀತಿ ಪಕ್ಕದ ನಾರಾವಿಯಲ್ಲಿ ಸ್ವತಃ ಧರೆಗಿಳಿದು ಬಂದು ಯಾರ ಬಳಿಯೋ "ನಾ ಎಂದನಂತೆ. ಅದೇ "ನಾರಾವಿ" ಎನಿಸಿತಂತೆ. ಕಟ್ಟುವ ಕಥೆಗಳು ಎಷ್ಟು ಮಜವಾಗಿದ ಯಾವುದೋ ಅಮೆರಿಕನ್ನಿಬ್ಬರು 1969 ರ ಮೇಲೆ ಕಾಲಿಟ್ಟು ಸುದ್ದಿ ಮಾಡಿದರೆ ಉಡುಪಿ ಸ್ವತಃ ಚಂದ್ರನೇ ಕಾಲಿಟ್ಟಿದ್ದನಂತೆ. ನೀಲ್ ಆ ಎಲ್ಲಿದ್ದೀಯಪ್ಪಾ?!!

ಈ ಸೂರ್ಯಚಂದ್ರರ ಕಥೆ ಬಿಡಿ. ಊರುಗಳಿಗೆ ಸಂಬಂಧಿಸಿ ಇಲ್ಲಿನ ರಕ್ಕಸರ ಕ ಬರವೇ ಇಲ್ಲ. ಹಳ್ಳಿಹಳ್ಳಿಯಲ್ಲೂ ರಕ್ಕಸರಿದ್ದಾರೆ ಎಲ್ಲಾ ದೇಗುಲಗಳೂ ರಕ್ಕಸರ ಕಾಟದ ಹೊಂದಿವೆ. ಊರೂರಿನ ಸ್ಥಳಪುರಾಣಗಳ ಕಟ್ಟು ರಕ್ಕಸರೆಂದರೆ ಅದೇನೋ ಒಂಥರಾ ಪ್ರೀತಿ. ಅ ರಕ್ಕಸನೀಗ ಕರಾವಳಿಯಲ್ಲಿ ಅವತರಿಸಿದ್ದಾ 'ಟಿಪ್ಪಾಸುರ'. ಮಂಗಳೂರಿನಲ್ಲಿ 'ಬಿಕರ್ನಕ ಊರೊಂದಿದೆ. ಕೆಲ ದಿನದ ಹಿಂದೆ ಪು ಊರಿನ ಇಂತಹ ಕಟ್ಟುಕಥಾ ಪ್ರವೀಣರು ಬಿಕರ್ನಕಟ್ಟೆಗೆ "ಪುದು ಪುದು ಅರ್ಥಂಗಳ್" ಹೋಗಿದ್ದರು. ಈ ಬಿಕರ್ನ ಕಟ್ಟೆ ಅಂದರೆ ಅದು 'ಭೀಕರ ನ್ಯಾಯದ ಕಟ್ಟೆ' ಅಂತೆ.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು
lankesh70@rediffmail.co
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬ
ಪ್ರತಿಕ್ರಿಯೆಗಳನ್ನು 9980331427
ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳು



ವನು 80,000 ಕ್ರಿಶ್ಚಿಯನ್ನರನ್ನ ಅನ್ಯಾಯವಾಗಿ ದಂತಹ ಆ ಭೀಕರ ನ್ಯಾಯದ ಕಟ್ಟೆಯೇ ನಂತರ ಕಟ್ಟೆ ಆಯಿತೆನ್ನುವುದು ಅವರ ವಾದ. ಅದಕ್ಕುತ್ತರವಾಗಿ ಗರೊಬ್ಬರು (ರಾಮಕೃಷ್ಣ ಎ ಕಿಲ್ಲೆ ಮಂಗಳೂರು, ರ್ತ ಭಾರತಿ, ಡಿ.1) ತುಳುನಾಡಿನ ಪ್ರಸಿದ್ಧ ಪದವಾದ ರ್ನಮಿ' ಎಂಬ ಶಬ್ದ (ಉದಾ ಮಾರ್ನಮಿ ವೇಷ = ರಾತ್ರಿ ವೇಷ) ದಿಂದ ಹುಟ್ಟಿದ ಮಾರ್ನಮಿ ಕಟ್ಟೆ ಸುರ ಕಿರಿಸ್ತಾನರ 'ಮಾರಣ ಹೋಮ' ಮಾಡಿದ ಇರಬಹುದೇ ಎಂದು ಪ್ರಶ್ನಿಸಿ ಭೀಕರ ನ್ಯಾಯದ ಮವನ ಬೆವರಿಳಿಸಿದ್ದರು.

ರಾಮ, ಕೃಷ್ಣ ಗಣಪ, ಶಂಕರನೇ ಮೊದಲಾದ ವೈದಿಕ ರುಗಳು ಚಾಲ್ತಿಗೆ ಬರುವ ಮೊದಲು ಇಲ್ಲಿನ ಜನಿವಾಸಿಗಳ ಹೆಸರು ಯಾರೂ ಕೇಳಿರದಂತಹ ವಿಭಿನ್ನ ಳಿಂದ ಕೂಡಿತ್ತು. ಅಂತಹವುಗಳಲ್ಲೊಂದು ಈ 'ಬಿಕ್ರು' ಉಲ್ಲೇಖಿಸಿರುವ ಕಲ್ಕುರ್ಟಿ–ಕಲ್ಕುಡರ ಸೋದರನ ಹೆಸರೂ ದೇ). ಇಂತಹ ಬಿಕ್ರು ಹೆಸರಿನವನ ಕಟ್ಟೆಯೇ ಬಿಕರ್ನ ಅನ್ನಿಸಿರಬಹುದೆಂದು ಪ್ರಖ್ಯಾತ ಹಿರಿಯ ಜಾನಪದ ಜ್ಞರಾದ ಅಮೃತ ಸೋಮೇಶ್ವರರ ಅಭಿಪ್ರಾಯ.

ರಾವಳಿಯಲ್ಲಿ ನಾಯಿಗಳಿಗೆ ಇಡುವ ಹೆಸರುಗಳಲ್ಲಿ ಟೀಪ್ರ ಬುದು ಕೂಡ ಒಂದು. ಇದು ಬ್ರಿಟಿಷರ ಕೊಡುಗೆ. ನಾಯಿಗಳಿಗೆ ಕನಸಲ್ಲಿಯೂ ತಮ್ಮನ್ನು ಕಾಡಿದಂತಹ ನ ಹೆಸರಿಟ್ಟುಕೊಂಡು ವಿಕೃತ ಸಂತೋಷ ಪಡುವವರು ದು. ಅಂತಹ ಬ್ರಿಟಿಷರೇ ಅರ್ಧಸತ್ಯವೊಂದಕ್ಕೆ ಉತ್ಪ್ರೇಕ್ಷೆಯನ್ನು ಈ ರೀತಿಯ 80,000 ಕೊಲೆಯ ಪುಕಾರು ಹಬ್ಬಿಸಿದ್ದರು. ಮಂಗಳೂರಿನಲ್ಲಿ ಹೆಚ್ಚಾಗಿ ಇದ್ದಂತ ಕ್ರಿಶ್ಚಿಯನ್ನರೆಂದರೆ ನಿಘಂಟಿನ ಕೊಡುಗೆ ನೀಡಿದ ಜರ್ಮನಿ ಮೂಲದ ರ ಬಳಗದವರು. ಯಾವ ದಾಖಲೆಗಳೂ ಆ ಕಾಲದಲ್ಲಿ 00 ಕ್ರಿಶ್ಚಿಯನ್ನರು ಮಂಗಳೂರಿನಲ್ಲಿದ್ದರು ಎಂದು ಸದಿದ್ದರೂ ಟಿಪ್ಪು ಮಾತ್ರ ಮಂಗಳೂರಲ್ಲಿ 80,000 ನ್ನರನ್ನ ಕರಾವಳಿಗರ ಭೂತ ನೇಮದಲ್ಲಿ ಕೋಳಿಗಳ ಯುವಂತೆ ಕಡಿದು ಬಿಸಾಕಿದ್ದು ಮಾತ್ರ ವಿಚಿತ್ರವಾಗಿದೆ. ಹಲವಾರು ಸ್ವತಂತ್ರ ದೇಶಗಳಿದ್ದ 1947ರ ಪೂರ್ವ ದಲ್ಲಿ (47ರ ನಂತರವೂ ಗೋವಾ ಹಾಗು ಮನಂತವರು ಪ್ರತ್ಯೇಕವಾಗೇ ಇದ್ದರು) ದಕ್ಷಿಣದಲ್ಲಿನ ಾಗಿ ಮೆರೆದ ಟಿಪ್ಪು ಸಮುದ್ರ ಮಾರ್ಗದ ಮೂಲಕ ದೇಶಗಳೊಂದಿಗೆ ಸಂಬಂಧವನ್ನು ಬೆಸೆದಿದ್ದ. ಹಾಗಾಗಿ ಳೂರಿನ ಸಮುದ್ರ ತೀರದ ಮೇಲೆ ಆತನಿಗೆ ಕಣ್ಣಿತ್ತೇ ತು ಮಂಗಳೂರಿನ ಸುಲ್ತಾನ್ ಬತ್ತೇರಿ ಹಾಗು ಗಡಿಯ ಜಮಾಲಾಬಾದ್ ಕೋಟೆ (ಗಡಾಯಿ ಕಲ್ಲು) ಕರಾವಳಿಯಲ್ಲಿ ಆತ ಬಿಟ್ಟುಹೋದ ರಾಜಕೀಯ ಹತ್ವಾಕಾಂಕ್ಷೆಯ ಕುರುಹುಗಳು ಅಷ್ಟಾಗಿ ಕಾಣಸಿಗದು. ಗಡಿಯ ಬಳಿಯ ಬೃಹತ್ ಏಕಶಿಲಾ ಪರ್ವತದಲ್ಲಿ ರಲ್ಲಿ ಟಿಪ್ಪು ಸುಲ್ತಾನ್ ತನ್ನ ತಾಯಿ ಜಮಾಲಾಬಿಯ ಲ್ಲಿ ಕೋಟೆ ಕಟ್ಟಿದನಾದರೂ ಐದು ವರ್ಷಗಳ ಬಳಿಕ ಬ್ರಿಟಿಷರ ವಶವಾಯಿತು).

ವಿಚಿತ್ರವೆಂದರೆ ಧರ್ಮಸ್ಥಳದಂತಹ ಧರ್ಮಸ್ಥಳದ ಹುಟ್ಟಿಗೆ ಟಿಪ್ಪುವೇ ಕಾರಣ ಎಂಬುವುದು. ಟಿಪ್ಪು ಕರಾವಳಿಯಲ್ಲಿ ಹೋದ ದೊಡ್ಡ ಐತಿಹಾಸಿಕ ಸಂಗತಿ ಇದಾದರೂ ಜನಮಾನಸದಿಂದ ಮರೆಯಾಗಿ ಇಲ್ಲದ ಸಂಗತಿಗಳೇ ಪ್ರಾಶಸ್ತ್ಯ ಪಡೆದಿವೆ. ಕರಾವಳಿಯ ಪ್ರಖ್ಯಾತ ಇತಿಹಾಸ ಶೋಧಕರಾಗಿದ್ದ ಪಿ.ಗುರುರಾಜ ಭಟ್ಟರೇ ತಮ್ಮ ತುಳುನಾಡು ಶೋಧನಾ ಗ್ರಂಥದಲ್ಲಿ ಈ ಸಂದರ್ಭವನ್ನು ಸ್ಪಷ್ಟವಾಗಿ ಬಿಸಿದ್ದಾರೆ. ಬೆಳ್ತಂಗಡಿಯಲ್ಲಿರುವ ಟಿಪ್ಪುವಿನ ಜಮಾಲಾಬಾದ್ ದ ಕುಡುಮ(ಈಗಿನ ಧರ್ಮಸ್ಥಳ)ವನ್ನು ಬ್ರಿಟಿಷರು ಟಿಪ್ಪುವಿನ ತಮಗೆ ಸಹಾಯ ನೀಡಿದ ಕುಮಾರ ಹೆಗ್ಗಡೆ ಎಂಬವನಿಗೆ ಳಿಯಾಗಿ ಬಿಟ್ಟುಕೊಟ್ಟಿದ್ದರು ಎಂದು 'ತುಳು ನಾಡು' ಕ ಪುಟ ಸಂ 94 ರಲ್ಲಿ ಉಲ್ಲೇಖವಿದೆ. ತುಳುನಾಡು ಾಸ ಎಂದಾಕ್ಷಣ ಮೊದಲಿಗೆ ನೆನಪಾಗುವ ಹೆಸರೇ ಈ ರಾಜ ಭಟ್ಟರದ್ದು. ತಮ್ಮ ಬ್ರಾಹ್ಮಣ ಸಮುದಾಯದ ತ್ಮಕ ಐತಿಹಾಸಿಕ ಅಂಶಗಳನ್ನೂ ಎಲ್ಲೂ ಮುಚ್ಚಿಡದೇ ರುವ ಪೂರ್ವಾಗ್ರಹಗಳಿಲ್ಲದ ಇವರ ಸಂಶೋಧನಾ ಗಳು ಎಲ್ಲರಿಂದಲೂ ಪ್ರಶಂಸಿಸಲ್ಪಟ್ಟಿವೆ.

ರಾವಳಿಯಲ್ಲಾಗಲೀ ಎಲ್ಲೇ ಆಗಲಿ ಬಲ ಹಾಗು ಂಥೀಯರಲ್ಲಿ ಇರುವಂತಹ ಅತಿದೊಡ್ಡ ಸೈದ್ಧಾಂತಿಕ ವೆಂದರೆ ಬಲಪಂಥೀಯರು ಆತ ಎಂತಹ ವೈರಿಯೇ ರೂ ಸೈದ್ಧಾಂತಿಕ ವಿರೋಧಿಯೊಂದಿಗೆ ಎದುರಾಗುವ ರುದಲ್ಲಿ ತನ್ನ ಎಲ್ಲಾ ತರಹದ ಅನುಕೂಲಕರ ಗಳನ್ನು ಒಂದುಗೂಡಿಸಿಕೊಂಡು ಬಲಶಾಲಿಯಂತೆ ಗ್ಗಿದರೆ ಎಡಪಂಥೀಯ ಸಮಾನ ದುಃಖಿಗಳು ಈ ಒಂದಾಗುವುದು ಅತೀ ವಿರಳ. ಅವರವರ ಯುವುದರಲ್ಲೇ ಇವರುಗಳು ಮುಳುಗಿದ್ದು ಅಥವ ಪ್ರತಿಕ್ರಿಯೆ ತೋರಿ ವಿರೋಧಿಗಳಿಗೆ ತಮ್ಮ ಕೆಲಸ ಸುಲಭವಾಗುವಂತೆ ಇವರು ಸಹಕರಿಸಿದರೆ, ಈ ವಾದಿ ಬಲಪಂಥೀಯರು ಟಿಪ್ಪು ಕುರಿತ ಜಗಳದಲ್ಲಿ ಕಥೆಯನ್ನ ಸೃಷ್ಟಿಸಿ, ಕ್ರಿಶ್ಚಿಯನ್ನರನ್ನು ತಮ್ಮತ್ತ ಕೊಳ್ಳಲು ಹೋಗುತ್ತಾರೆ. ಇದೇ ಅಲ್ಲವೇ ಚಾಣಾಕ್ಷ) ನ ಕುಟಿಲತೆಯ ಚೇಸ್ಸ್‌ನ ತಾಕತ್ತು,

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಕಲ್ಪನಾಲೋಕದಲ್ಲಿ ಹೊಸ ಮನ್ವಂತರ

ಓದಿದ್ದು ವೈದ್ಯಕೀಯ ಕ್ಷೇತ್ರ. ಅದೂ ಅಮೆರಿಕದಲ್ಲಿ. ಕನಸು ಅರಸಿ ಬಂದಿದ್ದು ಕರ್ನಾಟಕಕ್ಕೆ. ಮೂಲತಃ ಕನ್ನಡಿಗರೇ ಆಗಿರುವ ಕಲ್ಪನಾ ಪಂಡಿತ್, ತಮ್ಮ ವೃತ್ತಿಯ ಜತೆಗೆ ಬಣ್ಣದ ನಂಟು ಬೆಳೆಸಿಕೊಂಡಿದ್ದಾರೆ. ಬಾಲಿವುಡ್ ಮತ್ತು ಸ್ಯಾಂಡಲ್‌ವುಡ್‌ಗೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ಹಲವು ದಶಕಗಳ ಹಿಂದೆ 'ನಂಜನಗೂಡು ಹಲ್ಲುಪುಡಿ' ಎಂದೇ ಜನಪ್ರಿಯವಾಗಿದ್ದ ಆಯುರ್ವೇದದ ಹಲ್ಲುಪುಡಿಯನ್ನು ತಯಾರಿಸಿ ಮಾರಾಟ ಮಾಡುತ್ತಿದ್ದ ವೈದ್ಯ ಬಿ.ವಿ.ಪಂಡಿತ್ ಇವರ ಅಜ್ಜ. ಎಂಭತ್ತರ ದಶಕದಲ್ಲಿ ಈಕೆ 'ಮಿಸ್ ಕರ್ನಾಟಕ' ಮತ್ತು 'ಮಿಸ್ ಇಂಡಿಯಾ' ಪ್ರಶಸ್ತಿಗಳನ್ನು ಗೆದ್ದಿದ್ದರೂ ಆಕೆ ಅಮೆರಿಕದ ಪ್ರಜೆ ಎಂಬ ಕಾರಣಕ್ಕೆ ಅವುಗಳನ್ನು ಹಿಂದೆ ಪಡೆಯಲಾಗಿತ್ತು. ಹಾಗೆಯೇ ಈಕೆಯ ಸಹೋದರಿ ಲಕ್ಷ್ಮಿ ಪಂಡಿತ್ ಕೂಡ ಮಿಸ್ ಇಂಡಿಯಾ ಸ್ಪರ್ಧೆಯಲ್ಲಿ ಮೊದಲನೆ ರನ್ನರ್ ಅಪ್ ಆಗಿದ್ದರೂ ಆಕೆ ತಮ್ಮ ವಯಸ್ಸು ಮತ್ತು 'ಕನ್ಯತ್ವ' ಕುರಿತು ತಪ್ಪು ಮಾಹಿತಿ ನೀಡಿದ್ದರು ಎಂಬ ಕಾರಣಗಳಿಗೆ ಲಕ್ಷ್ಮಿಯಿಂದಲೂ ಪ್ರಶಸ್ತಿಯನ್ನು ವಾಪಸ್ ಪಡೆಯಲಾಗಿತ್ತು. ಇಲ್ಲಿ ಕಲ್ಪನಾ ಪಂಡಿತ್ ತಮ್ಮ ಕನಸುಗಳ ಕುರಿತು ಮಾತನಾಡಿದ್ದಾರೆ.



ಅಪ್ಪಟ ಕನ್ನಡದ ಹುಡುಗಿ ಕಲ್ಪನಾ ಪಂಡಿತ್. ಹುಟ್ಟಿದ್ದು ಅಮೆರಿಕದಲ್ಲಾದರೂ, ಇವರ ತಂದೆ ತಾಯಿ ಮೂಲತಃ ಮೈಸೂರಿನವರು. ಹೀಗಾಗಿ ಮೈಸೂರಿನ ನಂಟೂ ಇದೆ. ಸದ್ಯ ಇವರು ಅಮೆರಿಕದ ನಲವತ್ತಕ್ಕೂ ಹೆಚ್ಚು ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಟ್ರಾವೆಲಿಂಗ್ ಡಾಕ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ. ಜತೆಗೆ ಬಾಲಿವುಡ್ ಮತ್ತು ಸ್ಯಾಂಡಲ್‌ವುಡ್‌ನಲ್ಲೂ ತಮ್ಮ ನಟನಾ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿದ್ದಾರೆ. ವೃತ್ತಿಜೀವನ ಮತ್ತು ಬಣ್ಣದ ಬದುಕಿನ ಬಗ್ಗೆ ಕಲ್ಪನಾ ಹಂಚಿಕೊಂಡಿದ್ದಾರೆ.

** ಪಂಡಿತರಿಗೆ ಅಮೆರಿಕ ನಂಟು ಹೇಗೆ ಬೆಳೆಯಿತು?*

ಅಪ್ಪ ಮೂಲತಃ ಭಾರತದವರು. ಅಮೆರಿಕದಲ್ಲಿ ಡಾಕ್ಟರ್ ಆಗಿದ್ದರು. ಹಾಗಾಗಿ ನಾನು ಅಮೆರಿಕದಲ್ಲಿ ಹುಟ್ಟಿದೆ. ಆನಂತರ ಅಪ್ಪ ಭಾರತಕ್ಕೆ ಶಿಫ್ಟ್ ಆದರು. ನನಗೆ ಅಲ್ಲಿಂದ ಬರೋಕೆ ಆಗಲಿಲ್ಲ, ಯಾಕೆಂದರೆ, ನಾನು ಓದಿಕೊಂಡಿರುವ ವೈದ್ಯಕೀಯ ಕೋರ್ಸ್‌ಗೆ ಇಲ್ಲಿ ಕೆಲಸ ಮಾಡಲು ಅವಕಾಶವಿಲ್ಲ. ಹೀಗಾಗಿ ಅಮೆರಿಕದಲ್ಲೇ ಉಳಿದುಕೊಂಡೆ.

** ಭಾರತದಲ್ಲಿ ಇಲ್ಲದ ಕೋರ್ಸ್ ಯಾವುದದು? ನೀವು ಏನು ಓದಿಕೊಂಡಿದ್ದೀರಿ?*

ನಾನು ಎಮರ್ಜನ್ಸಿ ಮೆಡಿಸನ್ ಓದಿಕೊಂಡಿದ್ದೇನೆ. ಆಗಷ್ಟೇ ಅಪಘಾತವಾದವರಿಗೆ ಕೊಡುವ ಟ್ರೀಟ್‌ಮೆಂಟ್. ತುಂಬಾ ಬೇಡಿಕೆ ಇರುವ ಕೋರ್ಸ್ ಅದು. ಇದನ್ನು ಮುಗಿಸುವುದು ಸುಲಭವಲ್ಲ. ಹೀಗಾಗಿ ಕೋರ್ಸ್ ಮುಗಿಸಿದವರು ಕಡಿಮೆ ಸಿಗುತ್ತಾರೆ. ನಾನೇ ಆಗ ನಲವತ್ತಕ್ಕೂ ಹೆಚ್ಚು ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದೆ. ಭಾರತದಲ್ಲಿ ಅದು ಇಲ್ಲ. ಹೀಗಾಗಿ ಅನಿವಾರ್ಯವಾಗಿ ನಾನು ಅಲ್ಲೇ ಕೆಲಸ ಮಾಡಬೇಕಾಯಿತು.

** ಭಾರತದ ಬಗ್ಗೆ ನಿಮಗೆ ಸೆಳೆತ ಬೆಳೆದದ್ದು ಹೇಗೆ?*

ಮೊದಲಿನಿಂದಲೂ ನನಗೆ ಸೆಳೆತವಿದೆ. ಅಮೆರಿಕದಲ್ಲಿ ಬೆಳೆದಿದ್ದರೂ, ನನಗೆ ಮೈಸೂರು ಗೊತ್ತು. ಅಪ್ಪ ಅಮ್ಮ ಇರೋದು ಮೈಸೂರಿನಲ್ಲೇ. ಅಲ್ಲದೇ ಆಗಾಗ್ಗೆ ಬರುತ್ತೇನೆ. ನನಗೆ ಚೆನ್ನಾಗಿಯೇ ಕನ್ನಡ ಮಾತಾಡಲು ಬರುತ್ತದೆ. ಅಲ್ಲದೇ ನಟಿಯಾಗಬೇಕು ಅನ್ನುವುದು ನನ್ನ ಬಹುದಿನಗಳ ಆಸೆ.

ಹೀಗಾಗಿ ವೀಕೆಂಡ್‌ನಲ್ಲಿ ಫ್ಲೈಟ್ ಹತ್ತಿಕೊಂಡು ಭಾರತಕ್ಕೆ ಬರುತ್ತಿದ್ದೆ. ಡಾಕ್ಟರ್ ವೃತ್ತಿಯಲ್ಲಿ ಬಿಜಿ ಆಗಿದ್ದರಿಂದ, ದೊಡ್ಡ ಪಾತ್ರಗಳನ್ನು ಒಪ್ಪಿಕೊಳ್ಳುವುದಕ್ಕೆ ಕಷ್ಟವಾಗುತ್ತಿತ್ತು. ಹೀಗಾಗಿ ಪುಟ್ಟಪುಟ್ಟ ಪಾತ್ರಗಳನ್ನು ಮಾಡುತ್ತಾ ಬಂದೆ.

** ನಿಮ್ಮ ಸಿನಿಮಾ ಜರ್ನಿ ಬಗ್ಗೆ ನೆನಪು ಮಾಡಿಕೊಳ್ಳುವುದಾದರೆ?*

'ಗಜಗಾಮಿನಿ' ಮತ್ತು 'ಮೋಕ್ಷ' ಚಿತ್ರದಿಂದ ನನ್ನ ಕೆರಿಯರ್ ಶುರುವಾಯಿತು. ನನ್ನ ಮೊದಲ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದು ಖ್ಯಾತ ಚಿತ್ರಕಾರ ಎಂ.ಎಫ್.ಹುಸೇನ್. ಈ ಚಿತ್ರದಲ್ಲಿ ಮಾಧುರಿ ದೀಕ್ಷಿತ್, ಶಬಾನಾ ಆಜ್ಮಿ, ನಾಸಿರುದ್ದೀನ್ ಷಾ, ಶಾರು ಖಾನ್, ಶಿಲ್ಪಾ ಶಿರೋಡಕರ್ ಮುಂತಾದ ಹೆಸರಾಂತ ಕಲಾವಿದರು ಇದ್ದಾರೆ. ನಿಜಕ್ಕೂ ಇದು ನನಗೆ ಸಿಕ್ಕ ಗೌರವ. ಇಂತಹ ಕಲಾವಿದರ ಜತೆ ನಟಿಸುತ್ತಲೇ ಸಾಕಷ್ಟು ಕಲಿತೆ. ಅಲ್ಲದೇ 'ಮೋಕ್ಷ'ದಲ್ಲಿ ಮನೀಷಾ ಕೋಯಿರಾಲಾ ಜೊತೆ ತೆರೆ ಹಂಚಿಕೊಂಡೆ. 'ಪಿತಾ' ಸಿನಿಮಾದಲ್ಲಿ ಸಂಜಯ್ ದತ್ತ ಜತೆ ಡಾನ್ಸ್ ಮಾಡಿದ್ದೇನೆ.

** ನೀವು ಸುಂದರವಾಗಿದ್ದರೂ ಆಗ ನಿಮಗೆ ನಾಯಕಿಯ ಪಾತ್ರಕ್ಕೆ ಯಾಕೆ ಕರೆಯಲಿಲ್ಲ.*

ನಾಯಕಿಯಾಗಿ ನಟಿಸಲು ಸಾಕಷ್ಟು ಆಫರ್ ಬಂದವು. ಆದರೆ ನನ್ನ ಉದ್ದೇಶ ಜನರ ಜೀವ ಉಳಿಸೋದು ಆಗಿತ್ತು. ಬಿಡುವು ಸಿಕ್ಕರೆ ಮಾತ್ರ ಬಣ್ಣ ಹಚ್ಚುತ್ತಿದ್ದೆ. ನಾಯಕಿಯಾದರೆ ವೈದ್ಯಕೀಯ ವೃತ್ತಿಯನ್ನೇ ಬಿಡಬೇಕಾಗಿ ಬರಬಹುದು ಎಂದರಿತು ನಾನೇ ಒಪ್ಪಿಕೊಳ್ಳಲಿಲ್ಲ. ಹಾಗಾಗಿ ಗೆಸ್ಟ್ ಅಪೀರಿಯನ್ಸ್, ಡ್ಯಾನ್ಸ್ ನಂಬರ್‌ನಲ್ಲಿ ಕಾಣಿಸಿಕೊಂಡೆ. ಆನಂತರ ಪೂರ್ಣ ಪ್ರಮಾಣದಲ್ಲಿ ನಾಯಕಿಯಾಗಿ ನಟಿಸಿದ್ದೇನೆ. ಅದು ನನ್ನದೇ ನಿರ್ಮಾಣದಲ್ಲಿ ಮೂಡಿಬಂದ ಚಿತ್ರ. ಅದಕ್ಕಾಗಿ ಸಮಯ ಹೊಂದಿಸೋಕೆ ಹರಸಾಹಸ ಪಟ್ಟಿದ್ದೇನೆ.

** 'ಹೌಸ್ ಆಫ್ ಪಂಡಿತ್' ಎಂಬ ನಿಮ್ಮದೇ ಪ್ರೊಡಕ್ಷನ್ ಹೌಸ್ ಶುರು ಮಾಡಬೇಕು ಅಂತ ಅನಿಸಿದ್ದು ಯಾಕೆ?*

2010ರ ನಂತರ ನಟನೆಯನ್ನೇ ವೃತ್ತಿಯನ್ನಾಗಿ ಸ್ವೀಕರಿಸಬೇಕು ಅನಿಸಿತು. ಪುಟ್ಟ ಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರೂ ಅವುಗಳು ಖುಷಿ ಕೊಟ್ಟವು. ಅಲ್ಲದೇ ಜನರೂ ಅದನ್ನು ಇಷ್ಟ ಪಟ್ಟರು. ಹೀಗಾಗಿ ನನ್ನದೇ ಪ್ರೊಡಕ್ಷನ್ ಕಂಪನಿ ಶುರು ಮಾಡಿದೆ. ಅದರ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವ ಸಿನಿಮಾ ಮಾಡಬೇಕು ಅಂತ ಬಯಸಿದೆ. ವೈದ್ಯೆಯಾಗಿ ಮತ್ತು ಸಿನಿಮಾ ತಾರೆಯಾಗಿ ಸದಾ ಸಮಾಜದ ಬಗ್ಗೆಯೇ ಚಿಂತಿಸಬೇಕು ಅನ್ನುವುದು ಪ್ರೊಡಕ್ಷನ್ ಹೌಸ್ ಹಿಂದಿನ ಉದ್ದೇಶವಾಗಿತ್ತು. ನಾನು ಹಾಗೆಯೇ ಮಾಡುತ್ತಿದ್ದೇನೆ. ನಮ್ಮ ಬ್ಯಾನರ್‌ನಲ್ಲಿ ಮೂಡಿಬಂದ ಮೊದಲ ಸಿನಿಮಾ ಸಂದೀಪ್ ಮಲಾನಿ ನಿರ್ದೇಶನದಲ್ಲಿ 'ಜೋಜೋ ಲಾಲಿ'. ಆನಂತರ 'ಜಾನ್‌ಲೇವಾ 555' ಚಿತ್ರ ಮಾಡಿದೆ.

** ಮೈಸೂರು ಹೇಗನಿಸುತ್ತದೆ? ಸಾಂಸ್ಕೃತಿಕ ನಗರಿ ನಿಮ್ಮ ಕಣ್ಣಿಗೆ ಹೇಗೆ ಕಾಣುತ್ತಿದೆ?*

ರಜೆ ಸಿಕ್ಕರೆ ಸಾಕು ಮೈಸೂರಿಗೆ ಓಡಿಬರುತ್ತೇನೆ. ಬ್ಯೂಟಿಫುಲ್ ಸಿಟಿ ಇದು. ನಾನು ಜಗತ್ತಿನಾದ್ಯಂತ ಸಂಚಾರ ಮಾಡಿದ್ದೇನೆ. ಆದರೆ, ಇಂತಹ ಊರು ಇನ್ನೊಂದು ಸಿಗೋಕೆ ಸಾಧ್ಯವೇ ಇಲ್ಲ. ಟೆಕ್ನಾಲಜಿ ಬಂದಿದೆ. ಡೆವಲಪ್‌ಮೆಂಟ್ ಆಗ್ತಾ ಇದೆ. ಎಲ್ಲದಕ್ಕಿಂತ ಹೆಚ್ಚಾಗಿ ಮೈಸೂರಿನಲ್ಲಿರುವ ಶಾಂತವಾದ ವಾತಾವರಣ ಇನ್ನೆಲ್ಲೂ ಸಿಗದು.

** ಕನ್ನಡದ ಬಗೆಗಿನ ನಿಮ್ಮ ಅಭಿಮಾನವನ್ನು ಹೇಗೆ ವ್ಯಕ್ತಪಡಿಸುತ್ತೀರಿ?*

ನಾನು ಪ್ರೊಡಕ್ಷನ್ ಹೌಸ್ ಮಾಡಿದ್ದು ಕೇವಲ ಬಾಲಿವುಡ್ ಸಿನಿಮಾ ಮಾಡುವುದಕ್ಕಲ್ಲ. ಕನ್ನಡದಲ್ಲೂ ಚಿತ್ರಗಳನ್ನು ಮಾಡಿದ್ದೇನೆ. 'ಜೋಜೋ ಲಾಲಿ' ಕನ್ನಡದಲ್ಲಿ ಮೂಡಿಬಂದ ಕಿರುಚಿತ್ರ. ಇದು ಏಡ್ಸ್ ಕುರಿತು ಜಾಗೃತ ಮೂಡಿಸುವಂಥದ್ದು. ಅಲ್ಲದೇ ಕನ್ನಡದಲ್ಲೇ ಮತ್ತಷ್ಟು ಚಿತ್ರಗಳನ್ನು ನಿರ್ಮಾಣ ಮಾಡಲಿದ್ದೇನೆ. ನಾನು ಏನೇ ಕೆಲಸ ಮಾಡಿದರೂ, ಅಲ್ಲೊಂದು ಕನ್ನಡದ ಬಗೆಗಿನ ಕಾಳಜಿ ಇದ್ದೇ ಇರುತ್ತದೆ. ■



Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 30-12-2015 RNI No. KA



ಭಟ್ಟರನ್ನೇ ಬೆಚ್ಚಿ ಬೀಳಿಸಿದ ವೆಂಕಟ್


ಸೋಲಿನಿಂದ ಕಂಗೆಟ್ಟಿರುವ ನಿರ್ದೇಶಕ ಯೋಗರಾಜ್ ಭಟ್ ಈಗ ಗೆಲುವಿನ ಕುದುರೆ ಏರಲು ಭಾರೀ ಕಸರತ್ತು ನಡೆಸಿದ್ದಾರೆ. ಅದರಲ್ಲೂ ಅವರ ನಿರ್ಮಾಣದ ಚಿತ್ರಗಳು ಸಾಲುಸಾಲು ನೆಲಕಚ್ಚಿದ್ದರಿಂದ ಅವರ ಬ್ಯಾಂಕ್ ಬ್ಯಾಲೆನ್ಸ್ ಕೂಡ ಕಡಿಮೆ ಆಗುತ್ತಿದೆ. ಈಗ ಬಿಡುಗಡೆ ಹಂತದಲ್ಲಿರುವ 'ಪರಪಂಚ' ಕೈ ಕೊಟ್ಟರೆ ಭಟ್ಟರು ಮತ್ತಷ್ಟು ಖಾಲಿ ಆಗುತ್ತಾರೆ. ಹೀಗಾಗಿ ಅದರ ಗೆಲುವಿಗೆ ಹಲವು ತಂತ್ರಗಳನ್ನು ಹೆಣೆಯುತ್ತಿದ್ದಾರೆ. ಅದರಲ್ಲಿ ಹುಚ್ಚ ವೆಂಕಟ್‌ನಿಂದ ಹಾಡು ಹಾಡಿಸಿದ್ದೂ ಒಂದು.

ವೆಂಕಟ್ ಇದ್ದರೆ ಟಿಆರ್‌ಪಿಗೆ ಬರವಿಲ್ಲ ಅನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಅದು ಭಟ್‌ರಿಗೂ ಗೊತ್ತಿದೆ. ಹೀಗಾಗಿಯೇ ಸಂಗೀತದ ಜ್ಞಾನವಿಲ್ಲದಿದ್ದರೂ ವೆಂಕಟ್‌ನಿಂದ 'ಪರಪಂಚ' ಚಿತ್ರಕ್ಕೆ ಹಾಡಿಸಿದ್ದಾರೆ. ಸದಾ ಕಾವೇರಿಯ ಧ್ಯಾನದಲ್ಲೇ ಇರುವ ವೆಂಕಟ್, ಈ ಚಿತ್ರಕ್ಕಾಗಿ ಪಕ್ಕಾ ಪೋರ್ಕಿ ಹಾಡು ಹಾಡಿದ್ದಾರೆ. ಅದಕ್ಕಾಗಿ ವೆಂಕಟ್ ಬರೋಬ್ಬರಿ ಲಕ್ಷ ರೂಪಾಯಿ ಬೇಡಿಕೆ ಇಟ್ಟಿದ್ದಾರೆ.

ಭಟ್ಟರ ಚಿತ್ರವೆಂದರೆ ವೆಂಕಟ್ ಉಚಿತವಾಗಿ ಹಾಡುತ್ತಾರೆ ಅನ್ನುವ ನಿರೀಕ್ಷೆ ನಿರ್ದೇಶಕರದ್ದಾಗಿತ್ತು. ವೆಂಕಟ್ ಕೂಡ ಏನೂ ಕೇಳದೇ ಹಾಡಿದರು. ಆನಂತರ ಅವರು ದುಡ್ಡಿನ ಬೇಡಿಕೆ ಇಟ್ಟಿದ್ದಾರೆ. ಈ ಮೊತ್ತ ಕೇಳಿದ ಭಟ್ ಬೆಚ್ಚಿ ಬಿದ್ದಿದ್ದಾರೆ. ಕೊನೆಗೆ ತಮಗೆ ತಾವೇ ಸಮಾಧಾನಿಸಿಕೊಂಡು ಅರ್ಧದಷ್ಟು ದುಡ್ಡು ಕೊಟ್ಟಿದ್ದಾರೆ. ಕೊಟ್ಟಿರುವ ದುಡ್ಡಿಗೆ ಸಮನಾಗಿ ಪ್ರಚಾರವನ್ನೂ ಪಡೆದಿದ್ದಾರೆ.

ಡಬ್ಬಲ್‌ರೋಲ್‌ನಲ್ಲಿ ಶಿವಣ್ಣ

ಹಲವು ಅಚ್ಚರಿಗಳಿಗೆ ಕಾರಣ ಆಗುತ್ತಿದ್ದಾರೆ ಶಿವರಾಜ್‌ಕುಮಾರ್. ಸದ್ಯ ಅವರ ಕೈಯಲ್ಲಿ ಹದಿನೈದಕ್ಕೂ ಹೆಚ್ಚು ಚಿತ್ರಗಳಿವೆ. ಅದರಲ್ಲಿ ಆರ್.ಚಂದ್ರು ನಿರ್ದೇಶನದ 'ಬಾದ್‌ಷಾ' ಕೂಡ ಒಂದು. ಈ ಸಿನಿಮಾದಲ್ಲಿ ಶಿವಣ್ಣ ಡಬ್ಬಲ್ ರೋಲ್ ನಿರ್ವಹಿಸುತ್ತಿದ್ದಾರೆ. ಅದರಲ್ಲೊಂದು ನೆಗೆಟಿವ್ ಶೇಡ್ ಪಾತ್ರ ಅನ್ನುವುದು ಮತ್ತೊಂದು ವಿಶೇಷ. ಈಗಾಗಲೇ ಶಿವರಾಜ್‌ಕುಮಾರ್ ದ್ವಿಪಾತ್ರದಲ್ಲಿ ನಟಿಸಿದ್ದಾರೆ. ಆದರೆ, ಇದೇ ಮೊದಲ ಬಾರಿಗೆ ನೆಗಟಿವ್ ಶೇಡ್ ಇರುವ ಪಾತ್ರ ಮಾಡುತ್ತಿದ್ದಾರಂತೆ. ಅದಕ್ಕಾಗಿ ನಿರ್ದೇಶಕ ಆರ್.ಚಂದ್ರು ತೆಲುಗಿನಿಂದ ಚಿತ್ರಕತೆಗಾರರನ್ನು ಕರೆತಂದಿದ್ದಾರೆ. 'ಬಾಹುಬಲಿ' ಸೇರಿದಂತೆ ಹಲವು ಹಿಟ್ ಚಿತ್ರಗಳಿಗೆ ಕೆಲಸ ಮಾಡಿರುವ ರೈಟರ್ಸ್ 'ಬಾದ್‌ಷಾ'ಗಾಗಿ ಚಿತ್ರಕತೆ ಹೆಣೆಯುತ್ತಿದ್ದಾರೆ.



ಚಂದ್ರು ಮತ್ತು ಶಿವರಾಜ್‌ಕುಮಾರ್ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ಎರಡನೇ ಸಿನಿಮಾ ಇದು. ಈ ಹಿಂದೆ ಇದೇ ಜೋಡಿಯು 'ಮೈಲಾರಿ' ಸಿನಿಮಾ ಮಾಡಿತ್ತು. ಆ ಚಿತ್ರ ಶತದಿನ ಪ್ರದರ್ಶನ ಕಂಡಿತ್ತು. ಆಗ ಸೋಲಿನ ಸುಳಿಯಲ್ಲಿ ಸಿಲುಕಿದ್ದ ಶಿವಣ್ಣನಿಗೆ ರಿಲೀಫ್ ಕೂಡ ನೀಡಿತ್ತು.

'ಬಾದ್‌ಷಾ' ಚಿತ್ರದ ಬಗ್ಗೆ ಹಲವು ಮಾಹಿತಿ ಕೊಡುತ್ತೇನೆ, ಆದರೆ, ಶಿವರಾಜ್‌ಕುಮಾರ್ ಪಾತ್ರದ ಬಗ್ಗೆ ಸದ್ಯ ಏನೂ ಹೇಳಲಾರೆ ಅಂತಾರೆ ನಿರ್ದೇಶಕರು. ಮಾರ್ಚ್‌ನಿಂದ ಶೂಟಿಂಗ್ ಶುರು. ಗುರುಕಿರಣ್ ಸಂಗೀತ ಸಂಯೋಜನೆಯಲ್ಲಿ ಹಾಡುಗಳು ಮೂಡಿಬರಲಿವೆ.

ಸುಮನ್ ಈಗ ಶಾರದಾಮಣಿ

ಕರ್ನಾಟಕದಿಂದ ದೂರವಿದ್ದರೂ ಸುಮನ್ ರಂಗನಾಥ್ ಕನ್ನಡದಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುತ್ತಲೇ ಇರುತ್ತಾರೆ.. ಅದರಲ್ಲೂ ವಿಜಯ ಪ್ರಸಾದ್ ಸಿನಿಮಾಗಳಲ್ಲಿ ಇವರು ಖಾಯಂ ಕಲಾವಿದರು. ವಿಜಯ ಪ್ರಸಾದ್ ಯಾವುದೇ ಕತೆ ಬರೆಯಲಿ ಅದರಲ್ಲಿ ಸುಮನ್‌ಗೊಂದು ಪಾತ್ರ ಇಟ್ಟಿರುತ್ತಾರೆ. ಕಾರಣ ಈ ನಿರ್ದೇಶಕರ ಚಿತ್ರಗಳಲ್ಲಿಯ ಪಾತ್ರಗಳು ಕೊಂಚ ಪೋಲಿಯಾಗಿರುತ್ತವೆ. ಇಂತಹ ಪಾತ್ರಕ್ಕೆ ಸುಮನ್ ಹೇಳಿಮಾಡಿಸಿದ ನಟಿ.

ವಿಜಯ ಪ್ರಸಾದ್ ನಿರ್ದೇಶನದಲ್ಲಿ ಮೂಡಿಬಂದ 'ಸಿದ್ಲಿಂಗು' ಚಿತ್ರದಲ್ಲಿ ಸುಮನ್ ಅಂಡಾಳಮ್ಮ ಪಾತ್ರ ನಿರ್ವಹಿಸಿದ್ದರು. ಈ ಪಾತ್ರ ಟೀಚರ್ ಆಗಿದ್ದರೂ ಅದು ಪಡ್ಡೆ ಹುಡುಗರನ್ನು ನಿದ್ದೆಗೆಡಿಸಿತ್ತು. ಅಲ್ಲದೇ ಸ್ವತಃ ಯೋಗೀಶ್ ಕೂಡ ಡಿಸ್ಟರ್ಬ್ ಆಗಿದ್ದರು. ಹೀಗಾಗಿ 'ನೀರ್‌ದೋಸೆ' ಚಿತ್ರದಲ್ಲೂ ನಿರ್ದೇಶಕರು ಸುಮನ್‌ಗಾಗಿ ಒಂದು ಪಾತ್ರ ಸೃಷ್ಟಿಸಿದ್ದಾರೆ. ಅದು ನೃತ್ಯಗಾರ್ತಿಯ ಪಾತ್ರವಾಗಿದ್ದೂ ಅಲ್ಲೊಂದು ತುಂಟತನವಿದೆಯಂತೆ. ಅದೆಂತಹ ತುಂಟತನ ಅನ್ನುವುದನ್ನು ಸಿನಿಮಾದಲ್ಲೇ ನೋಡಬೇಕು.





ಹದಗೆಟ್ಟಿದೆ ಕುಚ್ಚು ಗೆಳೆಯರ

ಸುದೀಪ್ ಮತ್ತು ದರ್ಶನ್ ಕುಚ್ಚು ಗೆಳೆಯರು ಎಲ್ಲರಿಗೂ ಗೊತ್ತಿದೆ. ಆದರೆ ಅವರಿಬ್ಬರ ಸ್ನೇಹ ಸದ್ಯ ಹ... ಬಹುತೇಕರಿಗೆ ಗೊತ್ತಿಲ್ಲ. ಹೌದು ಸುದೀಪ್‌ನಿಂದ ದರ್ಶನ್ ... ಕಾರಣ 'ರನ್' ಚಿತ್ರ. ಈ ಚಿತ್ರದಲ್ಲಿ ಇಬ್ಬರು ನಾಯಕಿ... ಒಬ್ಬರಿಗೆ ಅವಕಾಶ ಕೊಡದಂತೆ ದರ್ಶನ್ ಕೇಳಿಕೊಂಡಿದ್ದರು. ... ಹಾಗೆ ಮಾಡಲಿಲ್ಲ, ದರ್ಶನ್ ಯಾರನ್ನು ಬೇಡ ಅಂತ ಹೇ... ನಾಯಕಿಗೆ ಸುದೀಪ್ ಮಣೆ ಹಾಕಿದರು. ಹೀಗಾಗಿ ಅವರಿಬ್ಬ... ಶುರುವಾಗಿತ್ತು. ಅದೀಗ ಪೂರಾ ಹರಿದುಹೋಗಲು ... ನಿರ್ದೇಶನದ ಸಿನಿಮಾವಂತೆ.

ಪ್ರೇಮ್ ನಿರ್ದೇಶನದಲ್ಲಿ ಮೂಡಿಬರಲಿರುವ ... ಶಿವರಾಜ್‌ಕುಮಾರ್ ಮತ್ತು ಸುದೀಪ್ ಒಟ್ಟಾಗಿ ನಟಿಸು... ಯಶ್‌ಗೆ ಸುದೀಪ್ ಇನ್ನಷ್ಟು ಹತ್ತಿರವಾಗಿದ್ದಾರೆ. ಈ ಎಲ್ಲಾ ಬೆ... ಸುದೀಪ್ ಅವರಿಂದ ದರ್ಶನ್ ದೂರವಾಗಿದ್ದಾರೆ ಎನ್ನಲ... ಕಾರಣಕ್ಕೆ 'ಕಲಿ' ಸಿನಿಮಾದ ಟೈಟಲ್ ಲಾಂಚ್‌ಗೂ ದ... ಅನ್ನುವ ಸುದ್ದಿ ಇದೆ. ಗಾಂಧಿನಗರದಲ್ಲಿ ಇನ್ನೂ ಹಲ... ಸುದ್ದಿಗಳು ಗಿರಕಿ ಹೊಡೆಯುತ್ತಿವೆ. ಅದಕ್ಕೆ ದರ್ಶನ್ ... ಉತ್ತರಿಸಬೇಕು.

ಜಗ್ಗೇಶ್ ಮಾತಿಗೆ ...

'ಕಲಿ' ಸಿನಿಮಾದ ಟೈಟಲ್ ಬಿಡುಗಡೆ ವೇಳೆಯಲ್ಲಿ ಜಗ್ಗೇಶ್ ಆಡಿದ ಮಾತಿಗೆ ಸ್ವತಃ ಶಿವರಾಜ್‌ಕುಮಾರ್ ಬೇಸರ ವ್ಯಕ್ತಪಡಿಸಿದ್ದಾರೆ. ಪರಭಾಷೆಯ ಸಿನಿಮಾದವರನ್ನು ಓಡಿಸಬೇಕು, ಅವರಿಗೆ ನೆಲೆ ಇಲ್ಲದಂತೆ ಮಾಡಬೇಕು ಎಂಬಿತ್ಯಾದಿ ಜಗ್ಗೇಶ್ ಮಾತುಗಳಿಗೆ ಆಕ್ಷೇಪಿಸಿದ್ದಾರೆ.

'ಕಲಿ' ಸಿನಿಮಾದ ಸಮಾರಂಭಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸಿದ್ದರು. ಅಂಬರೀಶ್, ರಾಕ್‌ಲೈನ್ ವೆಂಕಟೇಶ್ ಸೇರಿದಂತೆ ಉದ್ಯಮದ ಹಲವು ಮಂದಿ ಭಾಗವಹಿಸಿದ್ದರು.

ಇದರಿಂದ ಉತ್ಸಾಹಗೊಂಡ ಜಗ್ಗೇಶ್ ಕೊಂಚ ಹೆಚ್ಚೇ ಮಾತನಾಡಿದರು. ಶಿವರಾಜ್‌ಕುಮಾರ್ ಮತ್ತು ಸುದೀಪ್ ಅವರನ್ನು ಕಾಲೆಳೆಯುತ್ತಲೇ, ಪರಭಾಷೆಯ ಸಿನಿಮಾ ರಂಗದ ಬಗ್ಗೆಯೂ ಮಾತಾಡಿದರು. ಕನ್ನಡದಲ್ಲಿ ಕನ್ನಡ ಚಿತ್ರಗಳಿಗೆ ಪ್ರಾಶಸ್ತ್ಯ ಕೊಡಿ ಅನ್ನುತ್ತಾ ಬೇರೆ ಸಿನಿಮಾ ರಂಗದ ಬಗ್ಗೆ ಟೀಕೆಯನ್ನು ಮಾಡಿದರು. ಆನಂತರ ಪತ್ರಿಕೆಯೊಂದರ ಜತೆ ಮಾತನಾಡಿದ ಶಿವರಾಜ್‌ಕುಮಾರ್ ತಮ್ಮ ಬೇಸರವನ್ನು ವ್ಯಕ್ತಪಡಿಸಿದ್ದಾರೆ. ಎಲ್ಲರೂ ನಮ್ಮವರೆ, ಎಲ್ಲರನ್ನೂ ಪ್ರೀತಿಸೋಣ ಅಂದಿದ್ದಾರೆ.



ಲಂಕೇಶ್ ಮೀಡಿಯಾದ ಗೈಡ್ ಪ್ರಕಾಶನದ ನೂತನ ಕೊ...



ಗೈಡ್ ಸ್ಪರ್ಧಾ ಮಾಸಿಕ
ಡಿಸೆಂಬರ್ 2015ರ
ಹೊಸ ಸಂಚಿಕೆ
ಈಗ ಎಲ್ಲೆಡೆ ಲಭ್ಯ

ಆಯಾ ಪರೀಕ್ಷೆಗೆ
ನಿಗದಿತ ಸಿಲಬಸ್‌ಗೆ
ಅನುಗುಣವಾಗಿ ಸಮೃದ್ಧ
ಅಧ್ಯಯನ ಸಾಮಗ್ರಿ
ಸರಳ ಕೈಪಿಡಿ
ಸೀಮಿತ ಪ್ರತಿಗಳು ಮಾತ್ರ







ರಾಜ್ಯಾದ್ಯಂತ ಎಲ್ಲಾ ಪುಸ್ತಕ ಅಂಗಡಿಗಳಲ್ಲಿ ಲಭ್ಯ ಪ್ರತಿಗಳಿಗಾಗಿ: 080-26676427/98803...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 2667...
Fax : 26604536, E-mail :lankesh70@rediffmail.com